ಅನುದಿನದ ಅಂತರಗಂಗೆ : ಕಥನಕ್ರಮದ ವಿನ್ಯಾಸ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ನೋಂದಣಿ ಸಂಖ್ಯೆ: ೧೫೦೧೦೧೦೩೦೦೧

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೫-೧೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಪೀಠಿಕೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ಮಹತ್ವ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಪೀಠಿಕೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ಮಹತ್ವ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಪೀಠಿಕೆ

ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಆತ್ಮಕಥನವೂ ಒಂದು. ತಮ್ಮ ಜೀವನ ಕಥೆಯನ್ನು ಕುರಿತು ತಾವೇ ನಿರೂಪಿಸಿಕೊಳ್ಳುವುದು 'ಆತ್ಮಕಥೆ' ಎನಿಸಿಕೊಳ್ಳುತ್ತದೆ. ಕನ್ನಡದಲ್ಲಿ ಅನೇಕ ಸಾಹಿತಿಗಳು, ವಿಜ್ಞಾನಿಗಳು, ಸಿನಿಮಾ ನಟರು, ಕಲಾವಿದರು, ಹೋರಾಟಗಾರರು, ನಾಟಕಗಾರರು, ರಾಜಕಾರಣಿಗಳು, ಸಂಗೀತಗಾರರು, ವೈದ್ಯರು, ಪತ್ರಕರ್ತರು, ಗೃಹಿಣಿಯರು, ಶಿಕ್ಷಕರು ಹೀಗೆ ಹಲವಾರು ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಅನೇಕರು ತಮ್ಮ ಆತ್ಮಕತೆಗಳನ್ನು ಬರೆದುಕೊಂಡಿದ್ದಾರೆ. ಎಲ್ಲರ ಜೀವನ ಕಥೆಯೂ ಆತ್ಮಕಥೆಗಳೇ ಆದರೂ ಅವು ಏಕಪ್ರಕಾರವಾಗಿ ಇರುವುದಿಲ್ಲ. ನಿರೂಪಣ ಕ್ರಮದಲ್ಲಿ ಅನೇಕ ಭಿನ್ನತೆಗಳನ್ನು ಕಾಣಬುಹುದು. ಪ್ರತಿಯೊಬ್ಬರ ಜೀವನ ವಿಧಾನವೂ ಬೇರೆಬೇರೆ ಆಗಿರುವುದರಿಂದ ನಿರೂಪಣೆಯಲ್ಲಿ ಭಿನ್ನತೆ ಸಹಜವಾಗಿರುತ್ತದೆ. ಇದನ್ನು ಎರಡು ರೀತಿಯಲ್ಲಿ ಗುರುತಿಸಬಹುದು. ಒಂದು, ಜೀವನ ಕ್ರಮದಲ್ಲಿನ ಭಿನ್ನತೆ. ಎರಡು, ನಿರೂಪಣೆಯಲ್ಲಿನ ಭಿನ್ನತೆ. ಪ್ರತಿಯೊಬ್ಬರ ಜೀವನ ಕ್ರಮವೂ ಭಿನ್ನತೆಯಿಂದ ಕೂಡಿರುವಂತೆ ಅವರವರ ನಿರೂಪಣೆಯ ಕ್ರಮವೂ ಭಿನ್ನತೆಯಿಂದ ಕೂಡಿರುತ್ತದೆ.

ತೊಂಬತ್ತರ ದಶಕದಿಂದೀಚೆಗೆ ದಲಿತ ಬಂಡಾಯೋತ್ತರ ಸಾಹಿತ್ಯದಲ್ಲಿ ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿದರು. ಇದು ಸುದೀರ್ಘವಾದ ಸಾಹಿತ್ಯ ಪರಂಪರೆಯಲ್ಲಿ ಇರುವ ಪುರುಷ ಪ್ರಾಬಲ್ಯವನ್ನು ತೋರಿಸುತ್ತದೆ. ಮಹಿಳೆಯರ ಬರವಣಿಗೆ ಪ್ರಾರಂಭದಲ್ಲಿ ಕಥೆ, ಕಾದಂಬರಿ ಮತ್ತು ಕವನಗಳಿಗೆ ಸೀಮಿತವಾಗಿತ್ತು. ಆದರೆ ನಂತರದಲ್ಲಿ ಪುರುಷರಂತೆ ಮಹಿಳೆಯರೂ ಕೂಡ ಆತ್ಮಕಥೆಗಳನ್ನು ಬರೆಯಲು ಪ್ರಾರಂಭಿಸಿದರು. ಆದರೆ ಅದು ತೀರಾ ವಿರಳವಾಗಿತ್ತು. ಸಾಂಪ್ರದಾಯಿಕ ಸಾಮಾಜಿಕ ಚೌಕಟ್ಟಿನಲ್ಲಿ ಪುರುಷರು ಯಾವುದೇ ಕಟ್ಟಳೆಗಳಿಲ್ಲದೆ ತಮ್ಮ ಖಾಸಗೀ ಜೀವನವನ್ನು ಬರವಣಿಗೆಯಲ್ಲಿ ನಿರೂಪಿಸುತ್ತಿದ್ದರು. ಆದರೆ ಹೊಸದಾಗಿ ಬರೆಯಲು ತೊಡಗಿದ ಮಹಿಳೆಯರಿಗೆ ಇದು ಸುಲಭದ ಮಾತಾಗಿರಲಿಲ್ಲ. ನಂತರದ ದಿನಗಳಲ್ಲಿ ಮಹಿಳೆಯರು ಈ ಸಾಂಪ್ರದಾಯಿಕ ಚೌಕಟ್ಟನ್ನು ಮುರಿದು ತಾವೂ ಕೂಡ ತಮ್ಮ ಖಾಸಗೀ ಬದುಕನ್ನು ಆತ್ಮಕಥೆಯ ರೂಪದಲ್ಲಿ ನಿರೂಪಿಸಲು ತೊಡಗಿದರು. ಆದರೂ ಕನ್ನಡದ ಮಟ್ಟಿಗೆ ಹೇಳುವುದಾದರೆ ಲೇಖಕಿಯರು ಬರೆಯುತ್ತಿರುವ ಆತ್ಮಕಥೆಗಳು ತೀರಾ ವಿರಳವಾಗಿವೆ.

ಮಹಿಳೆಯರು ಆತ್ಮಕಥೆಗಳನ್ನು ಬರೆಯಲು ಪ್ರಾರಂಭಿಸಿದ್ದು ತೀರಾ ಇತ್ತೀಚೆಗೆ ಎನ್ನಬಹುದು. ಆದರೂ ಗಣನೀಯ ಪ್ರಮಾಣದಲ್ಲಿ ಆತ್ಮಕತೆಗಳು ಬಂದಿರುವುದನ್ನು ಗಮನಿಸಬಹುದು. ವಿವಿಧ ಕ್ಷೇತ್ರಗಳಿಂದ ಬಂದ ಮಹಿಳೆಯರು ತಮ್ಮ ಅನುಭವಗಳನ್ನು ಆತ್ಮಕಥೆಯ ರೂಪದಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಇದರಲ್ಲಿ ಲೇಖಕಿಯರು, ಹೋರಾಟಗಾರ್ತಿಯರು, ಸಿನಿಮಾ ನಟಿಯರು, ರಂಗಭೂಮಿ ಕಲಾವಿದೆಯರು, ಗೃಹಿಣಿಯರು, ಹೀಗೆ ವಿಭಿನ್ನ ಹಿನ್ನಲೆ ಮತ್ತು ವಿವಿಧ ರಂಗಗಳಲ್ಲಿ ಕೆಲಸ ಮಾಡಿದವರೂ ಸೇರಿದ್ದಾರೆ. ಆದರೆ ಆ ಎಲ್ಲಾ ಆತ್ಮಕಥೆಗಳು ಏಕರೂಪತೆಯಿಂದ ಕೂಡಿಲ್ಲ ಎಂಬುದನ್ನು ಗಮನಿಸಬಹುದು. ಅನುಭವಗಳು ಭಿನ್ನವಾದಂತೆ ಅವುಗಳಲ್ಲಿ ತನ್ನದೇ ಆದ ವಿಶಿಷ್ಟತೆ, ವಿಭಿನ್ನತೆ ಇರುವುದನ್ನು ಕಾಣಬಹುದು. ಕನ್ನಡದಲ್ಲಿ ಇದುವರೆಗೆ ಬೆರಳೆಣಿಕೆಯಷ್ಟು ಮಹಿಳಾ ಆತ್ಮಕಥೆಗಳು ಬಂದಿವೆ. ಅಲ್ಲದೆ ಹಲವು ಆತ್ಮಕಥೆಗಳು ಬೇರೆ ಭಾಷೆಗಳಿಂದಲೂ ಅನುವಾದವಾಗಿ ಕನ್ನಡಕ್ಕೆ ಬಂದಿವೆ. ಆತ್ಮಕಥೆಗಳನ್ನು ಕುರಿತು ಅಧ್ಯಯನ ಮಾಡುವಾಗ ಇವುಗಳನ್ನೂ ಗಮನಿಸಬೇಕಾಗುತ್ತದೆ.

ಕನ್ನಡದಲ್ಲಿ ಮಹಿಳೆಯರು ಬರೆದ ಆತ್ಮಕತೆಗಳನ್ನು ನೋಡುವುದಾದರೆ, ಅನುಪಮ ನಿರಂಜನ ಅವರ 'ನೆನಪು ಸಿಹಿಕಹಿ', ದು.ಸರಸ್ವತಿ ಅವರ 'ಈಗೇನ್‌ಮಾಡಿರಿ?', ಸಾರಾ ಅಬುಬಕರ್ ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು', ಅನ್ನಪೂರ್ಣ ಸಾಗರ ಅವರ 'ನನ್ನ ಬದುಕಿನ ಪುಟಗಳಿಂದ', ಚಿಂದೋಡಿ ಲೀಲಾ ಅವರ 'ಸ್ವಗತ, ಚಿಂದೋಡಿ ಲೀಲಾ', ಬಿ. ಜಯಮ್ಮ ಅವರ 'ಅಭಿನೇತ್ರಿ', ನಾಗರತ್ನಮ್ಮ ಅವರ 'ಮರಿಯಮ್ಮನಹಳ್ಳಿಯ ರಂಗಸಿರಿ', ನೀಲಾ.ಕೆ. ಅವರ 'ಬದುಕು ಬಂಧೀಖಾನೆ', ಮಾಲತಿ ಮೈಸೂರು ಅವರ 'ತೆರೆ ಸರಿದಾಗ', ವಾಸಂತಿ ಪಡುಕೋಣೆ ಅವರ 'ಜೀವನ ಹೋರಾಟ', ತಾರಿಣಿ ಅವರ 'ಮಗಳು ಕಂಡ ಕುವೆಂಪು', ಲೀಲಾ ಕಾರಂತರ 'ಸ್ವಾಮಿ ಮತ್ತು ನಾನು' ಇತ್ಯಾದಿ. ಹಾಗೆಯೇ ಅನ್ಯ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡ ಮಹಿಳಾ ಆತ್ಮಕತೆಗಳನ್ನು ನೋಡುವುದಾದರೆ, ಗೋದಾವರಿ ಪುರುಳೇಕರ್ ಅವರ 'ಮಾನವ ಎಚ್ಚೆತ್ತಾಗ', ಪ್ರತಿಮಾ ಬೇಡಿ ಅವರ 'ಟೈಮ್ ಪಾಸ್', ಕಮಲಾದಾಸ್ ಅವರ 'ನನ್ನಕಥೆ', ಕಮಲಾಸುರಯ್ಯಾ ಅವರ 'ಬಾಲ್ಯದ ನೆನಪುಗಳು', ಮಾಧವಿ ದೇಸಾಯಿ ಅವರ 'ಕುಣಿಯೇ ಘುಮಾ', ಅಮೃತಾ ಪ್ರೀತಂ ಅವರ 'ರಸೀದಿ ಟಿಕೇಟು', ಸುನೀತಾ ದೇಶಪಾಂಡೆ ಅವರ 'ಬಾಳು ಸೊಗಸಾದರೂ' ಮೊದಲಾದವುಗಳನ್ನು ಪ್ರಮುಖವಾಗಿ ಗುರುತಿಸಬಹುದು.

ಆತ್ಮಕಥೆ ಬರೆಯುವುದು ಸವಾಲಿನ ಕೆಲಸವೇ ಸರಿ. ಅದರಲ್ಲೂ ಮಹಿಳೆಯರು ತಮ್ಮ ಜೀವನ ಕತೆಯನ್ನು ಅಭಿವ್ಯಕ್ತಪಡಿಸುವುದು ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸರಳವಾದುದಲ್ಲ. ಇಷ್ಟಕ್ಕೂ ಆತ್ಮಕಥೆಯನ್ನು ಬರೆಯುವುದು ಯಾಕೆ ಎಂಬ ಪ್ರಶ್ನೆ ಏಳುವುದು ಸಹಜ. ಹಾಗೆಯೇ ಆತ್ಮಕತೆಯಲ್ಲಿ ಏನನ್ನು ಬರೆಯಬೇಕು, ಎಷ್ಟನ್ನು ಬರೆಯಬೇಕು, ಎಲ್ಲಿಂದ ಆರಂಭ ಮಾಡಬೇಕು, ಎಲ್ಲಿಗೆ ಮುಕ್ತಾಯ ಮಾಡಬೇಕು ಮುಂತಾದ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. 'ಆತ್ಮಕಥೆ' ಎಂಬುದು

ಆತ್ಮ ಪ್ರಶಂಸೆಯೂ ಆಗದೆ, ಅನ್ಯರ ನಿಂದನೆಯೂ ಆಗದೆ, ಸಹಜೀವಿಗಳ ತೇಜೋವಧೆಗೂ ಎಳೆಸದೆ, ತಮ್ಮ ಬದುಕನ್ನು ನಿರೂಪಿಸುವುದು ಹೇಗೆ ಎಂಬುದು ಒಂದು ಬಗೆಯ ಸವಾಲು. ಇದಕ್ಕಾಗಿ ನೆನಪುಗಳ ಆಯ್ಕೆ ಮತ್ತು ನಿರಾಕರಣೆಗಳ ಕುರಿತು ಪ್ರತಿಯೊಬ್ಬರಿಗೂ ಒಂದೊಂದು ನಿಲುವು ಇದ್ದೇ ಇರುತ್ತದೆ. ಈ ಆಯ್ಕೆ ಮತ್ತು ನಿರಾಕರಣೆಗಳೇ ಆತ್ಮಕಥೆ ಬರೆಯುವಲ್ಲಿನ ಬಿಕ್ಕಟ್ಟು ಮತ್ತು ಸವಾಲುಗಳನ್ನು ತೋರಿಸಿಕೊಡುತ್ತವೆ. ಅಲ್ಲದೆ ಇದು ಆತ್ಮಕಥೆಗೆ ಇರಬಹುದಾದ ನೈಜತೆಯ ಪ್ರಶ್ನೆಯನ್ನು ಸೂಕ್ಷ್ಮವಾಗಿ ತೋರಿಸಿಕೊಡುತ್ತದೆ.

ಆತ್ಮಕಥೆಯನ್ನು ಯಾವಾಗ ಬರೆಯಬೇಕು ಎಂಬುದು ಅದನ್ನು ಕುರಿತಾದ ಮತ್ತೊಂದು ಪ್ರಮುಖವಾದ ಪ್ರಶ್ನೆ. ಸಾಮಾನ್ಯವಾಗಿ ಬದುಕಿನ ಉತ್ತರಾರ್ಧದಲ್ಲಿ ಆತ್ಮಕಥೆ ಬರೆಯುವವರೇ ಹೆಚ್ಚು. ಕಾರಣ, ತಮ್ಮ ಬದುಕಿನ ಸವಿ ನೆನಪುಗಳು, ಕಷ್ಟಸುಖಗಳು, ಏರಿಳಿತಗಳು, ಬದುಕು ಸಾಗಿ ಬಂದ ದಾರಿ ಮೊದಲಾದ ಅಂಶಗಳನ್ನು ದಾಖಲಿಸುವುದು ಸುಲಭವಾಗುತ್ತದೆ ಎಂಬುದು. ಯಾವುದಕ್ಕೂ ಬದುಕು ಮತ್ತು ಮನಸ್ಸು ಪಕ್ವವಾದಾಗಲೆ ಆತ್ಮಕತೆ ಹೆಚ್ಚು ಗಟ್ಟಿಯಾಗುತ್ತದೆ ಎಂಬುದು ಇಲ್ಲಿನ ಸಾಮಾನ್ಯ ತಿಳುವಳಿಕೆಯಾಗಿರುತ್ತದೆ. ಕೆಲವರು ತಮ್ಮ ಆತ್ಮಕಥೆಗಳನ್ನು ಇಳಿಗಾಲದಲ್ಲಿ ಬರೆದರೆ, ಕೆಲವರು ಸ್ನೇಹಿತರ ಒತ್ತಾಸೆಯ ಮೇರೆಗೆ ಇಳಿಗಾಲಕ್ಕೆ ಪೂರ್ವದಲ್ಲಿಯೇ ಬರೆದಿರುವುದನ್ನು ಕಾಣಬಹುದು. ಇನ್ನು ಕೆಲವರು ತಮ್ಮ ನಡುವಯಸ್ಸಿನಲ್ಲಿ ಆತ್ಮಕಥೆಗಳನ್ನು ಬರೆದುಕೊಂಡಿದ್ದಾರೆ. ಯಾರೂ ಎಲ್ಲವನ್ನು ಹೇಳಿಕೊಳ್ಳುವುದಿಲ್ಲ. ಹೇಳಿಕೊಳ್ಳಬೇಕೆಂದು ನಿರೀಕ್ಷಿಸುವುದು, ಆದೇಶಿಸುವುದು ಸಾಧ್ಯವೂ ಇಲ್ಲ. ಬರೆಯುವ ಮತ್ತು ಓದುವ ಇಬ್ಬರಿಗೂ ಇದರ ಉದ್ದೇಶ ಅಥವಾ ಸಾಧಿತವಾಗಬೇಕಾದ ಅಂಶ ಸ್ಪಷ್ಟವಾಗಿದ್ದರೆ ಮಾತ್ರ ಅಂತಹ ಬರಹ ಮತ್ತು ಓದು ಸಾರ್ಥಕವಾಗುತ್ತದೆ.

ಒಂದು ಆತ್ಮಕಥನದ ಓದು ಎಂದರೆ, ಅದು ಓರ್ವ ವ್ಯಕ್ತಿ ಮತ್ತು ಅವರ ಬದುಕಿನೊಂದಿಗೆ ನಡೆಸುವ ಅನುಸಂಧಾನ. ಇತರರ ಹೋರಾಟದ ಬದುಕನ್ನು ಅರಿತಾಗ ನಮಗೆ ನಾವು ಎದುರಿಸುವ ವರ್ತಮಾನದ ಕಷ್ಟಗಳು ಹಗುರವಾಗಿ ಕಾಣಬಹುದು. ನಮ್ಮ ಇಕ್ಕಟ್ಟುಗಳಿಂದ ಬಿಡುಗಡೆ ಹೊಂದಲು ಬೆಳಕಿಂಡಿಗಳನ್ನು ತೆರೆಯಬಹುದು. ಸಮಸ್ಯೆಗಳ ಸರ್ವಸಮಾನತೆ ಮತ್ತು ಆಳ–ವಿಸ್ತಾರಗಳ ಅರಿವನ್ನು ನೀಡಬಹುದು. ಸಂಘಟನೆಯ ಅಗತ್ಯವನ್ನು ಮನವರಿಕೆ ಮಾಡಬಹುದು. ಮನಸ್ಸಿಗೆ ಮುದ ನೀಡಬಹುದು ಮತ್ತು ಇಂತಹ ಹಲವಾರು ಸಾಧ್ಯತೆಗಳನ್ನು ಮುಂದಿಡಬಹುದು. ಇದು ಆತ್ಮಕಥೆಯನ್ನು ಓದುವ ಓದುಗರ ಅಭಿರುಚಿ ಮತ್ತು ದೃಷ್ಟಿಕೋನವನ್ನು ಅವಲಂಭಿಸಿರುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಗಂಡಸರೇ ಶ್ರೇಷ್ಠ ಎಂಬ ಕಲ್ಪನೆಯು ತುಂಬಾ ಹಿಂದಿನಿಂದಲೂ ಬಳಕೆಯಲ್ಲಿದೆ. ಹೆಣ್ಣು ಕೇವಲ ಗಂಡಿನ ಅಡಿಯಾಳಾಗಿ ಇರಬೇಕು. ಅವಳು ಯಾವುದೇ ದೃಷ್ಟಿಯಿಂದ ಗಂಡಿಗೆ ಸಮಾನಳಲ್ಲ. ಅವಳು ಅಬಲೆ. ಮುಂತಾದ ಪೂರ್ವಗ್ರಹಗಳು ಸಮಾಜದಲ್ಲಿ ಇರುವಾಗ ಹೆಣ್ಣು ತಾನೂ ಕೂಡ ಶ್ರೇಷ್ಠ, ಸಬಲೆ ಎಂದು ಹೇಳಿಕೊಳ್ಳಲು ಪ್ರಾರಂಭ

ಮಾಡಿದಾಗ ಆತ್ಮಕಥೆಗಳು ಹೊರಬಂದವು. ಆತ್ಮಕತೆ ಬರೆಯುವವರು ತಾವು ಹಾದು ಬಂದ ಸುಖದ ದಿನಗಳ ಜೊತೆ ಎದುರಾದ ಕಷ್ಟಗಳನ್ನು ನಿರ್ವಹಿಸಿದ ಬಗೆ, ಅದನ್ನು ಮೀರಿದ ಬಗೆಯನ್ನು ಯಾವುದೇ ಸಂಕೋಚವಿಲ್ಲದೆ ಮುಚ್ಚುಮರೆಯಿಲ್ಲದೆ, ಧೈರ್ಯದಿಂದ ದಿಟ್ಟತನದಿಂದ ತೆರೆದಿಟ್ಟಲ್ಲಿ ಅಂತಹ ಆತ್ಮಕಥೆಗಳು ಓದುಗರಿಗೆ ಒಂದು ಬಗೆಯ ಧೈರ್ಯ, ಸಮಸ್ಯೆಯನ್ನು ಎದುರಿಸುವ ಗಟ್ಟಿತನ, ವೈಯಕ್ತಿಕ ಮಿತಿಗಳನ್ನು ಮೀರುವ ಸಾಧ್ಯತೆಯನ್ನು ತಿಳಿಸಿಕೊಡುತ್ತವೆ. ಇಂತಹ ಆತ್ಮಕಥೆಗಳು ಅಥವಾ ಒಬ್ಬರ ಬದುಕು ಇನ್ನೊಬ್ಬರಿಗೆ ಮಾರ್ಗದರ್ಶನವಾಗುವಲ್ಲಿ ಸಫಲವಾಗುತ್ತವೆ. ಈ ರೀತಿಯ ಹಲವಾರು ಪ್ರಶ್ನೆಗಳನ್ನು ಇಟ್ಟುಕೊಂಡು ಕನ್ನಡದ ಪ್ರಮುಖ ಕವಯತ್ರಿಯಾದ ಪ್ರತಿಭಾ ನಂದಕುಮಾರ್ ಅವರ ಆತ್ಮಕಥೆ 'ಅನುದಿನದ ಅಂತರಗಂಗೆ' ಕೃತಿಯನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಕನ್ನಡದಲ್ಲಿ ಬಹು ಚರ್ಚಿತವಾದ ಇಂತಹ ಆತ್ಮಕಥೆಯನ್ನು ಕುರಿತು ಅಧ್ಯಯನ ಮಾಡಲು ನಿರ್ದಿಷ್ಟ ಉದ್ದೇಶಗಳು ಇರುತ್ತವೆ. ಅವುಗಳನ್ನು ಈ ಮುಂದಿನಂತೆ ನೋಡಬಹುದು.

೧.೧. ಅಧ್ಯಯನದ ಉದ್ದೇಶ

ಆತ್ಮಕಥೆಗಳು ಲೇಖಕರ ತೀರಾ ವೈಯಕ್ತಿಕವಾದ ಅಭಿವ್ಯಕ್ತಿಯಾದರೂ ಅವುಗಳು ಆ ವೈಯಕ್ತಿಕತೆಯನ್ನು ಮೀರಿ ಸಾಮೂಹಿಕ ಅಭಿವ್ಯಕ್ತಿಯಾಗುತ್ತವೆ. ಮಹಿಳಾ ಆತ್ಮಕಥೆಗಳಿಗೆ ಈ ಮಾತು ಹೆಚ್ಚು ಅನ್ವಯವಾಗುತ್ತದೆ. ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣೊಬ್ಬಳು ತನ್ನ ನಿಜಜೀವನದ ವೃತ್ತಾಂತವನ್ನು ಅಭಿವ್ಯಕ್ತಿಸುವುದು ಅಷ್ಟು ಸುಲಭದ ಮಾತಲ್ಲ. ಇಂತಹ ಧೈರ್ಯವನ್ನು ಯಾವುದೇ ಮಹಿಳೆ ಮಾಡಿದರೂ ಅಲ್ಲಿ ಮೂಡಿಬರುವ ಅನುಭವದ ಅಭಿವ್ಯಕ್ತಿ ಬಹುಪಾಲು ಮಹಿಳೆಯರ ಅಭಿವ್ಯಕ್ತಿಯೂ ಆಗಿರುತ್ತದೆ. ಈ ಮಾತನ್ನು ಸಾಮಾಜಿಕ ಜಾತಿವ್ಯವಸ್ಥೆಯಲ್ಲಿ ಅಂಚಿಗೆ ಸರಿದಿರುವ ಸಮುದಾಯದಿಂದ ಬಂದ ಆತ್ಮಕಥೆಗಳಿಗೂ ಅನ್ವಯಿಸಬಹುದು. ಅಂಥ ಸಮುದಾಯದ ಲೇಖಕರಿಂದ ಬಂದ ಆತ್ಮಕಥೆಗಳೂ ಕೂಡ ಈ ರೀತಿಯ ಸ್ವರೂಪವನ್ನು ಉಳ್ಳಂತಹವುಗಳೇ ಆಗಿರುತ್ತವೆ. ಹೀಗಾಗಿ ಆತ್ಮಕತೆಯಲ್ಲಿ ಅಭಿವ್ಯಕ್ತಿಗೊಂಡಿರುವುದೆಲ್ಲವೂ ಸತ್ಯ ಅಥವಾ ಅಸತ್ಯ ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗುವುದಿಲ್ಲ. ಬದಲಾಗಿ ಆ ಅನುಭವದ ಅಭಿವ್ಯಕ್ತಿಯ ಸ್ವರೂಪ ಯಾವುದು ಎಂಬುದು ಮುಖ್ಯವಾಗುತ್ತದೆ. ಹೀಗೆ ಆತ್ಮಕಥೆಯ ಅನುಭವದ ಅಭಿವ್ಯಕ್ತಿಗೆ ಕಥನಕ್ರಮವೂ ಸೇರಿ ಅದು ಸಾಹಿತ್ಯದ ರೂಪವನ್ನು ಪಡೆಯುತ್ತದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶಗಳನ್ನು ಕೆಳಗಿನಂತೆ ಗುರುತಿಸಲಾಗಿದೆ.

ಅ) ಆತ್ಮಕಥೆಯನ್ನು ಯಾರು ಬರೆಯುತ್ತಾರೆ? ಏಕೆ ಬರೆಯುತ್ತಾರೆ? ಮಹಿಳಾ ಆತ್ಮಕತೆಗಳು ಯಾಕೆ ಬೇಕು? ಮಹಿಳೆ ತನ್ನ ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿ ಎಷ್ಟರ ಮಟ್ಟಿಗೆ ತನ್ನನ್ನು ಪ್ರಾತಿನಿಧಿಕವಾಗಿ ಅಭಿವ್ಯಕ್ತಿಸುತ್ತಾಳೆ, ಅವಳ ಅನುಭವಗಳು, ಸಂಘರ್ಷಗಳು ಆಯಾ ಕಾಲದ ಬದುಕನ್ನು ಕಟ್ಟಿಕೊಡುವುದರಲ್ಲಿ ಹೇಗೆ ಸಹಕಾರಿಯಾಗಿವೆ, ಎನ್ನುವ ಪ್ರಶ್ನೆಗಳನ್ನು ತಾತ್ವಿಕ ಚರ್ಚೆಗೆ ಒಳಪಡಿಸುವುದು.

ಅ) ಆತ್ಮಕಥೆಗಳನ್ನು ಸತ್ಯ ಅಸ್ಯತದ ಆಚೆಗೆ ತಂದು, ಒಂದು ವೈಚಾರಿಕ ನೆಲೆಗಟ್ಟಿನಲ್ಲಿ ಚರ್ಚಿಸುವುದು. ಈ ಸಾಧ್ಯತೆಯೇ ಆತ್ಮಕಥೆಯನ್ನು ಓದಬಹುದಾದ ಅನೇಕ ದಾರಿಗಳನ್ನು ತೋರಿಸಿಕೊಡುತ್ತದೆ. ಇಲ್ಲದೇ ಹೋದರೆ ಸತ್ಯ ಮತ್ತು ಅಸತ್ಯದ ಹುಡುಕಾಟದಲ್ಲಿ ಅದು ಚಲನಶೀಲವಾಗುವ ಸಾಧ್ಯತೆಯನ್ನು ಕಳೆದುಕೊಳ್ಳುತ್ತದೆ. ವೈಚಾರಿಕ ನೆಲೆಗಟ್ಟು ಎಂಬುದು ಆತ್ಮಕಥೆಯ ಓದನ್ನು ಸಾಕಷ್ಟು ವಿಸ್ತರಿಸುತ್ತದೆ. ಹೀಗಾಗಿ ಪ್ರಸ್ತುತ ಅಧ್ಯಯನವು 'ಅನುದಿನದ ಅಂತರಗಂಗೆ' ಕೃತಿಯನ್ನು ಒಂದು ವೈಚಾರಿಕ ನೆಲೆಗಟ್ಟಿನಲ್ಲಿ ವಿಶ್ಲೇಷಣೆಗೆ ಒಳಗುಮಾಡುವ ಉದ್ದೇಶವನ್ನು ಒಳಗೊಂಡಿದೆ.

ಇ) 'ಅನುದಿನದ ಅಂತರಗಂಗೆ' ಆತ್ಮಕಥೆ ಮೂಲಕ ಮಹಿಳೆಯರ ಅಂತರಂಗ ಹಾಗೂ ಬಹಿರಂಗದ ಲೋಕವನ್ನು ಪರಿಶೀಲಿಸುವುದು ಮತ್ತು ಅದನ್ನು ವರ್ತಮಾನದ ಬೆಳಕಿನಲ್ಲಿ ವಿಶ್ಲೇಷಣೆಗೆ ಒಳಪಡಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ. ಮಹಿಳೆಯರ ಅನುಭವ ಲೋಕಗಳು ಹೀಗೆ ಕಾಲವನ್ನು ಮೀರಿದವುಗಳೇ ಆಗಿರುತ್ತವೆ. ಕಾಲದಿಂದ ಕಾಲಕ್ಕೆ ಮಹಿಳೆಯರ ಅನುಭವಗಳು ಬದಲಾದರೂ ಅವು ಬೇರೊಂದು ಸ್ವರೂಪದಲ್ಲಿ ಮರುಹುಟ್ಟು ಪಡೆಯುತ್ತವೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಅನುಭವಗಳನ್ನು ವಿಶ್ಲೇಷಣೆಗೆ ಒಳಗುಮಾಡಲಾಗುವುದು.

ಈ) ವಾಸ್ತವಿಕವಾಗಿ ಮಹಿಳೆಯರ ಜೀವನದ ಅನುಭವಗಳು ಪುರುಷರಿಗಿಂತ ಭಿನ್ನವಾಗಿರುವ ಬಗೆಯನ್ನು ಗುರುತಿಸುವುದು ಮತ್ತು ಆ ಅನುಭವಗಳು ಹೇಗೆ ಭಿನ್ನವಾದುವುಗಳು ಎಂಬುದನ್ನು ಗುರುತಿಸುವುದು.

ಉ) ಆತ್ಮಕಥೆಗಳಲ್ಲಿ ಜೀವನದ ವಿವರಗಳು ದಾಖಲಾಗುವುದಿಲ್ಲ, ಬದಲಾಗಿ ಅವು ನಿರೂಪಣೆಗೊಳ್ಳುತ್ತವೆ. ಯಾವುದೇ ವಿವರಗಳು ದಾಖಲಾಗುವುದಕ್ಕೂ ಮತ್ತು ನಿರೂಪಣೆಗೊಳ್ಳುವುದಕ್ಕೂ ವ್ಯತ್ಯಾಸಗಳಿವೆ. ನಿರೂಪಣೆಯ ಮೂಲಕ ಅಭಿವ್ಯಕ್ತಿಯಾಗುವುದರಿಂದಲೇ ಅದು ಸಾಹಿತ್ಯದ ಸ್ವರೂಪವನ್ನು ಪಡೆಯುತ್ತದೆ. ಹಾಗಾಗಿ ಆತ್ಮಕಥೆಯಲ್ಲಿ ಚಿತ್ರಿತವಾಗುವುದು ನಿಜಜೀವನವೇ ಆದರೂ ಅದು ಸಾಹಿತ್ಯ ರೂಪ ಪಡೆಯುತ್ತದೆ. ಅನೇಕ ವೇಳೆ ಆತ್ಮಕಥೆಗಳು ಕಾವ್ಯಮಯವಾಗಿ, ಕಥೆ, ಕಾದಂಬರಿಗಳ ರೂಪದಲ್ಲಿ ಹೊರಹೊಮ್ಮುತ್ತವೆ. ಆದ್ದರಿಂದ ಆತ್ಮಕಥೆಗಳಲ್ಲಿ ಕಥೆ ಕಾದಂಬರಿಗಳ ಕಥನ ಗುಣಗಳು ಮತ್ತು ಎಳೆಗಳು ಬರುವುದನ್ನು ಈ ಆತ್ಮಕಥೆಯ ಮೂಲಕ ಗುರುತಿಸುವುದು.

ಊ) ಭೂತಕಾಲದ ಅನುಭವಗಳು ವರ್ತಮಾನವನ್ನು ಸಮೃದ್ಧಿಗೊಳಿಸುತ್ತವೆ ಸಹನೀಯಗೊಳಿಸುತ್ತವೆ. ಇದನ್ನು 'ಅನುದಿನದ ಅಂತರಗಂಗೆ' ಆತ್ಮಕಥೆಯ ಮೂಲಕ ವಿಶ್ಲೇಷಣೆಗೆ ಒಳಪಡಿಸಿ ಚರ್ಚಿಸುವುದು.

ಋ) ಹೆಣ್ಣು ಯಾವತ್ತಿಗೂ ಎರಡನೇ ದರ್ಜೆಯವಳು ಎಂದು ಪರಿಗಣಿಸಲ್ಪಟ್ಟ ಪುರುಷ ಪ್ರಧಾನ ಸಮಾಜದಲ್ಲಿ ಅವಳು ತನ್ನ ಅಸ್ಮಿತೆಗಾಗಿ ನಡೆಸಿರುವ ಸಂಘರ್ಷ, ಸವಾಲು, ಬದುಕನ್ನು ಕಟ್ಟಿಕೊಡುವ ಸ್ತ್ರೀತ್ವದ ಅನುಭವಗಳನ್ನು ತಿಳಿಯಲು ಪ್ರಯತ್ನಿಸುವುದು.

೧.೨. ಅಧ್ಯಯನದ ಮಹತ್ವ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾ ಆತ್ಮಕಥೆಗಳು ಹೊರ ಬಂದಿರುವುದು ತುಂಬಾ ವಿರಳ. ಆದರೆ ಕನ್ನಡ ಸಾಹಿತ್ಯದಲ್ಲಿ ಅವು ತಮ್ಮದೇ ಆದ ಮಹತ್ವವನ್ನು ಹೊಂದಿವೆ. ಕೇವಲ ಕಥೆ, ಕವನ, ಕಾದಂಬರಿಗಳಿಗೆ ಸೀಮಿತವಾಗಿದ್ದ ಮಹಿಳೆಯರು ದಲಿತ ಬಂಡಾಯೋತ್ತರ ಕಾಲಘಟ್ಟದಲ್ಲಿ ಆತ್ಮಕಥನಗಳನ್ನು ಬರೆಯಲು ತೊಡಗಿದ್ದುದು ಒಂದು ಕ್ರಾಂತಿಕಾರಕ ಬದಲಾವಣೆಯಾಗಿತ್ತು. ಅದುವರೆಗೂ ಕೇವಲ ಪುರುಷ ಜೀವನವನ್ನು ಆತ್ಮಕಥೆಯಲ್ಲಿ ನೋಡುತ್ತಿದ್ದ ಸಾಹಿತ್ಯ ಲೋಕವು ಮಹಿಳೆಯರು ತಮ್ಮ ವೈಯಕ್ತಿಕ ವಿವರಗಳನ್ನು ಆತ್ಮಕಥೆಯ ರೂಪದಲ್ಲಿ ಬರೆಯಲು ತೊಡಗಿದಾಗ ಕುತೂಹಲ ಮತ್ತು ಅಚ್ಚರಿಯಿಂದ ನೋಡಿತು. ಮಹಿಳಾ ಲೋಕದ ಅನುಭವ, ಆಭಿವ್ಯಕ್ತಿಗಳು ಪುರುಷರ ಅನುಭವ, ಅಭಿವ್ಯಕ್ತಿಗಳಿಗಿಂತ ಭಿನ್ನವಾಗಿದ್ದವು. ಮಹಿಳೆಯರು ಹೊರಗೆ ಹೇಳಿಕೊಳ್ಳಲಾರದ ಅನೇಕ ತಮ್ಮ ಒಳತೋಟಿಗಳನ್ನು ಭಾಷೆಯಲ್ಲಿ ನಿರೂಪಿಸಿದರು. ಆ ಮೂಲಕ ಮಹಿಳೆಯರು ಅವರ ಅಭಿವ್ಯಕ್ತಿಗೆ ಎದುರಾಗುವ ಅಡೆತಡೆಗಳನ್ನು ಎದುರಿಸುವ ಸಾಧ್ಯತೆಯನ್ನು ಭಾಷಿಕ ನಿರೂಪಣೆಯಲ್ಲಿ ಕಂಡುಕೊಳ್ಳುವ ಪ್ರಯತ್ನ ಮಾಡಿದರು. ಸಮಾಜದ ಅನೇಕ ವಲಯಗಳಲ್ಲಿ ಅಂದರೆ ಅದು ಕೌಟುಂಬಿಕದ್ದೇ ಆಗಿರಲಿ, ಪರಿಸರದ್ದೇ ಆಗಿರಲಿ, ರಾಜಕೀಯದ್ದೇ ಆಗಿರಲಿ ಎದುರಿಸಿಕೊಂಡು, ನಿವಾರಿಸಿಕೊಂಡು, ನಿಭಾಯಿಸಿಕೊಂಡು ಮುಂದುವರಿಸುವುದಕ್ಕೆ ಸರಿಯಾದ ದಾರಿಯನ್ನು ಆರಿಸುವಲ್ಲಿ ಆತ್ಮಕಥೆಗಳು ದಾರಿದೀಪವಾಗುತ್ತವೆ ಎಂದು ಭಾವಿಸಿದರು. ನಾವು ಎಲ್ಲಿಂದ ಹೇಗೆ ನಡೆದು ಬಂದಿದ್ದೇವೆ, ಇವತ್ತು ಎಲ್ಲಿಗೆ ಬಂದು ಮುಟ್ಟಿದ್ದೇವೆ ಎಂಬುದನ್ನು ತಿಳಿದಾಗ ಮುಂದಿನ ಬೆಳವಣಿಗೆಯ ದಾರಿಯ ಆಯ್ಕೆ ಸುಲಭವಾಗುತ್ತದೆ ಎಂಬ ಅರಿವೂ ಕೂಡ ಆತ್ಮಕಥೆಗಳ ರಚನೆಯ ಹಿಂದೆ ಕೆಲಸ ಮಾಡಿರುವಂತಿದೆ. ಭೂತಕಾಲದ ಅನುಭವಗಳನ್ನು ವರ್ತಮಾನಕ್ಕೆ ಹೊತ್ತುಕೊಂಡು ಬರುವಲ್ಲಿ ಆತ್ಮಕಥೆಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಆತ್ಮಕತೆಗಳು ಬದುಕಿನ ದಾರಿಯನ್ನು ತಿಳಿಯಲು, ಜೀವನದ ಏರುಪೇರುಗಳನ್ನು ತಿಳಿಯಲು ಮತ್ತು ಸವಾಲುಗಳನ್ನೆದುರಿಸಲು ಸಹಾಯಕವಾಗುತ್ತವೆ.

ಒಟ್ಟಿನಲ್ಲಿ ಮಹಿಳಾ ಆತ್ಮಕಥೆಗಳು ಅನುಭವ, ಅಭಿವ್ಯಕ್ತಿ ಮತ್ತು ನಿರೂಪಣೆಯ ಮೂಲಕ ಸಾಹಿತ್ಯದಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಕುತೂಹಲಕಾರಿಯಾದ ಇಂತಹ ಆತ್ಮಕಥೆಗಳು ಅಪಾರ ಸಂಖ್ಯೆಯ ಓದುಗರಿಂದ ಮೆಚ್ಚುಗೆ ಪಡೆಯುವುದರ ಜೊತೆಗೆ ಮಾದರಿಯಾಗಿರುವುದು ಆತ್ಮಕಥೆಗಳ ಮಹತ್ವವನ್ನು ತಿಳಿಸುತ್ತದೆ. ಮಹಿಳಾ ಅಭಿವ್ಯಕ್ತಿಯನ್ನು ಆತ್ಮಕಥೆಯ ರೂಪದಲ್ಲಿ ಕಂಡ ಪುರುಷವಾದಿ ಸಮಾಜವು ಅದಕ್ಕೆ ಪ್ರತಿಕ್ರಿಯಿಸುವ ರೀತಿ ಅತ್ಯಂತ ಕುತೂಹಲಕಾರಿಯಾದುದು. ಪ್ರತಿಭಾ ನಂದಕುಮಾರ್ ಅವರ 'ಅನುದಿನದ ಅಂತರಗಂಗೆ' ಹೊರಬಂದಾಗ ಅದನ್ನು ಕುರಿತು ನಡೆದ ಚರ್ಚೆಗಳಲ್ಲಿ ಈ ಅಂಶಗಳನ್ನು ಕಾಣಬಹುದು.

೧.೩. ಅಧ್ಯಯನದ ವ್ಯಾಪ್ತಿ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾ ಆತ್ಮಕಥೆಗಳು ಪ್ರಮುಖವಾದ ಸ್ಥಾನ ಗಳಿಸಿರುವುದನ್ನು ಗಮನಿಸಬಹುದು. ಆತ್ಮಕಥನಗಳ ವಿನ್ಯಾಸಗಳನ್ನು ಕಂಡುಕೊಳ್ಳುವುದಕ್ಕಾಗಿ ಅನುಪಮ ನಿರಂಜನ ಅವರ 'ನೆನಪು ಸಿಹಿಕಹಿ', ದು.ಸರಸ್ವತಿ ಅವರ 'ಈಗೇನ್‌ಮಾಡಿರಿ?, ಸಾರಾ ಅಬುಬಕರ್ ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು', ಗೋದಾವರಿ ಪುರುಳೇಕರ್ ಅವರ 'ಮಾನವ ಎಚ್ಚೆತ್ತಾಗ', ಕಮಲಾ ಸುರಯ್ಯಾ ಅವರ 'ಬಾಲ್ಯದ ನೆನಪುಗಳು'. ಇವುಗಳನ್ನು ಅಧ್ಯಯನ ಮಾಡಿ ಪ್ರತಿಭಾ ನಂದಕುಮಾರ್ ಅವರ 'ಅನುದಿನದ ಅಂತರಗಂಗೆ' ಆತ್ಮಕಥೆಯು ಉಳಿದ ಆತ್ಮಕತೆಗಳಿಗಿಂತ ಯಾವ ರೀತಿ ಭಿನ್ನವಾಗಿದೆ ಮತ್ತು ವಿಶಿಷ್ಟ ವಿನ್ಯಾಸವನ್ನು ಹೊಂದಿದೆ ಎಂಬುದನ್ನು ತಿಳಿಯಲು 'ಅನುದಿನದ ಅಂತರಗಂಗೆ'ಯನ್ನು ಅಧ್ಯಯನದ ಮೂಲ ಆಕರವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಉಳಿದಂತೆ ಇದಕ್ಕೆ ಪೂರಕವಾಗಿ, ಪ್ರಾಸಂಗಿಕವಾಗಿ ಕೆಲವು ಆತ್ಮಕಥೆಗಳನ್ನು ಆನುಷಂಗಿಕ ಆಕರಗಳಾಗಿ ನೋಡಲಾಗಿದೆ. ಅಲ್ಲದೆ ಇದುವರೆಗೆ 'ಅನುದಿನದ ಅಂತರಗಂಗೆ' ಕೃತಿಯ ಮೇಲೆ ಬಂದಿರುವ ಕೆಲವು ವಿಮರ್ಶಾ ಬರಹಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

೧.೪. ಅಧ್ಯಯನದ ವಿಧಾನ

ಕನ್ನಡದಲ್ಲಿ ಮಹಿಳಾ ಆತ್ಮಕಥೆಗಳ ವ್ಯಾಪ್ತಿ ಅವುಗಳನ್ನು ಪ್ರತ್ಯೇಕವಾಗಿ ಅಧ್ಯಯನಕ್ಕೆ ತೊಡಗುವಷ್ಟು ಇಲ್ಲ ಎನಿಸುತ್ತದೆ. ಈ ಕಾರಣ ಇದುವರೆಗೂ ಕೇವಲ ಮಹಿಳಾ ಆತ್ಮಕಥೆಗಳನ್ನು ಮಾತ್ರ ಕುರಿತ ಅಧ್ಯಯನಗಳು ಹೆಚ್ಚು ನಡೆದಿಲ್ಲ. ಆದರೆ ಇತ್ತೀಚೆಗೆ ಬರಹಗಾರ್ತಿಯರು, ನಟಿಯರು, ಲೇಖಕಿಯರು, ಕಲಾವಿದೆಯರು, ಹೋರಾಟಗಾರ್ತಿಯರು ಮುಂತಾದವರು ತಮ್ಮ ಆತ್ಮಕಥೆಗಳನ್ನು ಬರೆಯುತ್ತಿದ್ದಾರೆ. ಇದರಲ್ಲಿ ಬಹುತೇಕ ಲೇಖಕಿಯರು ಕೇವಲ ಸಾಧನೆಯನ್ನು ಮಾತ್ರ ಕೇಂದ್ರದಲ್ಲಿಟ್ಟುಕೊಂಡು ಬರೆಯಲಾಗುತ್ತದೆ ಎಂಬ ಸಾಮಾನ್ಯ ಅಭಿಪ್ರಾಯವಿದೆ. ಇದು ಮಹಿಳಾ ಆತ್ಮಕಥೆಗಳನ್ನು ಹೊರತುಪಡಿಸಿ ಎಲ್ಲಾ ಆತ್ಮಕಥೆಗಳ ಕುರಿತಾಗಿಯೂ ಇರುವ ಸಾಮಾನ್ಯವಾದ ಮಾತಾಗಿದೆ. ಸಾಧನೆಗಳು ಬದುಕಿನ ಭಾಗವಾಗಿ ಬಾಳ್ವೆಯಲ್ಲಿ ಬೆರೆತು ಬಂದಿರುವುದನ್ನು ಈ ಬರಹಗಳು ನಿರೂಪಿಸುವುದಿಲ್ಲ ಎಂಬುದು ಆತ್ಮಕಥೆಗಳ ಮೇಲೆ ಇರುವ ಒಂದು ಸರಳೀಕೃತ ಅಭಿಪ್ರಾಯ. ಆದರೆ ಇತ್ತೀಚಿನ ದಿನಗಳಲ್ಲಿ ಅದರಲ್ಲೂ ದಲಿತ ಆತ್ಮಕಥೆಗಳು ಬರಲು ಪ್ರಾರಂಭವಾದ ಮೇಲೆ ಈ ಅಭಿಪ್ರಾಯ ಬದಲಾಗಿದೆ. ಆತ್ಮಕಥೆಯನ್ನು ಇಷ್ಟೊಂದು ಮುಕ್ತವಾಗಿ ಬರೆಯಲು ಸಾಧ್ಯ ಎಂಬುದನ್ನು ದಲಿತ ಲೇಖಕರು ತೋರಿಸಿಕೊಟ್ಟರು. ನಂತರದ ದಿನಗಳಲ್ಲಿ ಮಹಿಳಾ ಆತ್ಮಕಥೆಗಳು ಬಂದ ಮೇಳೆ ಆತ್ಮಕಥೆಗಳ ಮೇಲಿನ ಕುತೂಹಲ ಇಮ್ಮಡಿಯಾಯಿತು. ಇಂತಹ ಆತ್ಮಕಥೆಗಳಲ್ಲಿ ಪ್ರಮುಖ ಎಂದು ಕರೆಯಬಹುದಾದ ಪ್ರತಿಭಾ ನಂದಕುಮಾರ್ ಅವರ 'ಅನುದಿನದ ಅಂತರಗಂಗೆ' ಕೃತಿಯನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಇದರ ಕಥನಕ್ರಮದ ವಿನ್ಯಾಸದ ಮೂಲಕ ಈ ಆತ್ಮಕಥೆಯನ್ನು ವಿವಿಧ ಆಯಾಮಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ವಿನ್ಯಾಸಗಳ ಅಧ್ಯಯನ ಎಂದಾಗ ಇದು ಕೃತಿ ಕೇಂದ್ರಿತ ಅಧ್ಯಯನವೇ ಆಗುತ್ತದೆ. ಕೃತಿಯನ್ನು ಒಂದು ಸ್ವಾಯತ್ತ ಕೃತಿಯೆಂದು ಭಾವಿಸಿ ಅದರ ಒಳ ರಚನೆಯನ್ನು ಕೇಂದ್ರಿಕರಿಸಿ ವಿವರವಾಗಿ ಅಧ್ಯಯನ ಮಾಡುವುದು ಕಥನಕ್ರಮದ ವಿನ್ಯಾಸವಾಗುತ್ತದೆ. ಇದನ್ನು ಕೃತಿಯ ಆಕೃತಿಕೇಂದ್ರಿತ ಅಧ್ಯಯನ ಎಂದು ತಿಳಿಯಲಾಗಿದ್ದು, ಇದನ್ನು ಸಂರಚನವಾದ ಎಂತಲೂ ಕರೆಯಲಾಗಿದೆ. ಯಾವುದೇ ವಿಚಾರಗಳನ್ನು ಕೃತಿಯ ಮೇಲೆ ಹಾಕದೆ ಕೃತಿಯ ಜಗತ್ತನ್ನು ಮಾತ್ರ ಪರಿಗಣಿಸಿ ಅಧ್ಯಯನ ಮಾಡುವುದು ಕಥನಕ್ರಮದ ಇಂದಿನ ಕ್ರಮವಾಗಿದೆ. ಈ ಅಧ್ಯಯನ ವಿಧಾನವನ್ನು ಪ್ರಸ್ತುತ ಅಧ್ಯಯನಕ್ಕೆ ಅಳವಡಿಸಲಾಗಿದೆ.

ಒಂದು ಕೃತಿಯನ್ನು ಅದರ ಕಥನಕ್ರಮದ ವಿನ್ಯಾಸದ ಮೂಲಕ ಓದಿಗೆ ಒಳಪಡಿಸಿದಾಗ ಅದರ ವಿವಿಧ ಆಯಾಮಗಳು ತೆರೆದುಕೊಳ್ಳುತ್ತವೆ. ಅದು ಅಧ್ಯಯನದ ಬಹುಸಾಧ್ಯತೆಯನ್ನು ಒಳಗೊಂಡಿರುತ್ತದೆ. ಒಂದು ಕೃತಿಯ ಕಥನಕ್ರಮವೇ ಆ ಕೃತಿಯು ಎದುರಿಸಿರುವ ಸಂಘರ್ಷಗಳನ್ನು ತೋರಿಸಿಕೊಡುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡಿರುವ 'ಅನುದಿನದ ಅಂತರಗಂಗೆ' ಆತ್ಮಕಥೆಯ ಕಥನ ವಿನ್ಯಾಸವೇ ವಿಭಿನ್ನಾವಾದುದು. ಇದರಿಂದ ಇದುವರೆಗಿನ ಮಹಿಳಾ ಆತ್ಮಕಥೆಗಳಿಗಿಂತ ಭಿನ್ನವಾದ ಕಥನ ವಿನ್ಯಾಸವನ್ನು ಹೊಂದಿರುವ ಕೃತಿಯಾಗಿದೆ. ಈ ಭಿನ್ನತೆಯ ಕಾರಣದಿಂದಲೇ ಇದನ್ನು ಅದರ ನಿರೂಪಣಾ ಕ್ರಮದ ಮೂಲಕ ಅಧ್ಯಯನ ಮಾಡುವ ವಿಧಾನವನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿದೆ.

❑❑❑

ಅಧ್ಯಾಯ ಎರಡು

ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ ಎರಡು

ಪರಿಕಲ್ಪನಾತ್ಮಕ ಚರ್ಚೆ

ಪಾಶ್ಚಾತ್ಯರ ಪ್ರಭಾವದಿಂದ ಭಾರತಕ್ಕೆ ಆಧುನಿಕತೆಯ ಪ್ರವೇಶವಾಯಿತು. ನಂತರ ಹಲವಾರು ರಂಗಗಳಲ್ಲಿ ಗುರುತರವಾದ ಬದಲಾವಣೆಗಳು ಕಂಡುಬಂದವು. ಸಾಹಿತ್ಯ ಕ್ಷೇತ್ರದಲ್ಲೂ ಹೊಸ ಪ್ರಯೋಗಗಳು ನಡೆದವು. ಕಥೆ, ಕಾದಂಬರಿ, ಸಣ್ಣಕತೆ, ಕಾವ್ಯ, ವಿಮರ್ಶೆ, ಪ್ರಬಂಧ, ಜೀವನ ಚರಿತ್ರೆ ಹೀಗೆ ಹಲವಾರು ಪ್ರಕಾರಗಳು ಹೊಸದಾಗಿ ಬೆಳಕಿಗೆ ಬಂದವು. ಆಧುನಿಕ ತಿಳುವಳಿಕೆಯಿಂದಾಗಿ ಆತ್ಮಕಥೆಯೂ ಬೆಳೆಯಿತು. ಮಾನವನ ಬದುಕು ಸಾಂಘಿಕವಾದುದು. ಅದೇ ರೀತಿ ವಿಶಿಷ್ಟತೆಯಿಂದಲೂ ಕೂಡಿದೆ. ವ್ಯಕ್ತಿ ತನ್ನ ಬದುಕಿನಲ್ಲಾದ ನೋವು, ನಲಿವು, ಬೇಸರ, ಒಳಿತು-ಕೆಡುಕು, ಸಿಹಿ-ಕಹಿ ಮೊದಲಾದ ಘಟನೆಗಳನ್ನು ಪ್ರಾಮಾಣಿಕವಾಗಿ ದಾಖಲೆಗೊಳಿಸುವ ಸಾರವತ್ತಾದ ನಿರೂಪಣೆಯೇ ಆತ್ಮಕಥೆ.

ಮಾನವನ ಆಸೆ-ಆಕಾಂಕ್ಷೆಗಳನ್ನು, ಬದುಕನ್ನು ನಿರೂಪಿಸುವಲ್ಲಿ ಮತ್ತು ಸಾಮಾಜಿಕ ಓರೆಕೋರೆಗಳನ್ನು ತಿದ್ದುವಲ್ಲಿ ಸಾಹಿತ್ಯವು ಒಂದು ಪ್ರಭಾವಿ ಮಾಧ್ಯಮವಾಗಿ ಹೊರಹೊಮ್ಮಿದೆ. ಹೀಗಾಗಿ ಸಾಮಾನ್ಯರಿಂದ ಶ್ರೇಷ್ಠ ವ್ಯಕ್ತಿಯವರೆಗೂ ತನ್ನ ಜೀವನದ ಅನುಭವಗಳನ್ನು ದಾಖಲಿಸಿಕೊಳ್ಳುವ ಪ್ರಕಾರವಾಗಿ ಆತ್ಮಕಥೆ ಬೆಳೆದು ಬಂದಿದೆ. ಆದರೂ ಹೆಚ್ಚಿನ ಸಂಖ್ಯೆಯ ಆತ್ಮಕಥೆಗಳು ಬಂದಿರುವುದು ವಿಶೇಷ ಸಾಧನೆ ಮಾಡಿದ ಅಕ್ಷರ ಬಲ್ಲವರಿಂದ ಎಂಬುದನ್ನು ಗಮನಿಸಬಹುದು. ಆತ್ಮಕಥೆ ಮತ್ತು ಜೀವನಚರಿತ್ರೆಗಳೆರಡೂ ಒಂದೇ ಅರ್ಥವೆಂಬಂತೆ ಕಂಡುಬಂದರೂ ಎರಡೂ ಭಿನ್ನ ಭಿನ್ನ ನಿಲುವುಗಳನ್ನು ಹೊಂದಿವೆ. ವ್ಯಕ್ತಿಯೊಬ್ಬನ ಜೀವನದ ವಿಚಾರಗಳನ್ನು ಕುರಿತು ಇತರರು ಬರೆದಾಗ ಅದು ಜೀವನ ಚರಿತ್ರೆಯಾಗುತ್ತದೆ. ಲೇಖಕರು ತಮ್ಮ ಜೀವನದ ವಿಚಾರಗಳನ್ನು ಅವರೇ ಬರೆದುಕೊಂಡಾಗ ಅದು 'ಆತ್ಮಕಥೆ' ಎನಿಸಿಕೊಳ್ಳುತ್ತದೆ.

೧೬೮೩ರಲ್ಲಿ ಡ್ರೈಡನ್ ನು ಮೊಟ್ಟ ಮೊದಲಿಗೆ 'ಬಯೋಗ್ರಫಿ' ಎಂಬ ಶಬ್ದವನ್ನು ಉಪಯೋಗಿಸಿದನು. 'ಬಯೋಗ್ರಫಿ' ಎಂದರೆ 'ಜೀವನಚರಿತ್ರೆ'. 'ಆಟೋಬಯೋಗ್ರಫಿ' ಎಂದರೆ 'ಆತ್ಮಚರಿತ್ರೆ'. ಜೀವನಚರಿತ್ರೆ ನಿರ್ದಿಷ್ಟ ವ್ಯಕ್ತಿಯ ಬದುಕಿನ ಚರಿತ್ರೆಯಾಗುತ್ತದೆ. ಆದರೆ ಆತ್ಮಕತೆ ತನ್ನ ಬದುಕಿನ ಕತೆಯನ್ನು ಹೇಳಿಕೊಳ್ಳುವ ವ್ಯಕ್ತಿಯದಾಗಿರುತ್ತದೆ.

ಆತ್ಮಚರಿತ್ರೆಯನ್ನು (ಮಿಮೊಯಿರ್ ಮತ್ತು ಡಯರಿ/ಜರ್ನಲ್)ಗಳಿಂದ ಬೇರ್ಪಡಿಸಿ ನೋಡಬಹುದಾಗಿದೆ. ಮಿಮೊಯಿರ್ ಲೇಖಕನ ಆತ್ಮವಿಕಾಸವನ್ನು ಚಿತ್ರಿಸುವುದಕ್ಕಿಂತ ಹೆಚ್ಚಾಗಿ ಅದರೊಡನೆ ಅವನಿಗೆ ಗೊತ್ತಿರುವ ವ್ಯಕ್ತಿಗಳ ಸಾಕ್ಷಿಯಾಗಿದ್ದ ಘಟನೆಗಳ ದಾಖಲೆಯಾಗಿದೆ.

ಆತ್ಮಕಥೆಯು ವ್ಯಕ್ತಿಗಳ ಚರಿತ್ರೆಯಾಗಿರುವಂತೆಯೇ ಆವರ ಸಮಾಜದ ಅಥವಾ ಅವರು ಪ್ರತಿನಿಧಿಸುವ ಸಮೂಹದ ಮತ್ತು ಪರಿಸರದ ಚರಿತ್ರೆಯೂ ಆಗಿರುತ್ತದೆ. ಕಥಾನಾಯಕ ಅಥವಾ ನಾಯಕಿ ತನ್ನ ಮತ್ತು ತನ್ನ ಸುತ್ತಮುತ್ತಲಿನ ಜೀವನವನ್ನು ಅವರು ಕಂಡಂತೆ ವರ್ಣಿಸಿರುತ್ತಾರೆ. ಆತ್ಮಚರಿತ್ರೆಯು ಕಟ್ಟುಕತೆಯಲ್ಲ. ಅದರಲ್ಲಿ ಅನುಭವ ನಿರೂಪಣೆ ಮತ್ತು ಸತ್ಯಾಂಶಗಳನ್ನೊಳಗೊಂಡ ಘಟನೆಗಳ ಪರಿಣಾಮಕಾರಿಯಾದ ವರ್ಣನೆ ಇರುತ್ತದೆ. ಇಂತಹ ವಿಶಿಷ್ಟ ದಾಖಲೆಯು ಮುಂದಿನ ಪೀಳಿಗೆಗೆ ದಾರಿದೀಪವಾಗಿ ಕಂಡು ಬರುವಲ್ಲಿ ಅನೇಕ ಆತ್ಮಕಥೆಗಳು ಸಫಲವಾಗಿರುವುದನ್ನು ಗುರುತಿಸಬಹುದು. ಈ ಕಾರಣದಿಂದಾಗಿ ಗಣ್ಯರು, ರಾಜಕಾರಣಿಗಳು, ಮಹಾಪುರುಷರು, ಸಾಹಿತಿಗಳು, ವಿದ್ವಾಂಸರು ಮೊದಲಾದವರು ಅನುಸರಿಸಿದ ಧ್ಯೆಯಗಳು, ಧೋರಣೆಗಳು ಹಾಗೂ ಅನುಭವದ ಘಟನೆಗಳನ್ನು ಬರವಣಿಗೆಯ ರೂಪದಲ್ಲಿ ಹಿಡಿದಿಡುವ ಮೂಲಕ ಆತ್ಮಕಥೆಗಳು ಮುಂದಿನ ಕಾಲಘಟ್ಟಕ್ಕೆ ಮಾದರಿಯಾಗುವ ಉದ್ದೇಶವನ್ನು ಅಡಗಿಸಿಕೊಂಡಿವೆ. ಅಲ್ಲದೆ ಆತ್ಮಕಥೆಗಳು ಏಕಕಾಲಕ್ಕೆ ಸಮುದಾಯದ ಅಭಿವ್ಯಕ್ತಿಯೂ ಆಗಿರುವ ಕಾರಣದಿಂದ ಅವು ಸಮಾಜದ ಅಥವಾ ಒಂದು ಸಮುದಾಯದ ಸಾಮೂಹಿಕ ಅಭಿವ್ಯಕ್ತಿಯೂ ಆಗಿರುತ್ತವೆ.

ಯುರೋಪ್ ಖಂಡದಲ್ಲಿ ಕ್ರೈಸ್ತಮತದಲ್ಲಿ ಪಾಪ ನಿವೇದನೆಯ ಸ್ವಭಾವ ಬೆಳೆದು ಆತ್ಮಕಥೆಯ ಅಂಶಗಳು ಅನೇಕ ಕೃತಿಗಳಲ್ಲಿ ದಾಖಲೆಗೊಳ್ಳತೊಡಗಿದವು. ಈ ಬೆಳವಣಿಗೆಗಳು ಆತ್ಮಕಥೆಯ ಹುಟ್ಟಿಗೆ ಕಾರಣವಾದವು ಎನ್ನಬಹುದು. ಪಾಶ್ಚಾತ್ಯರಲ್ಲಿ ಆತ್ಮಚರಿತ್ರೆ ಬರವಣಿಗೆಯು ನಂತರದ ದಿನಗಳಲ್ಲಿ ವರ್ಣರಂಜಿತ ವ್ಯಕ್ತಿತ್ವವನ್ನು ಬಿಂಬಿಸುವ ಚಾರಿತ್ರಿಕ ದಾಖಲೆಗಳಾಗಿ ಹೊರಹೊಮ್ಮಿದವು. ಆತ್ಮಕಥಾ ರಚನೆಯು ವಿಶ್ವದ ಶ್ರೇಷ್ಠ ಮಹನೀಯರ ಜೀವನದ ಅನುಭವಗಳನ್ನು ತಿಳಿಸುವ ಸಾಹಿತ್ಯ ಪ್ರಕಾರವಾಗಿ ಪ್ರಸ್ತುತ ಹೆಚ್ಚು ವ್ಯಾಪಕವಾಗಿದೆ.

ಇತಿಹಾಸ ಒಂದು ಜನಾಂಗದ ಅಥವಾ ಸಮಾಜದ ಒಂದು ಕಾಲದ ಘಟನಾವಳಿ ಮತ್ತು ವ್ಯಕ್ತಿಯ ಹೊರವಲಯದ ವಸ್ತುವಿನ ಸತ್ಯದ ವರದಿಯಾಗಿರುತ್ತದೆ. ಆದರೆ ಆತ್ಮಚರಿತ್ರೆ ಒಬ್ಬ ವ್ಯಕ್ತಿಯ ಹೊರ ಒಳ ಎರಡನ್ನು ಒಳಗೊಂಡು ವಸ್ತು ಸತ್ಯ ಮತ್ತು ಮಾನಸಿಕ ಸತ್ಯಗಳ ತಳಹದಿಯ ಮೇಲೆ ರಚನೆಗೊಂಡಿರುತ್ತದೆ. ಅಲ್ಲದೆ ಹುಟ್ಟು ಸಾವುಗಳ ಎರಡು ಮಿತಿಯೊಳಗಿನ ವ್ಯಕ್ತಿಯ ಬದುಕನ್ನು ಚಿತ್ರಿಸುತ್ತದೆ. ಈ ಎರಡು ಗಡಿಗಳ ಮಧ್ಯದ ಪರಿಕಲ್ಪನೆಯೇ 'ಆತ್ಮಚರಿತ್ರೆ'ಯಾಗಿದೆ. ಆತ್ಮಕತೆಗಳಲ್ಲಿ ಪ್ರಾಮಾಣಿಕ ಪ್ರಯತ್ನಗಳು ಹೆಚ್ಚಾಗಿ ಕಂಡುಬರುವವು. ನೆನಪು, ಜ್ಞಾಪಕ, ದಿನಚರಿ, ದಿನನಿತ್ಯದ ಘಟನೆ, ಅನಿಸಿಕೆ, ಅನುಭವ, ಆಲೋಚನೆಗಳನ್ನು ತನ್ನ ಉಪಯೋಗಕ್ಕಾಗಿಯೂ ಅಥವಾ ಸಂತೋಷಕ್ಕಾಗಿಯೂ ವ್ಯಕ್ತಿಯೊಬ್ಬ ಮಾಡಿಕೊಳ್ಳುವ ದಾಖಲೆಗಳು ಆತ್ಮಕಥೆಗಳಾಗಿ ಹೊರಹೊಮ್ಮಿರುವ ಹಲವಾರು ಸಾಧ್ಯತೆಗಳಿವೆ.

ಕನ್ನಡದಲ್ಲಿ ಇತ್ತೀಚಿಗೆ ಆತ್ಮಕಥೆಗಳು ಹೆಚ್ಚು ಬೆಳೆಯಲಾರಂಬಿಸಿವೆ. ಅದರಲ್ಲಿ ಮಹಿಳಾ ಆತ್ಮಕಥೆಗಳು ತುಂಬಾ ನಿಧಾನಗತಿಯಲ್ಲಿ ಹೊರಬರುತ್ತಿವೆ. ಕನ್ನಡದ ಮಟ್ಟಿಗೆ ಸ್ವತಂತ್ರ ಆತ್ಮಕಥೆಗಳು ರಚನೆಯಾಗಿರುವುದು ತುಂಬಾ ಕಡಿಮೆ. ಹೆಚ್ಚಾಗಿ ಅನುವಾದಗೊಂಡ ಆತ್ಮಕಥೆಗಳನ್ನು ಕಾಣಬಹುದಾಗಿದೆ. ಅಂತಹವುಗಳಲ್ಲಿ ರಾಷ್ಟ್ರನಾಯಕರು, ಸಾಹಿತಿಗಳು, ವಿಜ್ಞಾನಿಗಳು, ಪ್ರಭಾವಿ ನಾಯಕರನ್ನು ಕುರಿತ ಆತ್ಮಕಥೆಗಳು ಹೆಚ್ಚಾಗಿ ಕಂಡು ಬಂದಿವೆ.

ಕನ್ನಡದಲ್ಲಿ ಪ್ರಮುಖವಾಗಿ ಮಹಿಳಾ ಆತ್ಮಕಥೆಗಳನ್ನು ನೋಡುವುದಾದರೆ, ಅನುಪಮಾ ನಿರಂಜನ– 'ನೆನಪು ಸಿಹಿಕಹಿ' (೧೯೮೫), ಅಮೃತಾ ಪ್ರೀತಂ– 'ರಸೀದಿ ಟಿಕೇಟು' (೨೦೦೫), ಅನ್ನಪೂರ್ಣ ಸಾಗರ– 'ನನ್ನ ಬದುಕಿನ ಪುಟಗಳಿಂದ' (೨೦೦೭), ಕಮಲಾ ಸುರಯ್ಯಾ– 'ಬಾಲ್ಯದ ನೆನಪುಗಳು' (೨೦೦೧), ಗೋದಾವರಿ ಪುರುಳೇಕರ್– 'ಮಾನವ ಎಚ್ಚೆತ್ತಾಗ' (೨೦೦೦), ಜಯಮ್ಮ ಬಿ– 'ಅಭಿನೇತ್ರಿ' (೧೯೭೯), ತಾರಿಣಿ– 'ಮಗಳು ಕಂಡ ಕುವೆಂಪು' (೨೦೦೬), ನಾಗರತ್ನಮ್ಮ ಕೆ– 'ಮರಿಯಮ್ಮನಹಳ್ಳಿಯ ರಂಗಸಿರಿ' (೧೯೯೯), ಪ್ರತಿಮಾ ಬೇಡಿ – 'ಟೈಮ್ ಪಾಸ್' (೧೯೯೯), ದು. ಸರಸ್ವತಿ– 'ಈಗೇನ್ ಮಾಡಿರಿ' (೨೦೦೧), ಸಾರಾ ಅಬೂಬಕರ್– 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' (೧೯೮೪), ಕಮಲಾದಾಸ್– 'ನನ್ನ ಕಥೆ' ಹೀಗೆ ಹಲವಾರು ಕ್ಷೇತ್ರಗಳನ್ನೊಳಗೊಂಡಂತೆ ಕನ್ನಡದಲ್ಲಿ ಮತ್ತು ಕನ್ನಡಕ್ಕೆ ಅನುವಾದಗೊಂಡಿರುವ ಆತ್ಮಕಥೆಗಳನ್ನು ನೋಡಬಹುದಾಗಿದೆ.

ಕಾದಂಬರಿ, ಕಥೆ, ಸಣ್ಣಕತೆ, ಪ್ರಬಂಧ, ಪ್ರವಾಸಕಥನ, ಆತ್ಮಕಥನ ಮುಂತಾದ ಸಾಹಿತ್ಯ ಪ್ರಕಾರಗಳು ಪಶ್ಚಿಮದ ಗಾಢ ಪ್ರಭಾವದಿಂದಲೇ ಬಂದವೆಂದು ಹಲವಾರು ವಿದ್ವಾಂಸರು, ಸಾಹಿತಿಗಳು ಅಭಿಪ್ರಾಯ ಪಟ್ಟಿದ್ದಾರೆ. ಪಾಶ್ಚಾತ್ಯರ ಪ್ರಭಾವದಿಂದ ಕನ್ನಡದಲ್ಲಿ ಆತ್ಮಕಥೆಗಳು ಬೆಳವಣಿಗೆ ಕಂಡು ವಿವಿಧ ಸ್ವರೂಪವನ್ನು ಕಂಡುಕೊಳ್ಳುತ್ತಾ ಬಂದಿವೆ. ಆಧುನಿಕ ಸಾಹಿತ್ಯದ ವಿಶಿಷ್ಟ ಪ್ರಕಾರವೆಂದೇ ಗುರುತಿಸಲ್ಪಡುವ ಆತ್ಮಕಥೆಯ ಹುಟ್ಟು, ಬೆಳವಣಿಗೆಯನ್ನು ಗಮನಿಸಿದಾಗ ಪ್ರಾಚೀನ ಸಾಹಿತ್ಯದಲ್ಲಿಯೂ ಕೆಲವು ಆತ್ಮಕಥಾಂಶವುಳ್ಳ ವಸ್ತುವನ್ನು ಗುರುತಿಸಬಹುದಾಗಿದೆ. ಕಾವ್ಯಗಳಲ್ಲಿ ಆತ್ಮಕಥೆಯ ಛಾಯೆಯನ್ನು ಕಾಣಬಹುದಾಗಿದೆ. ಪ್ರಾಚೀನ ಕವಿಗಳಲ್ಲಿ ಆತ್ಮಚರಿತ್ರೆಯ ಅಂಶಗಳನ್ನು ಹೊಂದಿರುವ ಹಲವಾರು ಉದಾಹರಣೆಗಳನ್ನು ಕಾಣುತ್ತೇವೆ.

ಹತ್ತನೇ ಶತಮಾನದಲ್ಲಿ ಪಂಪನು ತನ್ನ ಕೃತಿಗಳಲ್ಲಿ 'ಕದಳಿಗರ್ಭಶ್ಯಾಮ, ಗುಂಗುರು ಕೂದಲಿನವನು, ಕಮಲದಂತಹ ಮುಖವುಳ್ಳವನು' ಎಂದು ಮೊದಲಾಗಿ ತನ್ನ ಸೌಂದರ್ಯ ವರ್ಣನೆ ಮಾಡಿಕೊಂಡಿದ್ದಾನೆ. ಈ ಅಂಶಗಳು ಪಂಪನು ಅವನನ್ನು ಪರಿಚಯ ಮಾಡಿಕೊಂಡಿರುವ ಬಗ್ಗೆ ತಿಳಿಸುತ್ತವೆ. ರನ್ನನು ಅವನ ತಂದೆ, ತಾಯಿ, ಹೆಂಡತಿಯನ್ನು ಕುರಿತು ಹೇಳುವುದರ ಜೊತೆಗೆ ಅವನ ಕೃತಿಯನ್ನು ಪರೀಕ್ಷಿಸುವವರಿಗೆ ಎಂಟೆದೆಯಿರಬೇಕು ಎಂದು ಹೇಳಿಕೊಳ್ಳುತ್ತಾನೆ. ಪೊನ್ನನು ಕೂಡ ತನ್ನ ಕಾವ್ಯರಚನಾ ಸಾಮರ್ಥ್ಯವನ್ನು 'ಕಾಳಿದಸನಿಗಿಂತ ನೂರ್ಮಡಿ'ಯಾಗಿ

ರಚಿಸುತ್ತೇನೆ ಎಂದು ಪ್ರಶಂಸಿಸಿಕೊಂಡಿದ್ದಾನೆ. ಇಂತಹ ಹಲವಾರು ವೈಯಕ್ತಿಕವಾದ ಸ್ವವಿವರಗಳನ್ನು ಪ್ರಾಚೀನ ಕೃತಿಗಳಲ್ಲಿ ಕಾಣಬಹುದಾಗಿದೆ. ಆದರೂ ಈ ರೀತಿಯ ಹೆಸರುಗಳು, ಊರು ಮತ್ತು ಆತ್ಮಪ್ರಶಂಸೆ ಮಾಡಿಕೊಳ್ಳುವ ಮಾತುಗಳು ಆತ್ಮಕಥೆಯಾಗಲಾರವು. ಈ ಕೃತಿಗಳಿಂದ ಆತ್ಮಚರಿತ್ರೆಯ ಸ್ವರೂಪದ ಸೂಕ್ಷ್ಮತೆಗಳನ್ನು ಮಾತ್ರ ಗಮನಿಸಬಹುದಾಗಿದೆ. ಆತ್ಮಕಥೆಯ ಎಳೆಗಳನ್ನು ಪ್ರಾಚೀನ ಸಾಹಿತ್ಯದಿಂದಲೇ ಗುರುತಿಸಿದ ಹಲವಾರು ಸಾಹಿತಿಗಳು ಆತ್ಮಕಥೆಯ ಹುಟ್ಟು ಅದರ ಬೆಳವಣಿಗೆ ಕನ್ನಡದಿಂದಲೇ ಬೆಳೆದದ್ದು. ಅದು ಪಾಶ್ಚಾತ್ಯರ ಪ್ರಭಾವದಿಂದ ಜೀವಂತಿಕೆ ತುಂಬಿಕೊಂಡಿದೆ ಎಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಶಿವರುದ್ರಪ್ಪ ಅವರ 'ಕನ್ನಡ ಕವಿಗಳ ಕಾವ್ಯ ಕಲ್ಪನೆ' ಕೃತಿಯನ್ನು ಗಮನಿಸಬಹುದಾಗಿದೆ.

ಹನ್ನೆರಡನೇ ಶತಮಾನದಲ್ಲಿ ಸಾಂಪ್ರದಾಯಿಕ ಸಾಹಿತ್ಯದ ಚೌಕಟ್ಟನ್ನು ಹೊರತುಪಡಿಸಿ ವಚನಗಳನ್ನು ರಚಿಸಿದ್ದು ತಮ್ಮಲ್ಲಿನ ಅನುಭವಗಳನ್ನು ಹೊರಹಾಕುವ ವಿಶಿಷ್ಟವಾದ ಅಭಿವ್ಯಕ್ತಿಯಾಗಿ ಕಂಡುಬಂದಿತು. ಬಹುಮುಖ್ಯವಾಗಿ ಆತ್ಮಕಥೆಯ ಮೊದಲ ರೂಪವನ್ನು ಬಸವಣ್ಣ, ಅಕ್ಕಮಹಾದೇವಿಯವರ ವಚನಗಳಲ್ಲಿ ಗುರುತಿಸಲಾಗಿದೆ. ಆತ್ಮಕಥೆಗಳೂ ಸಹ ಬರಹಗಾರನ ಮತ್ತು ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳನ್ನು ಕಟ್ಟಿಕೊಡುತ್ತವೆ. ಅದೇ ಮಾದರಿಯಲ್ಲಿ ವಚನಕಾರರು ಸಮಾಜದಲ್ಲಿ ನಡೆಯುತ್ತಿದ್ದ ಅನಿಷ್ಟ ಪದ್ಧತಿ, ಮೂಢನಂಬಿಕೆಗಳು, ಒಳಿತು ಕೆಡುಕುಗಳನ್ನು ತಿಳಿಸುವ ಈ ವಚನಗಳು ಆತ್ಮಕಥೆಗಳಂತೆ ಸಮಾಜ ಮತ್ತು ವೈಯಕ್ತಿಕ ಅನುಭವಗಳನ್ನು ತಿಳಿಸುತ್ತಾ ಹೋಗುತ್ತವೆ. ಬರಹಗಾರರಲ್ಲಿ ಆತ್ಮಪ್ರಶಂಸೆ ಮತ್ತು ತನ್ನನ್ನು ಕುರಿತು ಹೇಳಿಕೊಂಡಿರುವುದು ವಚನಗಳ ಮೂಲಕ ತಿಳಿದುಬರುತ್ತದೆ. ಆತ್ಮಕಥೆಯ ಹುಟ್ಟು ಪಂಪನ ಕಾಲಘಟ್ಟದಲ್ಲಿ ಸೂಕ್ತವಾಗಿ ಅದರ ಎಳೆಗಳು ಕಂಡು ಬರುತ್ತವಾದರೂ ವಚನಸಾಹಿತ್ಯದಲ್ಲಿ ಆತ್ಮಕಥೆಯ ನಿಖರವಾದ ಮಾಹಿತಿಗಳು ಕಂಡು ಬರುತ್ತವೆ.

ಮಧ್ಯಯುಗದ ಭಕ್ತಿ ಕವಿಯಾಗಿದ್ದ ಹರಿಹರನ ಶತಕಗಳಲ್ಲಿ ಆತ್ಮಕಥೆಗಳ ಮಾಹಿತಿಗಳು ಸಿಗುತ್ತವೆ. ಹಂಪಿಯ ವಿರೂಪಾಕ್ಷನ ಬಗ್ಗೆ ತನ್ನಲ್ಲಿರುವ ಭಕ್ತಿ ಭಾವನೆ, ಸಂಸಾರ, ರಾಜಸೇವೆ ಇವೆಲ್ಲವುಗಳಿಂದಲೂ ಮುಕ್ತವಾಗಿ ಭಕ್ತಿಜೀವನ ಸಾಗಿಸಿದ ಹರಿಹರನು ತನ್ನ ಶತಕಗಳಲ್ಲಿ ಜೀವನಾನುಭವಗಳನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ. ನಂತರ ಬಂದಂತಹ ರಾಘವಾಂಕ, ಜನ್ನ, ಕುಮಾರವ್ಯಾಸ, ಸರ್ವಜ್ಞ, ದಾಸ ಸಾಹಿತ್ಯದಲ್ಲಿಯೂ ಆತ್ಮಪ್ರಶಂಸೆ ಅಥವಾ 'ನಾನು' ಎನ್ನುವಂತಹ ಪ್ರತ್ಯಯ ಸಿಗುತ್ತದೆ. ಕುಮಾರವ್ಯಾಸನು ತನ್ನ ಕಾವ್ಯ ತಾನು ಬರೆದುಕೊಂಡಿಲ್ಲ, ಗದುಗಿನ ವೀರನಾರಾಯಣ ಬರೆದನೆಂದು ಹೇಳಿಕೊಂಡಿದ್ದಾನೆ. 'ಸರ್ವಜ್ಞನೆಂಬುವವನು ಗರ್ವದಿಂದಾವನೆ, ಸರ್ವರೊಳಗೊಂದು ನುಡಿಯ ಕಲಿತು ಸಕಲ ವಿದ್ಯೆಯ ಪರ್ವತವೇ ಆದ ಸರ್ವಜ್ಞ' ಎನ್ನುವಂತಹ ಈ ಸಾಲಿನಲ್ಲಿ ಸರ್ವಜ್ಞನು ತನ್ನನ್ನು ತಾನೇ ವಿಮರ್ಶಿಸಿಕೊಂಡಂತೆ ಹೇಳಿಕೊಂಡಿದ್ದಾನೆ. ಆದರೂ ಇವುಗಳನ್ನು ಆತ್ಮಚರಿತ್ರೆಯೆಂದು ಪರಿಗಣಿಸಲು ಕಷ್ಟಸಾಧ್ಯ, ಸಾಹಿತ್ಯದ

ವಿವಿಧ ಪ್ರಕಾರಗಳಲ್ಲಿ ರಚನೆಯಾದ ಮಹಾಕಾವ್ಯ, ವಚನ, ಕೀರ್ತನೆಗಳು ತಮ್ಮದೇ ಆದ ವಿಶಿಷ್ಟತೆ ಪಡೆದುಕೊಂಡಿವೆ. ಹಾಗಾಗಿ ಅವುಗಳನ್ನು ಆತ್ಮಕಥೆಯ ಎಳೆಗಳು ಎಂದು ಗುರುತಿಸಬಹುದೇ ವಿನಃ ಆತ್ಮಕಥೆಯೆಂದು ಹೇಳಲು ಸಾಧ್ಯವಿಲ್ಲ.

ಪ್ರಾಚೀನ ಕವಿಗಳಲ್ಲಿ ತಮ್ಮ ಅನುಭವಗಳನ್ನು ಅಭಿವ್ಯಕ್ತಿಸುವಂತಹ ಇಚ್ಛೆಯಿದ್ದರೂ ಅದನ್ನು ಮರೆಮಾಚಿಕೊಂಡಿರುವುದನ್ನು ಕಾಣುತೇವೆ. ಬಹುತೇಕ ಕವಿಗಳು ತಮ್ಮ ಕೃತಿಗಳಲ್ಲಿ ಪರೋಕ್ಷವಾಗಿಯೇ ತಮ್ಮ ವ್ಯಕ್ತಿತ್ವವನ್ನು ನಿರೂಪಿಸಿಕೊಂಡಿದ್ದಾರೆ. ಆದರೂ ನೇರವಾಗಿ ತಮ್ಮ ಜೀವನಕಥೆಯನ್ನು ಬರೆದುಕೊಳ್ಳುವುದಕ್ಕಿಂತ ರಾಜರ, ದೇವರುಗಳ, ಮತಧರ್ಮಗಳ ಬಗೆಗಿನ ಆಸಕ್ತಿಯೇ ಕವಿಗಳ ಕೃತಿಗಳಲ್ಲಿ ಹೆಚ್ಚು ಕಂಡುಬರುತ್ತದೆ. ಹಾಗಾಗಿಯೇ ಮತಧರ್ಮ ಮತ್ತು ಪುರಾಣ ಕೃತಿಗಳ ಬಗೆಗಿನ ಸಾಹಿತ್ಯವೇ ಹೆಚ್ಚಾಗಿ ರಚನೆಗೊಂಡಿದೆ. ಆಲೂರು ವೆಂಕಟರಾಯರು ತಮ್ಮ ಆತ್ಮಕಥೆಯನ್ನು ಬರೆಯುವಾಗ 'ತನ್ನ ಜೀವನಚರಿತ್ರೆಯನ್ನು ತಾನೇ ಬರೆಯುವುದು ಸನಾತನ ಸಂಪ್ರದಾಯವಲ್ಲ, ತಮ್ಮ ಸ್ತುತಿಯನ್ನು ತಾವೇ ಮಾಡಿಕೊಳ್ಳುವರೇ? ಆದರೆ ಪಾಶ್ಚಾತ್ಯರು ತಮ್ಮ ಆತ್ಮಚರಿತ್ರೆ ಬರೆಯುವುದೊಂದು ಶಾಸ್ತ್ರವನ್ನೇ ನಿರ್ಮಿಸಿಕೊಂಡಿದ್ದಾರೆ' ಎಂದು ಹೇಳಿದ್ದಾರೆ. ಆಲೂರರ ಅಭಿಪ್ರಾಯವು ಹಿಂದಿನ ಕವಿಗಳಲ್ಲಿಯೂ ಆತ್ಮಕಥೆ ಬರೆಯುವಲ್ಲಿ ವಿಫಲತೆ ಕಂಡುಕೊಂಡಿರುವುದು ಕಾರಣವಾಗಿರಬೇಕು. ಆತ್ಮಕಥೆಯನ್ನು ಗುರುತಿಸುವಂತಹ 'ಆತ್ಮಪ್ರಶಂಸೆ', 'ನಾನು' ಎಂಬ ಪದಗಳು ವ್ಯಕ್ತಿತ್ವದ ಮಾಹಿತಿ ಜೀವನಾನುಭವದ ಎಳೆಗಳನ್ನು ಪ್ರಾಚೀನ ಕೃತಿಗಳಲ್ಲಿ ನೋಡಬಹುದಾಗಿದೆ. ಇಂತಹ ಪದಗಳ ಎಳೆಗಳನ್ನಿಟ್ಟುಕೊಂಡು ಆತ್ಮಕಥೆ ಎನ್ನುವುದಾದರೆ, ಆತ್ಮಕಥೆಗಳ ಹುಟ್ಟನ್ನು ಶಾಸನಗಳಲ್ಲಿಯೂ ಕಾಣಬಹುದಾಗಿದೆ.

ಕನ್ನಡದ ಪ್ರಾಚೀನ ಶಾಸನಗಳಾದ ಹಲ್ಮಿಡಿ ಶಾಸನ, ಗಂಗಾಧರಂ ಶಾಸನ, ಆತಕೂರು ಶಾಸನ, ಮಸ್ಕಿ ಶಾಸನ, ಐಹೊಳೆ ಶಾಸನಗಳಲ್ಲಿ ಆತ್ಮಕಥಾಂಶವುಳ್ಳ ಮಾಹಿತಿಗಳು ದೊರೆಯುತ್ತವೆ. ಹಲ್ಮಿಡಿಯಲ್ಲಿ 'ಆನ್' ಪ್ರಾದೇಶಿಕವಾದ ಮಾಹಿತಿಗಳು ದೊರೆಯುತ್ತವೆ. ಗಂಗಾಧರಂ ಶಾಸನ ಪಂಪನ ತಮ್ಮನಾದ ಗಂಗಾಧರನು ಕೆತ್ತಿಸಿದ್ದು. ಈ ಶಾಸನದಲ್ಲಿ ಕೌಟುಂಬಿಕ ವಿವರಗಳನ್ನು ಮತ್ತು ಪಂಪನ ಬಗೆಗಿನ ಮಾಹಿತಿಗಳನ್ನು ಒಳಗೊಂಡಿದೆ. ಮಸ್ಕಿ ಶಾಸನದಲ್ಲಿ 'ಚಪಡೇನಾ ಲಿಖಿತ ಲಿಪಿಕಾರೇನಾ' ಎಂಬ ಸಾಲು ಇದ್ದು ಚಪಡನೆಂಬುವವನು ಈ ಶಾಸನದ ಲಿಪಿಕಾರನಾಗಿದ್ದು, ಆತ್ಮಪ್ರಶಂಸೆಯಿಂದ ಹೇಳಿಕೊಂಡಂತಹ ಅಂಶವುಳ್ಳದ್ದಾಗಿದೆ. ಆತಕೂರು ಶಾಸನದಲ್ಲಿ ರವಿ ಎನ್ನುವವನು ಅವನ ಮಗಳ ಬಗ್ಗೆ ಪ್ರಶಂಸಿಸುವುದರ ಜೊತೆಗೆ ತನ್ನನ್ನು ತಾನು ಪ್ರಶಂಸಿಸಿಕೊಂಡಿರುವ ದಾಖಲೆ ಕಂಡು ಬಂದಿದೆ. ಇಂತಹ ಎಲ್ಲಾ ಮಾಹಿತಿಗಳಿಂದ ಆತ್ಮಕಥೆಯ ಸೂಕ್ಷ್ಮ ಪದಬಳಕೆಯು ಶಾಸನಗಳಲ್ಲಿ ವ್ಯಕ್ತಗೊಂಡಿರುವುದು ಸ್ಪಷ್ಟ ನಿದರ್ಶನವಾಗಿದೆ.

'ಭಾರತೀಯರಿಗೆ ಚರಿತ್ರೆಯ ಪ್ರಜ್ಞೆಯಿಲ್ಲ' ಎಂಬ ಪಾಶ್ಚಾತ್ಯರ ಈ ಕುಹುಕದಿಂದಾಗಿ ಭಾರತೀಯರಲ್ಲಿ ರಾಜರು, ವಿದ್ವಾಂಸರು, ಶ್ರೇಷ್ಠನಾಯಕರು ಜೀವನ ಚರಿತ್ರೆಯನ್ನು ಕಟ್ಟುವಲ್ಲಿ

ಮುಂದಾದರು. ಇದರ ಫಲವಾಗಿ 'ಬಾಬರ್ ನಾಮ', 'ಅಕ್ಬರ್ ನಾಮ', 'ಹೈದರ್ ನಾಮ' ಮುಂತಾದವು ರಾಷ್ಟ್ರಮಟ್ಟದಲ್ಲಿ ಉರ್ದು ಭಾಷೆಯಲ್ಲಿ ಜೀವನಚರಿತ್ರೆ ಮತ್ತು ಆತ್ಮಕಥೆಗಳು ಹುಟ್ಟಿಕೊಂಡವು. ಕನ್ನಡದಲ್ಲಿ ಟಿಪ್ಪುಸುಲ್ತಾನನು ದಿನನಿತ್ಯ ಬರೆಯುತ್ತಿದ್ದದ್ದು ವಿಶೇಷವಾಗಿತ್ತು. ಈ ದಿನಚರಿಯೇ ಅವರ ಜೀವನದ ಮೇಲೆ ಬೆಳಕು ನೀಡಿ ದಾಖಲಾಗಿದ್ದು ವಿಶೇಶ.

ಕನ್ನಡ ಸಾಹಿತ್ಯದ ಬೆಳವಣಿಗೆ ಹಲವು ಶತಮಾನಗಳಿಂದ ಕಂಡು ಬಂದಿದ್ದರೂ, ಆತ್ಮಕಥಾ ಪ್ರಕಾರವು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದಾಗಿಯೇ ಕನ್ನಡದಲ್ಲಿ ನೆಲೆಯೂರಿರುವುದನ್ನು ಕಾಣುತ್ತೇವೆ. ಕನ್ನಡದಲ್ಲಿ ಹತ್ತೊಂಭತ್ತನೆಯ ಶತಮಾನದ ಮಧ್ಯದವರೆಗೂ ಆತ್ಮಕಥೆ ಪ್ರಕಾರಗಳು ಕಂಡುಬಂದಿಲ್ಲ. ಮೊಟ್ಟಮೊದಲು ಸ್ವತಂತ್ರ ಆತ್ಮಚರಿತ್ರೆ ಬರೆದದ್ದು ಹರ್ಡೇಕರ್ ಮಂಜಪ್ಪನವರು. ೧೯೩೬ ರಲ್ಲಿ 'ನನ್ನ ಮೂವತ್ತು ವರ್ಷಗಳ ಕಾಣಿಕೆ' ಎಂಬುದು ಅವರ ಸಂಕ್ಷಿಪ್ತ ಪೂರ್ವ ವೃತ್ತಾಂತ ಹಾಗೂ ಅವರ ಸಾರ್ವಜನಿಕ ಜೀವನದ ನಿರೂಪಣೆಯನ್ನು ತಿಳಿಸುವ ಆತ್ಮಕಥೆಯಾಗಿದೆ. ನಂತರದ ಆತ್ಮಕಥೆಯೆಂದರೆ, ೧೯೩೯ ರಲ್ಲಿ ಪ್ರಕಟವಾದ ಜಿ.ಪಿ.ರಾಜರತ್ನಂ ಅವರ 'ಹತ್ತು ವರುಷ'. ಇವುಗಳು ಕನ್ನಡಕ್ಕೆ ಮೊದಲು ಪರಿಚಯಿಸಲ್ಪಟ್ಟ ಆತ್ಮಕಥೆಗಳು ಎಂದು ದಾಖಲಾಗಿವೆ.

ಆತ್ಮಕಥೆಯು ವಿಶಿಷ್ಟ ಪ್ರಕಾರವಾಗಿ ಕಂಡುಬಂದಿದ್ದು ಅನೇಕ ಹಿರಿಯ ತಲೆಮಾರಿನ ಸಾಹಿತಿಗಳು ಅವರ ಜೀವನದ ಅನುಭವಗಳನ್ನು ದಾಖಲುಮಾಡಿಕೊಳ್ಳುವ ಹವ್ಯಾಸ ಪ್ರಾರಂಭವಾದಾಗ. ಮುಂದಿನ ಪೀಳಿಗೆಗೆ ತಿಳಿಸುವುದಕ್ಕಾಗಿಯೋ, ಸ್ನೇಹಿತರ ಒತ್ತಾಯದಿಂದಲೋ ಆತ್ಮಕಥೆ ಹೊರಬಂದಿರುವುದನ್ನು ಗುರುತಿಸಬಹುದು. ಒಂದು ಕಾಲಕ್ಕೆ ಶ್ರೀಮಂತರು, ರಾಷ್ಟ್ರನಾಯಕರು, ವಿದ್ವಾಂಸರು ಮೊದಲಾದವರ ಜೀವನ ವಿಧಾನವನ್ನು ಮಾತ್ರ ದಾಖಲು ಮಾಡುವ ಪಾಠವಿತ್ತು. ಒಂದರ್ಥದಲ್ಲಿ 'ಆತ್ಮಕಥೆ' ಎಂಬುದು ಇಳಿವಯಸ್ಸಿನಲ್ಲಿ ಬರೆಯುವಂತಹ ಸಾಹಿತ್ಯ ಪ್ರಕಾರವಾಗಿ ಹೆಸರು ಪಡೆದಿತ್ತು. ಕಾಲಾಂತರದಲ್ಲಿ ಆತ್ಮಕಥಾ ಸಾಹಿತ್ಯವು ಸಾರ್ವತ್ರಿಕ ಸಾಹಿತ್ಯವೆಂಬಂತೆ ಗೋಚರವಾಯಿತು. ರಾಜಕಾರಣಿಗಳು, ಶಿಕ್ಷಕರು, ಮಠಾಧೀಶರುಗಳು, ರೋಗಿಗಳು, ಉನ್ನತ ಅಧಿಕಾರಿಗಳು, ಹೋರಾಟಗಾರರು ಮುಂತಾದ ರಂಗಗಳಲ್ಲಿ ತಮ್ಮದೇ ಆದ ವಿಶಿಷ್ಟ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಗಳು ಆತ್ಮಕತೆ ರಚನೆಯಲ್ಲಿ ತೊಡಗಿಕೊಂಡು ಯಶಸ್ಸನ್ನೂ ಪಡೆದಿದ್ದಾರೆ.

ಕನ್ನಡದ ಮಟ್ಟಿಗೆ ಆಧುನಿಕ ಸಾಹಿತ್ಯದ ಪ್ರಕಾರವಾಗಿ ಆತ್ಮಕಥೆ ಬೆಳೆದದ್ದು ಪಶ್ಚಿಮದ ಪ್ರಭಾವದಿಂದ ಎಂದು ಹೇಳಬಹುದು. ಆತ್ಮಕಥೆಗಳು ಆಧುನಿಕತೆಯ ವಿಶಿಷ್ಟವಾದ ಭಾಗವಾಗಿ ಬೆಳೆದಿವೆ. ಆದರೆ ನಮ್ಮ ಸಾಹಿತ್ಯ ಸಂಸ್ಕೃತಿಯ ವಿಶಿಷ್ಟ ಧೋರಣೆಯಿಂದ ಗಂಭೀರ ಚರ್ಚೆಗೆ ಒಳಪಡಿಸಲು ಸಾಧ್ಯವಾಗಿಲ್ಲ. ನಾವು ಗೋಕಾಕ್ ರ 'ಭಾರತ ಸಿಂಧುರಶ್ಮಿ'ಯನ್ನು ಚರ್ಚಿಸಬಲ್ಲೆವು. ಆದರೆ ಕನ್ನಡದ ಶ್ರೇಷ್ಠ ಆತ್ಮಕಥೆಗಳನ್ನಲ್ಲ. ಕಾರಂತರ 'ಮೂಕಜ್ಜಿಯ ಕನಸುಗಳು' ಕಾದಂಬರಿಯಾಗಿರುವ ಕಾರಣಕ್ಕೆ 'ಹುಚ್ಚು ಮನಸ್ಸಿನ ಹತ್ತುಮುಖಗಳು' ಕೃತಿಗಿಂತ ಮುಖ್ಯವಾಗುತ್ತದೆ. ಪ್ರಾಚೀನ ಸಾಹಿತ್ಯದಲ್ಲಿ ಇಲ್ಲದ ಒಂದು ಬಗೆಯ ಶ್ರೇಣೀಕರಣ ಆಧುನಿಕ ಸಾಹಿತ್ಯದಲ್ಲಿ ಇರುವುದನ್ನು ಕಾಣುತ್ತೇವೆ.

ಇಂತಹ ತಾರತಮ್ಯಗಳು ಸಾಹಿತ್ಯದಲ್ಲಿ ಆತ್ಮಕಥೆಯ ಸೃಜನಶೀಲತೆಯನ್ನು ಪ್ರಶ್ನಿಸುವಂತಾಗಿದೆ. ಆತ್ಮಕಥೆಯನ್ನು ಸೃಜನಶೀಲ ಸಾಹಿತ್ಯ ಎಂಬುದಾಗಿ ಒಪ್ಪಿಕೊಳ್ಳುವುದು ಸಾಹಿತಿಗಳಿಗೆ, ಚಿಂತಕರಿಗೆ ಸಾಧ್ಯವಾಗಿಲ್ಲ. ಸಾಹಿತ್ಯ–ಸಾಹಿತ್ಯೇತರ, ಕಾವ್ಯ–ಗದ್ಯ, ಸೃಜನ–ಸೃಜನೇತರ ಈ ತರಹದ ವಿಭಾಗಗಳಿಂದಾಗಿ ಆತ್ಮಕಥೆಗೆ ಸಿಗುವಂತಹ ಮನ್ನಣೆಗೆ ಹಿನ್ನಡೆಯಾಗಿದೆ. ಆತ್ಮಕಥೆಯ ಅನುಭವಗಳನ್ನು ನಿರೂಪಣೆ ಮಾಡುತ್ತೇವೆಯೇ ಹೊರತು ಸಾಹಿತ್ಯದ ಇತರ ಪ್ರಕಾರಗಳಾದ ಕಥೆ, ಕಾದಂಬರಿ ಕಾವ್ಯಗಳಂತೆ ಸೂಕ್ಷ್ಮವಾದ ಬರವಣಿಗೆಯ ದೃಷ್ಟಿಯಿಂದ ಗಮನಿಸುವುದು ತೀರ ವಿರಳ. ಸಾಹಿತ್ಯ ರಚನೆಯ ಕೌಶಲ್ಯವು ಆತ್ಮಕಥೆಗಳಲ್ಲಿ ಅಷ್ಟಾಗಿ ಕಾಣುವುದಿಲ್ಲ. ಹೀಗಾಗಿ ಸಾಹಿತ್ಯದ ಜೊತೆಗಿನ ಸಮಾನತೆ ಆತ್ಮಕಥೆಗಳಿಗೆ ಕಡಿಮೆಯಾಗಿರುವುದು ಚಿಂತನೆಗೆ ದಾರಿ ಮಾಡಿಕೊಡುತ್ತದೆ.

ಕನ್ನಡದಲ್ಲಿ ಆತ್ಮಕಥೆ ಮತ್ತು ಜೀವನಚರಿತ್ರೆಗಳು ಬೇರೆ ಬೇರೆ ಪ್ರಕಾರಗಳಲ್ಲಿ ರೂಪಾಂತರಗೊಂಡು ಪ್ರಕಟಗೊಳ್ಳುತ್ತಿವೆ. ಅದರಲ್ಲೂ ಆತ್ಮಕಥೆ ಮತ್ತು ಕಾದಂಬರಿ ಪ್ರಕಾರಗಳಿಗೆ ಒಳಸಂಬಂಧವಿರುವುದನ್ನು ಗುರುತಿಸಲಾಗಿದೆ. ಕಾದಂಬರಿ ಕ್ಷೇತ್ರವು ತುಂಬಾ ಜನಪ್ರಿಯ ಸಾಹಿತ್ಯ ಪ್ರಕಾರವಾಗಿದೆ. ಆತ್ಮಕಥೆಯ ನಿರೂಪಣೆಯು ಕಾದಂಬರಿಗೆ ಸಮೀಪವಾದ ಪ್ರಕಾರವಾಗಿದ್ದು, ಅದರದೇ ಆದ ಓದುಗರನ್ನು ಕಟ್ಟಿಕೊಂಡಿದೆ. ಕನ್ನಡದಲ್ಲಿ ಆತ್ಮಕಥನ ಬರೆಯುವ ಮಾದರಿಯು ಕಾದಂಬರಿಗಳಿಗೆ ಅನ್ವಯಿಸಿ ಬರೆಯುವ ಪದ್ಧತಿಯು ಬೆಳೆದುಕೊಂಡು ಬಂದಿದೆ. ಅಂತಹ ಕದಂಬರಿಗಳಲ್ಲಿ ಪ್ರಮುಖವಾಗಿ ತೇಜಸ್ವಿ ಯವರ 'ಕರ್ವಾಲೋ' ಮತ್ತು ಕಾರಂತರ 'ಅಳಿದಮೇಲೆ' ಕಾದಂಬರಿಗಳನ್ನು ಗುರುತಿಸಬಹುದು. ಇವುಗಳಲ್ಲಿ ಆತ್ಮಕಥೆಗಳ ನಿರೂಪಣೆಯಂತೆ ಕಂಡು ಬರುವ 'ನಾನು' ಎಂಬ ಪದವು ಈ ಕಾದಂಬರಿಯ ವಿಶಿಷ್ಟತೆಯಾಗಿದೆ. ಕೇವಲ ಇಂತಹ ಎಳೆಗಳನ್ನು ಆಧರಿಸಿ ಆತ್ಮಕಥೆಯ ಜೊತೆ ಸಂಬಂಧ ಕಟ್ಟುವುದು ಸುಲಭವಲ್ಲ. ಕಾದಂಬರಿಗಳಲ್ಲಿ ಪಾತ್ರಗಳ ಜೀವಂತಿಕೆ ಹಿಡಿಯುವ ಸಲುವಾಗಿ 'ನಾನು' ಎಂಬ ಪದಗಳನ್ನು ಬಳಸಿರುವ ಸಾಧ್ಯತೆಯನ್ನು ಗುರುತಿಸಬಹುದು. ಅಲ್ಲದೆ ಅದೊಂದು ನಿರೂಪಣೆಯ ತಂತ್ರವೂ ಕೂಡ.

ಆತ್ಮಕಥೆ ಮತ್ತು ಜೀವನಚರಿತ್ರೆಯು ಒಂದೇ ದಾರಿಯಲ್ಲಿ ಸಾಗಿದರೂ ಅವುಗಳಲ್ಲಿನ ಭಿನ್ನಾಭಿಪ್ರಾಯಗಳು ಅವನ್ನು ಬೇರ್ಪಡಿಸುತ್ತವೆ. ಆತ್ಮಕಥೆಯಲ್ಲಿ 'ನಾನು' ಎಂಬ ಆತ್ಮ ಪ್ರಶಂಸೆಯ ಜೊತೆಗೆ ವಿಮರ್ಶಿಸಿಕೊಳ್ಳುವ ತನ್ನತನದ ನೈಜತೆಯ ಘಟನೆಗಳನ್ನು ಹಿಡಿದಿಡಲು ಸಾಧ್ಯ. ಆತ್ಮಕಥೆಗಳಲ್ಲಿ ತನ್ನನ್ನು/ಅವರನ್ನು ಕುರಿತು ಪ್ರಶಂಸಿಸಿಕೊಳ್ಳುತ್ತಾರೆ. ಜೀವನಚರಿತ್ರೆಯಲ್ಲಿ ಆನೇಕ ಜೀವನದ ವಿಧಾನವನ್ನು ಬರೆಯುವ 'ಅವರು' ಎಂಬ ಪದದಿಂದಲೇ ನಿರೂಪಿಸುತ್ತಾರೆ. ಬರಹಗಾರನು ವಿವಿಧ ದಾಖಲೆಗಳನ್ನು ಅನ್ವಯಿಸಿಕೊಂಡು ಬರೆದಿರುತ್ತಾನೆಯೇ ವಿನಃ ಲೇಖಕನ ಅಂತರಂಗದ ಅನುಭವವನ್ನು ಅನುಭವಿಸಲು ಸಾಧ್ಯವಾಗುವುದಿಲ್ಲ. ಬರಹಗಾರನು ಅನ್ಯರನ್ನು ಹೊಗಳುವ ಜೊತೆಗೆ ಅವನನ್ನು ಕುರಿತು ವರ್ಣಿಸಿಕೊಳ್ಳುವ ಅವಕಾಶ ಹೆಚ್ಚಾಗಿರುತ್ತದೆ. ಇಂತಹ ಹಲವಾರು ಅಂಶಗಳಿಂದ ಜೀವನಚರಿತ್ರೆ ಮತ್ತು ಆತ್ಮಕಥೆಗಳ ನಡುವೆ ಸೂಕ್ಷ್ಮ ಭಿನ್ನತೆಗಳಿರುವುದನ್ನು ಗುರುತಿಸಬಹುದು.

ಆತ್ಮಕಥೆಗಳು ಸಾಮಾನ್ಯವಾಗಿ ಓದುಗರನ್ನು ಹೆಚ್ಚು ಆಪ್ತವಾಗಿಸುತ್ತವೆ. ಅದರಲ್ಲೂ ಶ್ರೀಮಂತರ, ಶ್ರೇಷ್ಠನಾಯಕರ, ಸಾಹಿತಿಗಳ ಜೀವನಾನುಭವಗಳು ಆತ್ಮಕಥೆಯಾದರೆ ಅವಕ್ಕೆ ಹೆಚ್ಚಿನ ಮನ್ನಣೆ ಸಿಗುತ್ತದೆ. ಆತ್ಮಕಥೆಗಳು ಕನ್ನಡಕ್ಕೆ ಬಂದ ಪ್ರಾರಂಭದಲ್ಲಿ ಶ್ರೇಷ್ಠರ ಜೀವನವನ್ನು ಓದುವುದೇ ಒಂದು ಸಾಹಿತ್ಯ ಪ್ರಕಾರವಾಗಿತ್ತು. ಆತ್ಮಕಥನಕಾರರು ತಮ್ಮ ಜೀವನದ ಅನುಭವಗಳನ್ನು ಇಳಿವಯಸ್ಸಿನಲ್ಲಿ ದಾಖಲು ಮಾಡುವುದು ಸಾಮಾನ್ಯವಾದ ಸಂಗತಿಯಾಗಿತ್ತು. ಹುಟ್ಟು–ಸಾವುಗಳ ಮಧ್ಯದ ಅನುಭವದ ಘಟನೆಗಳನ್ನು ಅವರ ಸುತ್ತಮುತ್ತಲಿನ ಪರಿಸರದ ಚೌಕಟ್ಟಿನೊಳಗೆ ಬರೆದಿರುವುದನ್ನು ಗಮನಿಸಬಹುದಾದ ಸಂಗತಿಯಾಗಿದೆ. ಇಂತಹ ನೆನಪಿನ ಊಹೆಯಿಂದಲೇ ಬರೆಯುವಲ್ಲಿ ನೈಜ ಘಟನೆಗಳನ್ನು ಪ್ರಾಮಾಣಿಕವಾಗಿ ದಾಖಲು ಮಾಡುತ್ತಾರೆ ಎಂಬ ಸತ್ಯ ಪ್ರಶ್ನೆಯೊಂದನ್ನು ಹುಟ್ಟುಹಾಕುತ್ತದೆ. ಶ್ರೀರಂಗರು 'ಕಲ್ಪನಾ ಶಕ್ತಿಯನ್ನು ಪೂರ್ತಿಯಾಗಿ ಬದಿಗಿಡಲಾಗುವುದಿಲ್ಲ. ಆದರೆ ಸಾಹಿತ್ಯದಲ್ಲಿ ಕಲ್ಪನೆ ಅಗತ್ಯವಿದ್ದಂತೆ ಅದನ್ನು ಪ್ರತಿಪಾದಿಸುವ ಶೈಲಿಯನ್ನು ಕಂಡುಕೊಳ್ಳುವ ಅಗತ್ಯವಿದೆ. ಅದನ್ನು ಸಂಪೂರ್ಣ ವಾಸ್ತವವಾಗಿ ನಡೆದುದರ ಕತೆ ಎಂದು ಹೇಳಲು ಕಷ್ಟಸಾಧ್ಯ. ಲೇಖಕನ ಗೌರವಕ್ಕೆ ದಕ್ಕೆ ಉಂಟಾಗುವ ವಿಚಾರಗಳನ್ನು ಕೈಬಿಟ್ಟು ಬೇರೆ ವಿಚಾರಗಳನ್ನು ಬರೆದಿರುವುದನ್ನು ಕಾಣುತ್ತೇವೆ. ತನ್ನನ್ನು ತಾನು ಹೊಗಳಿಕೊಳ್ಳುವ ಬರವಣಿಗೆ ಆತ್ಮಕಥೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.' ಎಂದು ಹೇಳಿದ್ದಾರೆ.

ಶಿವರಾಮ ಕಾರಂತರು ಆತ್ಮಕಥೆಯನ್ನು ಬರೆಯುವಾಗ ತಮ್ಮ ಪ್ರಾಮಾಣಿಕತೆಯನ್ನು 'ಎಲ್ಲಾ ಸಂದರ್ಭಗಳು ನನ್ನ ಹೃದಯಕ್ಕೆ ತಾಗಿದ ಗೊಂದಲ, ನೋವು, ಕಸಿವಿಸಿಯನ್ನುಂಟು ಮಾಡಿದ ನೈಜ ಘಟನೆಗಳು ನನಗೆ ಕಾಣದ, ಕಂಡರೂ ಹೇಳಲು ಯೋಗ್ಯವಲ್ಲದಂತಹ ವಿಷಯಗಳು ಬಹಳಷ್ಟು ಇರಬಹುದು. ಆದರೆ ಇಲ್ಲಿ ನನಗೆ ನಾನೇ ಒಂದು ಚೌಕಟ್ಟು ಹಾಕಿಕೊಂಡು ಬರೆದಿದ್ದೇನೆ. ಪ್ರಾಮಾಣಿಕ ಅನಿಸಿಕೆಯ ಜೊತೆಗೆ ವ್ಯಕ್ತಿಯ ದೌರ್ಬಲ್ಯಗಳನ್ನು ಅನುಕಂಪದಿಂದ ದಾಖಲಿಸಿದ್ದೇನೆ' ಎಂದು ಹೇಳಿಕೊಂಡಿದ್ದಾರೆ.

ಆತ್ಮಕಥೆಯನ್ನು ಬರಹಗಾರರು ಅವರ ಸ್ವಹಿತಾಸಕ್ತಿಯಿಂದ ಬರೆದುಕೊಳ್ಳದೆ, ಸ್ನೇಹಿತರ, ಬಂಧುಗಳ ಒತ್ತಡಕ್ಕೆ ಮಣಿದು ಆತ್ಮಕಥೆ ರಚನೆ ಮಾಡಿರುವವರು ಹೆಚ್ಚು. ಬರಹಗಾರರು ಅವರ ಆತ್ಮಕಥೆಯಲ್ಲಿ ಜೀವನದ ವಿವರಗಳನ್ನು ಹುಟ್ಟಿನಿಂದ ಸಾವಿನವರೆಗೂ ಹೇಳಿಕೊಂಡಿದ್ದಾರೆ. ಕೆಲವರು ಕೆಲವೇ ವಿಷಯಗಳಿಗೆ ತಮ್ಮ ನೆನಪುಗಳನ್ನು ಸೀಮಿತಗೊಳಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇನ್ನೂ ಕೆಲವರು ವೈಯಕ್ತಿಕ ಬದುಕನ್ನು ದೂರವಿರಿಸಿ, ವೃತ್ತಿ ಬದುಕಿನ ಘಟನೆಗಳನ್ನು ದಾಖಲಿಸಿ ಶ್ರೇಷ್ಠ ಆತ್ಮಕಥಾ ನಿರೂಪಕರಾಗಿ ಯಶಸ್ವಿಯಾಗಿದ್ದಾರೆ. ಅನುಭವಗಳಲ್ಲಿ ವೈಯಕ್ತಿಕವಾದ ದಾಖಲೆಗಳನ್ನು ಮರೆಮಾಚುವುದು ಮತ್ತು ಅವರ ವೈಯಕ್ತಿಕವಾದ ಜೀವನದ ಕಹಿ ಘಟನೆಗಳನ್ನು ಮುಚ್ಚಿಡುವ ಸಾಧ್ಯತೆ ಆತ್ಮಕಥೆಗಳಲ್ಲಿ ಕಂಡುಬರುತ್ತದೆ.

ಆತ್ಮಕಥೆಯನ್ನು ಬರೆಯುವಾಗ ಸ್ವ–ವಿಮರ್ಶೆ ಮಾಡಿಕೊಳ್ಳುವುದು ಮತ್ತು ಮುಕ್ತ ಮನಸ್ಸಿನಿಂದ ರಚನೆ ಮಾಡುವುದು ಸಾಮಾನ್ಯ. ಶ್ರೇಷ್ಠವಾದ ಗದ್ಯದ ನಿರೂಪಣೆಯು ಆತ್ಮಕಥೆ ಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತದೆ. ಆತ್ಮಕಥೆಯನ್ನು ಬರೆಯುವಲ್ಲಿ ಲೇಖಕನು ತನ್ನ ಅನುಭವದ ಘಟನೆಗಳನ್ನು ದಾಖಲಿಸಿಕೊಳ್ಳುವಾಗ ಸ್ವ–ವಿಮರ್ಶೆ ಮಾಡಿಕೊಂಡು ನಂತರ ಬರೆಯುತ್ತಾನೆ. ಇದನ್ನು ಆತ್ಮವಿಮರ್ಶೆ ಎಂದೂ ಕರೆಯಬಹುದು. ಮುಕ್ತ ಮನಸ್ಸು, ವಿಶಿಷ್ಟ ನಿರೂಪಣಾ ಶೈಲಿ ಬರವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸಾಹಿತ್ಯದ ಭಾಷೆಯನ್ನು ಬಳಸದೇ ಆಡುಮಾತಿನ ದಾಟಿಯಲ್ಲಿ ರಚಿಸಿರುವುದನ್ನು ಕನ್ನಡದ ಆತ್ಮಕಥೆಗಳಲ್ಲಿ ಕಾಣಬಹುದಾಗಿದೆ. ಪಿ.ಲಂಕೇಶರು ಸಾಹಿತ್ಯದ ಭಾಷೆಯನ್ನು ಬಳಸದೇ ಆಡುಮಾತಿನ ದಾಟಿಯಲ್ಲಿ ನಿರೂಪಿಸಿರುವುದನ್ನು ಅವರ ಆತ್ಮಕಥೆಯಲ್ಲಿ ಕಾಣಬಹುದು. ಅದೇ ರೀತಿ ಮಹಿಳಾ ಆತ್ಮಕಥೆಗಳಲ್ಲಿ ಪ್ರತಿಭಾ ನಂದಕುಮಾರ್ ಅವರು ವಿಶಿಷ್ಟ ಕಥನ ಕ್ರಮದ ಮೂಲಕ ತಮ್ಮ ನೈಜ ಕಥೆಯನ್ನು ನಿರೂಪಿಸಿರುವುದನ್ನು ಕಾಣುತೇವೆ. ಲಂಕೇಶರು ಆತ್ಮಕಥೆಯ ಕುರಿತು, ಬದುಕು ಒಂದು ದೃಷ್ಟಿಯಲ್ಲಿ ಕಾರಣವಿರುವ, ಕಾರಣವಿರಲಾರದ ಅಳುಕು ಪಾಪ ಪ್ರಜ್ಞೆಯ ಸರಮಾಲೆ. ಈ ಘಟ್ಟದಲ್ಲಿ ಹೀಗೆನ್ನಿಸುತ್ತದೆ. ಈ ಬದುಕು ಎಂಥೆಂಥ ದ್ವಂದ್ವಗಳ ಮೆರವಣಿಗೆ ಎಂದು ಹೇಳಿಕೊಳ್ಳುವುದಕ್ಕಾಗಿ ಆತ್ಮಕಥೆಯನ್ನು ಸ್ವವಿಮರ್ಶೆಯಿಂದಲೇ ರಚಿಸಿದ್ದು, ಹಲವು ಘಟ್ಟಗಳನ್ನು ಅಳುಕಿನಿಂದ ಮುಚ್ಚಿಟ್ಟಿರುವುದಾಗಿ ಸ್ಪಷ್ಟಪಡಿಸುತ್ತಾರೆ.

ಆತ್ಮಕಥನಕಾರರು ಅನ್ಯರ ಒತ್ತಾಯದಿಂದಲೋ, ಜೀವನದಲ್ಲಿ ನಡೆದ ಘಟನಾವಳಿಗಳನ್ನು ದಾಖಲೆ ಮಾಡಿಟ್ಟುಕೊಳ್ಳುವುದಕ್ಕೊ ಅಥವಾ ಅವರ ಜೀವನದ ಕುರಿತು ಪ್ರಶಂಸೆ ಮಾಡಿಕೊಳ್ಳುವುದಕ್ಕೋ ಬರೆದಿರುವುದನ್ನು ಕಾಣಬಹುದಾಗಿದೆ. ಕೆಲವು ಲೇಖಕರು ಆತ್ಮಕಥೆಯನ್ನು ಬರೆಯುವಾಗ ಮುಂದಿನ ಪೀಳಿಗೆಗೆ 'ದಾರಿದೀಪ'ವಾಗಲೆಂದು ಬರೆದಿರುವರು. ಅಂತಹ ಆತ್ಮಕಥೆಗಳಲ್ಲಿ ಅವರ ಜೀವನಾನುಭವ ತಿಳಿಸುವ ಯಾವುದೇ ರೀತಿಯ ಅಂಶಗಳು ಇರುವುದಿಲ್ಲ. ಆದರೂ ಅನೇಕ ಸಾಹಿತಿಗಳು, ರಂಗ ನಟರು, ರಾಜಕಾರಣಿಗಳು, ವಿದ್ವಾಂಸರು, ಸಂಗೀತಗಾರರು, ಸಮಾಜ ಸೇವಕರು, ಹೋರಾಟಗಾರರು ಮೊದಲಾದ ಮಹಾನ್ ವ್ಯಕ್ತಿಗಳು ತಮ್ಮ ಜೀವನವನ್ನೇ ಪ್ರೇರಣೆಯಾಗಿಸಿಕೊಂಡು ಬದುಕನ್ನು ಕಟ್ಟಿಕೊಂಡಿರುವುದು ಗಮನಾರ್ಹವಾಗಿದೆ.

ಆತ್ಮಕಥೆಯಲ್ಲಿ ಪ್ರಮುಖ ವಿಷಯವಾಗಿ ಕಂಡುಬರುವುದೇನೆಂದರೆ, ಬಡತನದಿಂದ ಸಾಗಿಸಿದ ಬದುಕು, ನೋವಿನ ಚಿತ್ರಣಗಳು, ಅನುಭವಿಸಿದ ಕಷ್ಟಗಳು. ಆರ್.ಸಿ. ಹಿರೇಮಠರು ತಮ್ಮ ಜೀವನದಲ್ಲಿ ಬೆಳದಿಂಗಳಿಗಿಂತ ಬಿಸಿಲೇ ಹೆಚ್ಚು ಏಕೆ? ಎಂದು ಪ್ರಶ್ನಿಸಿಕೊಳ್ಳುತ್ತಾರೆ. ಹಾಗೆಯೇ ಹೆಚ್. ನರಸಿಂಹಯ್ಯನವರ 'ಹೋರಾಟದ ಹಾದಿ'ಯಲ್ಲಿ ಕಡು ಬಡತನ, ಬಸ್ ಚಾರ್ಜಿಗೆ ದುಡ್ಡಿಲ್ಲದೆ ಬೆಂಗಳೂರಿಗೆ ೫೩ ಕಿ.ಮೀ. ನಡೆದಿರುವುದಾಗಿ, ಯಾರ ಬೆಂಬಲವಿಲ್ಲದೆ ಬೆಳೆದು ಪ್ರತಿಷ್ಠಿತ ಸಂಸ್ಥೆಗೆ ಅಧ್ಯಕ್ಷರಾಗಿದ್ದನ್ನು ಸ್ಮರಿಸಿದ್ದಾರೆ. ಅದೇ ರೀತಿಯಾಗಿ ಅಮೃತಾ ಪ್ರೀತಂ, ಪ್ರತಿಮಾಬೇಡಿ, ಕಮಲಾದಾಸ್, ಪ್ರತಿಭಾ ನಂದಕುಮಾರ್ ಮೊದಲಾದವರು ಪ್ರಮುಖವಾಗಿ ಹೆಣ್ಣು

ಯಾವ ರೀತಿ ನೋವಿನಿಂದ ಸಮಾಜದಲ್ಲಿ ಜೀವಿಸುತ್ತಾಳೆ, ಅವಳ ತಳಮಳ, ತೊಳಲಾಟ, ಪ್ರೀತಿಯ ಹುಡುಕಾಟಗಳನ್ನು ಅವರದೇ ಆದ ದಾಟಿಯಲ್ಲಿ ಆತ್ಮಕಥೆ ರಚಿಸಿರುವುದನ್ನು ಕಾಣುತ್ತೇವೆ. ಸಿದ್ದಲಿಂಗಯ್ಯ, ದೇವನೂರು ಮಹಾದೇವ, ಅರವಿಂದ ಮಾಲಗತ್ತಿಯವರ ಆತ್ಮಕಥೆಗಳಲ್ಲಿ ಬಡತನದಿಂದ ಜೀವನ ಸಾಗಿಸಿರುವುದನ್ನು ಪ್ರಧಾನವಾಗಿ ಚಿತ್ರಿಸಿದ್ದಾರೆ. ಅಲ್ಲದೇ ಈ ಆತ್ಮಕಥೆಗಳು ಅದುವರೆಗೂ ಕನ್ನಡದಲ್ಲಿ ಬಂದಿದ್ದ ಎಲ್ಲಾ ಆತ್ಮಕಥೆಗಳಿಗಿಂತ ಭಿನ್ನವಾದ ಲೋಕವನ್ನು ತೋರಿಸಿಕೊಟ್ಟವು. ಆತ್ಮಕಥೆಗಳಲ್ಲಿ ಜೀವನದ ತುದಿಗೆ ಹೋಗಿ ನಿಂತು ಬಾಳನ್ನು ಹಿಂತಿರುಗಿ ನೋಡುವ ಕ್ರಮವಿದೆ. ಆದರೆ ಮುಪ್ಪಿನಲ್ಲಿ ಆತ್ಮಕಥೆ ಬರೆಯುವ ಸಂಪ್ರದಾಯವು ೨೦ನೇ ಶತಮಾನದಲ್ಲಿ ದಲಿತ ಸಾಹಿತ್ಯದಿಂದ ಮುರಿದುಬಿತ್ತು.

ಮಹಿಳಾ ಆತ್ಮಕಥೆಗಳನ್ನು ಹಲವಾರು ಮಹಿಳೆಯರು ಬರೆದಿದ್ದರೂ ಪುರುಷರಂತೆ ಮುಕ್ತ ಮನಸ್ಸಿನಿಂದ ಬರೆಯಲು ಸಾಧ್ಯವಾಗಿಲ್ಲದಿರುವುದನ್ನು ಗಮನಿಸಬಹುದಾಗಿದೆ. ಇದಕ್ಕೆ ಮಹಿಳೆಯರಿಗೆ ಸಮಾಜದ ಚೌಕಟ್ಟು ಅತಿಯಾಗಿರುವುದು ಮುಖ್ಯವಾದ ಕಾರಣವಾಗಿರಬಹುದು. ಕಮಲಾದಾಸ್, ಪ್ರತಿಮಾಬೇಡಿ, ಅಮೃತಾ ಪ್ರೀತಂ ಇವರ ಆತ್ಮಕಥೆಗಳ ನಾಯಕಿಯರು ದಿಟ್ಟೆಯರು ಅನ್ನಿಸುವುದರ ಜೊತೆಗೆ ಹಾದರದವರು ಎಂದೂ ಅನಿಸಿಬಿಡುವ ಸಾಮಾಜಿಕ ಮನೋಧರ್ಮದ ಒತ್ತಡ ಸಮಾಜದ ವಾಸ್ತವವಾಗಿದೆ. ಮಹಿಳಾ ಬರಹಗಾರರಿಗೆ ಅಕ್ಕಮಹಾದೇವಿಯೇ ಆಧುನಿಕತೆಯಲ್ಲಿ ಪ್ರೇರಣೆಯಾಗಿದ್ದಾರೆ. ಅಕ್ಕಮಹಾದೇವಿಯ ವಚನಗಳಲ್ಲಿ ಸ್ವತಂತ್ರ ಪ್ರವೃತ್ತಿಗೆ ಅವಳ ಕಾಲದ ಸಂಪ್ರದಾಯಿಕ ಪುರುಷ ಸಮಾಜ ತತ್ತರಿಸಿ ಹೋಗಿರಬೇಕು. ಈ ತತ್ತರಿಕೆಯನ್ನು ಅಕ್ಕಮಹಾದೇವಿ ಬೆತ್ತಲೆಯಾಗಿ ಮನೆಬಿಟ್ಟು ಹೋದ ಘಟನೆಗೆ ಸಂಬಂಧಿಸಿದ ಪ್ರಸಂಗಕ್ಕೆ ನಾಲ್ಕು ಶೂನ್ಯ ಸಂಪಾದನೆಗಳು ಮಾಡಿರುವ ಪ್ರತಿಕ್ರಿಯೆಯಲ್ಲಿ ಕಾಣಬಹುದಾಗಿದೆ.

ಆತ್ಮಕಥಾ ಸಾಹಿತ್ಯ ಪ್ರಕಾರವು ಸಾರ್ವತ್ರಿಕ ಸಾಹಿತ್ಯವಾಗಿ ಎಲ್ಲಾ ಜನರು ತಮ್ಮ ಅನುಭವಗಳನ್ನು ವ್ಯಕ್ತಪಡಿಸಲು ಸುಲಭವಾದ ಮಾಧ್ಯಮವಾಗಿದೆ. ಸಾಹಿತಿಗಳಾಗಲಿ, ಬೇರೆ ರಂಗದಲ್ಲಿರುವ ವ್ಯಕ್ತಿಗಳಾಗಲಿ ಆತ್ಮಕಥೆ ರಚಿಸುವ ಆಕರಗಳ ದಾಖಲು ಮಾಡಿಕೊಂಡಿಲ್ಲ. ಕೇವಲ ದಿನಚರಿ, ಟಿಪ್ಪಣಿ, ನೆನಪಿನ ಶಕ್ತಿಯಿಂದಲೇ ಅವರ ಅನುಭವಗಳನ್ನು ದಾಖಲು ಮಾಡಿಕೊಂಡಿದ್ದಾರೆ. ಸಾಹಿತಿಗಳಲ್ಲೂ ಈ ತರಹದ ಅಭಿಪ್ರಾಯಗಳು ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಆತ್ಮಕಥೆಗಳು ಗದ್ಯರೂಪದಲ್ಲಿದ್ದು, ಕೇವಲ ವಿದ್ಯಾವಂತರಲ್ಲದೆ, ಅವಿದ್ಯಾವಂತರೂ ಸಹ ಅವರ ಅನುಭವಗಳನ್ನು ಹೇಳಿ ಬರೆಸಿಕೊಂಡಿರುವುದನ್ನು ಕಾಣುತ್ತೇವೆ. ಇಂತಹ ಆತ್ಮಕಥೆಗಳಲ್ಲಿ ಸೃಜನಶೀಲ ಸಾಹಿತ್ಯವು ಎಷ್ಟರ ಮಟ್ಟಿಗೆ ಅಳವಡಿಕೆಯಾಗಿರುತ್ತದೆ ಎಂಬುದು ಸಾಹಿತ್ಯ ವಲಯದ ಚರ್ಚೆಯ ವಿಷಯವಾಗಿದೆ.

ಆತ್ಮಕಥೆಗಳು ಕೇವಲ ಪುಸ್ತಕ ರೂಪದಲ್ಲಿ ಬರುವುದರ ಜೊತೆಗೆ ಲೇಖನಗಳಾಗಿ ಹೊರಬಂದಿರುವುದನ್ನು ಕಾಣಬಹುದು. ಸುಧಾ, ಕರ್ಮವೀರ, ಪ್ರಜಾವಾಣಿ, ವಿಜಯ ಕರ್ನಾಟಕ ಇತ್ಯಾದಿ ಪತ್ರಿಕೆಗಳಲ್ಲಿ ಅನೇಕರ ಆತ್ಮಕಥೆಗಳು ಪ್ರಕಟವಾಗಿರುವುದನ್ನು ಕಾಣಬಹುದಾಗಿದೆ.

ಕನ್ನಡ ಸಾಹಿತ್ಯದ ಹಲವು ಪ್ರಕಾರಗಳನ್ನು ಸೃಜನಶೀಲ ಸಾಹಿತ್ಯವೆಂದು ತಿಳಿಸುವ ಸಾಹಿತಿಗಳು ಆತ್ಮಕಥೆಯ ವಿಚಾರಕ್ಕೆ ಬಂದಾಗ ಸೃಜನಶೀಲ ಸಾಹಿತ್ಯ ಎಂಬುದನ್ನು ತಿರಸ್ಕರಿಸುತ್ತಾ ಬಂದಿದ್ದಾರೆ. ಕಾದಂಬರಿಗಳಷ್ಟೇ ಆತ್ಮಕಥೆಗಳು ಶ್ರೇಷ್ಠವಾಗಿ ರಚನೆಯಾಗಿದ್ದರೂ, ಅವುಗಳಿಗೆ ಶಿಷ್ಟಸಾಹಿತ್ಯದ ಮನೋಭಾವ ತೋರುತ್ತಿಲ್ಲ. ಶಿಷ್ಟಸಾಹಿತ್ಯವೆಂದು ಒಪ್ಪಿತವಾದರೂ ಸಾಹಿತ್ಯ ಪ್ರಕಾರಗಳಿಗೆ ಸಿಗುವ ಮನ್ನಣೆ ಆತ್ಮಕಥೆಗೆ ಸಿಗುತ್ತಿಲ್ಲ. "ಸಾಹಿತ್ಯಿಕ ವಲಯದ ಅಧ್ಯಯನದಲ್ಲಿ 'ಸಾಹಿತ್ಯ' ಎಂಬುದು ಒಂದು ಗಂಭೀರವಾದ ನೆಪವಾಗಿದ್ದು, ಚರ್ಚಿಸುವ ಮತ್ತು ತಾತ್ವಿಕರಿಸುವ ಕ್ರಮಗಳಲ್ಲಿ ಸಾಂಸ್ಕೃತಿಕ ಹಾಗೂ ಸೈದ್ಧಾಂತಿಕ ಪ್ರಶ್ನೆಗಳು ಮುಂಚೂಣಿಗೆ ಬರುತ್ತವೆ". ಇಂತಹ ಹಲವಾರು ಸತ್ಯಾಸತ್ಯತೆಗಳು ಆತ್ಮಕಥೆಯ ನೈಜತೆ ಮತ್ತು ಸಾಹಿತ್ಯದ ಶ್ರೇಣೀಕರಣ ಟೀಕೆಗೆ ಒಳಗಾಗುತ್ತದೆ. ಇಂತಹ ಆತ್ಮಕಥೆಗಳು ಮತ್ತು ಜೀವನಚರಿತ್ರೆಗಳಲ್ಲಿ ಉಪಯೋಗಿಸುವ ಪ್ರತ್ಯಯಗಳಿಗೆ ಅನುಗುಣವಾಗಿ ಬೇರ್ಪಟ್ಟಿರುವುದು ಅಸಹಜತೆಯೆನಿಸುತ್ತದೆ. ಜೀವನ ಚರಿತ್ರೆಯು ಸಾಹಿತಿಗಳು, ಪಂಡಿತರು, ಬರಹಗಾರರು ಮುಂತಾದ ಬುದ್ಧಿಜೀವಿಗಳಿಂದ ರಚನೆಯಾಗಿರುತ್ತದೆ. ಆತ್ಮಕಥೆಯನ್ನು ಇದಕ್ಕೆ ಭಿನ್ನವಾಗಿ ಅನಕ್ಷರಸ್ಥರು ರಚಿಸುತ್ತಿರುವುದು ತಾರತಮ್ಯತೆಗೆ ಕಾರಣವಾಗಿದೆ.

ಆತ್ಮಕಥೆಯನ್ನು ಶಾಸನಗಳಲ್ಲಿ, ಪೌರಾಣಿಕ ಕೃತಿಗಳಲ್ಲಿ, ಕಾದಂಬರಿಗಳಲ್ಲಿ ಆತ್ಮಕಥಾಂಶವುಳ್ಳ ಪ್ರತ್ಯಯಗಳಿಂದ ಗುರುತಿಸುತ್ತಾರೆ. ಇಂತಹ ಪ್ರತ್ಯಯಗಳಿಂದ ಗುರುತಿಸುವುದಾದರೆ ಪದ್ಯಗಳಲ್ಲಿ ಗುರುತಿಸಬಹುದಾಗಿದೆ. ಕುವೆಂಪು, ದ.ರಾ.ಬೇಂದ್ರೆ ಅವರ ಪದ್ಯಗಳಲ್ಲಿ ವೈಯಕ್ತಿಕವಾದ ಬದುಕನ್ನು ಕಟ್ಟಿಕೊಂಡಿದ್ದಾರೆ. ಉದಾಹರಣೆಗೆ ದ.ರಾ.ಬೇಂದ್ರೆಯವರ 'ನೀ ಹೀಂಗೆ ನೋಡಬೇಡ ನನ್ನ' ಪದ್ಯದಲ್ಲಿ ಅವರ ಮಗ ಸತ್ತ ಸಂದರ್ಭದಲ್ಲಿ ಹೊರಹೊಮ್ಮಿದ ಭಾವನೆಗಳೇ ಪದ್ಯವಾಗಿಸಿದ್ದು ಬೇಂದ್ರೆಯವರ ವೈಯಕ್ತಿಕವಾದ ಜೀವನವೇ ಆಗಿದೆ. ಕುವೆಂಪು, ರಾಜರತ್ನಂ, ನಿಸಾರ್ ಅಹಮದ್, ಅಡಿಗ, ಕೆ.ಎಸ್.ನರಸಿಂಹಸ್ವಾಮಿ, ಶಿವರುದ್ರಪ್ಪ ಮುಂತಾದವರ ಪದ್ಯಗಳಲ್ಲಿ ಅವರವರ ಅನುಭವಗಳನ್ನು ಭಾವಪೂರ್ಣವಾಗಿ ವ್ಯಕ್ತಪಡಿಸಿರುವುದನ್ನು ಗಮನಿಸಬಹುದಾಗಿದೆ. ಅದೇ ರೀತಿಯಾಗಿ ಪ್ರತಿಭಾ ನಂದಕುಮಾರ್ ಅವರು ಜೀವನದ ಅನುಭವಗಳನ್ನು ಮೊದಲು ಪದ್ಯದ ಮೂಲಕವೇ ಹೊರಹಾಕಿ ನಂತರ ಅದನ್ನು ಗದ್ಯರೂಪಕ್ಕೆ ತಂದಿರುವುದನ್ನು ಕಾಣಬಹುದಾಗಿದೆ.

ಆತ್ಮಕಥೆಯು ಗದ್ಯ ಪ್ರಕಾರವಾಗಿದ್ದು, ಎಲ್ಲರಿಗೂ ಅನುಭವಗಳನ್ನು ಬರೆದುಕೊಳ್ಳುವ ಸ್ವಾತಂತ್ರವಿದ್ದರೂ ದುರುಪಯೋಗ ಪಡೆದುಕೊಳ್ಳಬಾರದು. ಮತ್ತೊಬ್ಬರ ಜೀವನಕ್ಕೆ ದಾರಿದೀಪ ಆಗುವಂತಿರಬೇಕು. ಲೇಖಕನ ಕಷ್ಟವನ್ನೇ ಅತಿಯಾಗಿ ಬಿಂಬಿಸಿಕೊಂಡಿರಬಾರದು. ಲೇಖಕನು ಅವನನ್ನೇ ಅವನು ಹೇಳಿಕೊಳ್ಳುವ ಸಂದರ್ಭಗಳು ಅತಿಯಾಗಿರಬಾರದು. ಆತ್ಮಕಥೆ ಎಂದ ತಕ್ಷಣ ಅದು ವ್ಯಕ್ತಿಯೊಬ್ಬನ ಜೀವನದ ವಿವರ ಎಂದು ತಿಳಿಯಲು ಆಗುವುದಿಲ್ಲ. ಸಮಾಜದಲ್ಲಿ ವ್ಯಕ್ತಿ ಮತ್ತು ಅವನ ಜೀವನವೂ ಒಂದು ಭಾಗವಾಗಿರುವುದರಿಂದ ಅವನ ಸುತ್ತಮುತ್ತಲಿನ ಪರಿಸರವು ತುಂಬಾ ಪ್ರಮುಖವಾಗಿರುತ್ತದೆ. ಸಂದರ್ಭಕ್ಕೆ ತಕ್ಕಂತೆ ಇತರ ಪಾತ್ರಗಳ ಸ್ವತಂತ್ರತೆಯ ಬಳಕೆಯು ಆತ್ಮಕಥೆಗಳನ್ನು ಉತ್ತಮವಾಗಿಸುತ್ತವೆ.

ಆಧುನಿಕ ಸಾಹಿತ್ಯದ ವಿಶಿಷ್ಟ ಪ್ರಕಾರಗಳಲ್ಲಿ ಆತ್ಮಕಥೆಗಳು ಒಂದಾಗಿದ್ದು, ಭಾಷೆಯ ನಿರೂಪಣೆಯು ಸುಲಭವಾಗಿದ್ದು, ಓದುಗರನ್ನು ಮುಟ್ಟುವಲ್ಲಿ ಯಶಸ್ವಿಯಾಗಿವೆ. ಜೀವನದ ವಿವರಗಳನ್ನು ಕಟ್ಟಿಕೊಡುವಲ್ಲಿ ಅಸಹಜತೆಯನ್ನು ದೂರವಾಗಿರಿಸಿ ಸಹಜತೆಯನ್ನು ಒಳಗೊಂಡಿವೆ. ಆತ್ಮಕಥೆಗಳು ವಾಸ್ತವಿಕತೆಗೆ ಹತ್ತಿರವಾಗಿದ್ದು, ವೈಭವೀಕರಣದಿಂದ ದೂರವಾಗಿರಬೇಕು. ವ್ಯಕ್ತಿಯು ಅವನ ಸಂಪೂರ್ಣ ವಿವರಗಳನ್ನು ದಾಖಲಿಸಿಕೊಳ್ಳುವಾಗ ಅವನ ಜೀವನದ ವಿವರಗಳು ಬೇರೆಯವರ ಜೀವನಕ್ಕೆ ಮುಳ್ಳಾಗುವಂತಿರಬಾರದು. ಮತ್ತು ಅಂತಹ ವಿಚಾರಗಳನ್ನು ದಾಖಲಿಸದಿರುವುದು ಸೂಕ್ತವೆನಿಸುತ್ತದೆ. ಸಮಾಜದ ಚೌಕಟ್ಟನ್ನು ಮೀರದೆ, ಸಾಂಸಾರಿಕ ಜೀವನವನ್ನೇ ಹೆಚ್ಚು ದಾಖಲಿಸಿಕೊಳ್ಳದೆ ರಚಿಸಿದಾಗ, ಅಂತಹ ಅನುಭವಗಳು ನೀರಸವಾಗದೆ ಕುತೂಹಲಕಾರಿಯಿಂದ, ಭಾವಪೂರ್ವದಿಂದ ಮತ್ತು ಸುತ್ತ ಮುತ್ತಲಿನ ಪರಿಸರಕ್ಕೆ ಹತ್ತಿರವಾಗಿ ಸಮಾಜವನ್ನು ಬಿಂಬಿಸಿದಾಗ ಅಂತಹ ಆತ್ಮಕಥೆಗಳು ಯಶಸ್ವಿಯಾಗಬಹುದಾಗಿದೆ.

ಆತ್ಮಕಥೆಗಳಲ್ಲಿ ಕಷ್ಟಸುಖಗಳ ಹಂಚಿಕೆಯ ಜೊತೆಗೆ ಸಮಾಜದ ವಾಸ್ತವ ಚಿತ್ರಣದ ಪ್ರತಿಬಿಂಬದ ಛಾಯೆಯಿರಬೇಕು. ವೈಯಕ್ತಿಕ ಜೀವನದ ಹೊರತಾಗಿ ಜೀವನ ರೂಪಿಸಿಕೊಂಡವರು ಸಾರ್ವಜನಿಕರ ಧ್ವನಿಯಾಗಿ ಆತ್ಮಕಥೆಗಳಲ್ಲಿ ನಿಲ್ಲುವಂತಿರಬೇಕು. ಪ್ರತಿಯೊಬ್ಬ ವ್ಯಕ್ತಿಗೂ ಹೆಂಡತಿ, ಮಕ್ಕಳು, ನೋವು–ನಲಿವು, ಕಷ್ಟ–ಸುಖ, ಬಡತನ–ಸಿರಿತನ ಮೊದಲಾದ ಅಂಶಗಳು ಸಹಜವಾಗಿರುತ್ತದೆ. ಇಂತಹ ಅಂಶಗಳನ್ನೊಳಗೊಂಡ ಆತ್ಮಕಥೆಗಳು ಓದುಗರಿಗೆ ವಿಶೇಷವೆನಿಸದೇ ಹೋಗಬಹುದು. ಆತ್ಮಕಥೆಗಳು ಓದುಗರನ್ನು ಹುಟ್ಟಿಹಾಕಿಕೊಳ್ಳಬೇಕೇ ಹೊರತು ತಿರಸ್ಕರಿಸುವಂತಿರಬಾರದು.

□□□

ಅಧ್ಯಾಯ ಮೂರು

'ಅನುದಿನದ ಅಂತರಗಂಗೆ' ಸಂಬಂಧಗಳ ವಿನ್ಯಾಸಗಳು

೩.೧. ಬರಹಗಾರ್ತಿ ಮತ್ತು ಅವರ ಬಾಲ್ಯದ ಜೊತೆಗಿನ ಸಂಬಂಧ

೩.೨. ಬರಹಗಾರ್ತಿ ಮತ್ತು ಗಂಡನ ಜೊತೆಗಿನ ಸಂಬಂಧ

೩.೩. ಬರಹಗಾರ್ತಿ ಮತ್ತು ಮಕ್ಕಳ ಜೊತೆಗಿನ ಸಂಬಂಧ

೩.೪. ಬರಹಗಾರ್ತಿ ಮತ್ತು ಸ್ನೇಹಿತರೊಂದಿಗಿನ ಸಂಬಂಧ

೩.೫. ಬರಹಗಾರ್ತಿ ಮತ್ತು ಬರಹದ ನಡುವಿನ ಸಂಬಂಧ

೩.೬. ಬರಹಗಾರ್ತಿ ಮತ್ತು ವೃತ್ತಿಯ ಜೊತೆಗಿನ ಸಂಬಂಧ

೩.೭. ಬರಹಗಾರ್ತಿ ಮತ್ತು ಪ್ರೀತಿಯ ಹುಡುಕಾಟ

'ಅನುದಿನದ ಅಂತರಗಂಗೆ' ಸಂಬಂಧಗಳ ವಿನ್ಯಾಸಗಳು

೩.೧. ಬರಹಗಾರ್ತಿ ಮತ್ತು ಬಾಲ್ಯದೊಂದಿಗಿನ ಸಂಬಂಧ

ಸಾಮಾನ್ಯವಾಗಿ ಯಾವುದಾದರೊಂದು ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರು ಆತ್ಮಕಥೆ ಬರೆಯಲು ಪ್ರಾರಂಭಿಸುತ್ತಾರೆ. ಇದು ಒಂದು ಎತ್ತರದ ಸ್ಥಾನದಲ್ಲಿ/ಉನ್ನತ ಸ್ಥಾನದಲ್ಲಿ ನಿಂತು ತನ್ನ ಬದುಕನ್ನು ತಾನು ಹೊರಳಿ ನೋಡುವ ಕ್ರಮ. ತನ್ನ ಆತ್ಮಕಥೆ ಬರೆಯಬೇಕೆಂಬ ಒತ್ತಡ ಬಂದಾಗ ಅವರ ನೆನಪುಗಳನ್ನು ಬಾಲ್ಯದ ಮೂಲಕ ನೋಡಲು ಮುಂದಾಗುವರು. ನೆನಪಿಗೆ ದಕ್ಕಿದ್ದಷ್ಟನ್ನು ಮಾತ್ರ ಬರೆಯಲು ಸಾಧ್ಯ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಬಾಲ್ಯ ಎಂಬುದು ಸಾಮಾನ್ಯವಾದುದು. ಪ್ರೌಢರಾದ ಮೇಲೆ ಅದನ್ನು ಹಿಂದಿರುಗಿ ನೋಡುವ ಕ್ರಮದಿಂದ ಹಳೆಯ ನೆನಪುಗಳು ಮಾಸದೇ ಉಳಿಯುತ್ತವೆ.

ಪ್ರಸ್ತುತ ಅಧ್ಯಯನದ ಮೂಲ ಆಕಾರವಾದ 'ಅನುದಿನದ ಅಂತರಗಂಗೆ'ಯ ಲೇಖಕಿ ಪ್ರತಿಭಾ ನಂದಕುಮಾರ್ ಅವರು ಅವರ ಬಾಲ್ಯವನ್ನು ನಿರೂಪಿಸಿರುವ ಬಗೆ ಭಿನ್ನವಾಗಿದೆ. ಏಕೆಂದರೆ ಆತ್ಮಕಥೆಯನ್ನು ಬಾಲ್ಯದಿಂದ ಪ್ರಾರಂಭಿಸಿಲ್ಲ. ಒಬ್ಬ ವ್ಯಕ್ತಿಯ ಜೀವನವನ್ನು ಹಿಂದಿರುಗಿ ನೋಡಿದಾಗ ಬಾಲ್ಯವಸ್ಥೆ ಯೌವನಾವಸ್ಥೆ, ಮುಪ್ಪು, ಇವುಗಳ ನಡುವೆ ಬರುವಂತಹ ಸಂಸಾರಿಕ ಜೀವನದ ಘಟ್ಟಗಳು ಕ್ರಮವಾಗಿರುತ್ತವೆ. ಪ್ರತಿಭಾ ಅವರು ಈ ಘಟ್ಟಗಳನ್ನು ಕ್ರಮವಾಗಿ ವಿಭಾಗಿಸದೆ ನಿರೂಪಿಸಿದ್ದಾರೆ. ವಾಸ್ತವವಾಗಿ ಮನುಷ್ಯನ ಜೀವನವೂ ಕೂಡ ಹಾಗೆ ಕ್ರಮಬದ್ಧವಾಗಿಯೇನೂ ಇರುವುದಿಲ್ಲ. ಅನೇಕ ಏರುಪೇರುಗಳು ಜೀವನದಲ್ಲಿ ಘಟಿಸುತ್ತಲೇ ಇರುತ್ತವೆ. ಅಲ್ಲದೇ ಹೀಗೆ ಆತ್ಮಕಥೆಯನ್ನು ಪ್ರಾರಂಭಿಸಿರುವುದು ಇದರ ತಂತ್ರವೂ ಆಗಿದೆ. ಆದುದರಿಂದ ಇದು ಬೇರೆ ಆತ್ಮಕಥೆಗಳಿಗಿಂತ ವಿಶಿಷ್ಟ ಕಥನಕ್ರಮ ಹೊಂದಿದೆ. ಇಡೀ ಆತ್ಮಕಥೆಯನ್ನು ಓದಿದಾಗ ಪ್ರತ್ಯೇಕತೆ ಕಂಡು ಬರುವುದಿಲ್ಲ. ಅಂದರೆ ಪ್ರತಿಭಾ ಅವರು ಬದುಕಿನ ಜೀವನವನ್ನು ಇಡಿಯಾಗಿ ಗ್ರಹಿಸಿದ್ದಾರೆ. ಇಲ್ಲಿನ ಹಿನ್ನೋಟವನ್ನು ಕುರಿತಾಗಿ ಸಾಹಿತ್ಯಕ ಅಧ್ಯಯನದಲ್ಲಿ ಹೆಚ್ಚಿನ ಚರ್ಚೆಯನ್ನು ಮಾಡಲಾಗಿದೆ.

ಪ್ರತಿವ್ಯಕ್ತಿಯಲ್ಲಿಯೂ ಬಾಲ್ಯ ಎಂಬುದು ಅಚ್ಚಳಿಯದ ನೆನಪು. ಪ್ರೌಢರಾದ ಮೇಲೆ ತಮ್ಮ ಬಾಲ್ಯವನ್ನೇ ಹಿಂತಿರುಗಿ ನೋಡಿದಾಗ ಅದರ ಮಹತ್ವ ತಿಳಿಯುತ್ತದೆ. ಸಾಂಸಾರಿಕ ಜೀವನದಲ್ಲಿ ಪ್ರತಿಭಾರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಾಗ ಬಾಲ್ಯದ ನೆನಪುಗಳ ಮರುಕಳಿಸಿವೆ. ಇಲ್ಲಿ ಬಾಲ್ಯದ ನೆನಪುಗಳು ಯಾವ ಕಾರಣಕ್ಕೆ ಬರುತ್ತವೆ ಎಂದು ಪ್ರಶ್ನಿಸಿಕೊಂಡರೆ, ಒಂದು ಹೆಣ್ಣಾಗಿ ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಅವಳ ವ್ಯಕ್ತಿಸ್ವಾತಂತ್ರಕ್ಕೆ ಅಡ್ಡಿಯಾದಾಗ ಬಾಲ್ಯದ ನೆನಪುಗಳು ಬರುತ್ತವೆ. ಅಂದರೆ ಸಾಂಸಾರಿಕ ಜೀವನದಲ್ಲಿ ವೈಯುಕ್ತಿಕ ಸ್ವಾತಂತ್ರ್ಯ ಬಯಸಿದಾಗ ಅಂತಹ ಸಮಯದಲ್ಲಿ ಅಡ್ಡ ಗೋಡೆಯಂತೆ ಸಾಮಾಜಿಕ ಸಂಪ್ರದಾಯಗಳು ಎದುರಾದ ಕೂಡಲೇ ಬಾಲ್ಯ ನೆನಪಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬಾಲ್ಯದಲ್ಲಿ ಯಾರ ಹಂಗೂ ಇಲ್ಲದೆ ಸ್ವಚ್ಛಂದವಾದ ಜೀವನ ಸಾಧ್ಯವಾಗಿರುತ್ತದೆ. ಹೆಣ್ಣು ಬಾಲ್ಯದಿಂದ ಮುಪ್ಪಿನವರೆಗೂ ಪುರುಷನ ಅಧೀನದಲ್ಲಿರಬೇಕು ಎಂಬ ಸಾಂಪ್ರದಾಯಿಕ ಗ್ರಹಿಕೆಯನ್ನು ಪ್ರಶ್ನಿಸುವ ಕ್ರಮದಲ್ಲಿ ಇಲ್ಲಿನ ಬಾಲ್ಯದ ನೆನಪುಗಳು ಮರುಕಳಿಸುತ್ತವೆ.

ಬಾಲ್ಯದಲ್ಲಿ ಇದ್ದಂತಹ ಸ್ವಾತಂತ್ರ್ಯ ಪ್ರೌಢರಾದ ಮೇಲೆ ಇಳಿಮುಖವಾಗುತ್ತದೆ ಎಂಬುದು ಸಾಮಾನ್ಯ ಸಂಗತಿಯಾಗಿದೆ. ಪ್ರತಿಭಾ ಅವರ ಬಾಲ್ಯದ ಜೀವನವು ಅವಿಭಕ್ತ ಕುಟುಂಬದಲ್ಲಿ ನಡೆದ ಕಾರಣದಿಂದ ಸಾಮಾನ್ಯವಾಗಿ ಅಲ್ಲಿ ಸ್ವಾತಂತ್ರ್ಯವಿರುವುದನ್ನು ಕಾಣಬಹುದು. ಆದರೆ ಮದುವೆಯ ನಂತರ ಅವರ ಸ್ವಾತಂತ್ರ್ಯ ಮಾಯವಾಗುವ ಮತ್ತು ಬದುಕಿನ ಸಂಕಟಗಳಿಗೆ ಗುರಿಯಾಗುವ ಆಯಾಮಗಳು ತೆರೆದುಕೊಳ್ಳುತ್ತವೆ. ಆಗ ಸಾಂಸಾರಿಕ ಜೀವನದ ತಲ್ಲಣವು ಬಾಲ್ಯದ ನೆನಪುಗಳನ್ನು ಸಿಹಿಯಾಗಿಸುತ್ತದೆ. ಹಾಗಾಗಿ ಈ ಆತ್ಮಕಥೆಯಲ್ಲಿನ ಲೇಖಕಿಯ ಬಾಲ್ಯದ ನೆನಪುಗಳು ಅವಳ ಸಾಂಸಾರಿಕ ಜೀವನದ ತಲ್ಲಣದ ಸಂದರ್ಭದಲ್ಲಿ ಹೋಲಿಕೆಯಾಗಿ ಬಂದು ಹೋಗುತ್ತವೆ. ಹಾಗಾಗಿ ಈ ಆತ್ಮಕಥೆಯಲ್ಲಿ ಸಾಂಸಾರಿಕ ಸಂಘರ್ಷದಿಂದ ಬಾಲ್ಯವನ್ನು ನೆನಪು ಮಾಡಿಕೊಳ್ಳುವ ನಿರೂಪಣೆ ಇದೆ.

ಸಾಂಸಾರಿಕ ಜೀವನದಲ್ಲಿ ನಿಂತು ಬಾಲ್ಯವನ್ನು ನೋಡುತ್ತಿರುವುದರಿಂದ ಅವರಿಗೆ ಬಾಲ್ಯದಲ್ಲಿದ್ದ ಸೌಂದರ್ಯದ ಕಲ್ಪನೆ ಮತ್ತೂ ಚಡಪಡಿಸುವಂತೆ ಮಾಡುತ್ತವೆ. ಯಾಕೆಂದರೆ ಬಾಲ್ಯದ ಸೌಂದರ್ಯದ ಕಲ್ಪನೆ ಯೌವನದಲ್ಲಿ ಸಂಪೂರ್ಣ ಬದಲಾಗಿದೆ. ಅವರೇ ಹೇಳುವಂತೆ 'ಬಾಲ್ಯದಿಂದ ನೇರ ತಾರುಣ್ಯಕ್ಕೆ ಜಿಗಿದುಬಿಟ್ಟು ಕೌಮಾರ್ಯವನ್ನು ಕಳೆದುಕೊಂಡ ನನಗೆ ಬಾಲ್ಯ ತೀರ ಹತ್ತಿರದಲ್ಲೇ ಇದ್ದರೂ ದೂರ, ವಿಚಿತ್ರ ರೀತಿಯಲ್ಲಿ ನಾನು ಬಾಲ್ಯವನ್ನು ಮನದಾಳಕ್ಕೆ ತಳ್ಳಿ ಮುಚ್ಚಿಬಿಟ್ಟಿದ್ದೇನೆ. ಬಾಲ್ಯದ ಮರುಕಳಿಕೆ ಎಂದರೆ ಆ ಚಡಪಡಿಕೆಗಳ ಮರು ಅನಾವರಣ. ಖಾಲಿ ಹೊಟ್ಟೆಯ ಬಾಲ್ಯದ ದಿನಗಳನ್ನು ಅಳಿಸಿ ಹಾಕಲು ಈಗ ಸದಾಕಾಲ ಅಡಿಗೆ ಮನೆಯ ಡಬ್ಬಗಳನ್ನೆಲ್ಲ ತುಂಬಿಡುತ್ತೇನೆ. ಒಂದು ಡಬ್ಬ ಖಾಲಿಯಾದರೂ ನನಗೆ ಆತಂಕ'. ಹೀಗೆ ತನ್ನ ಯೌವ್ವನವನ್ನು ಖಾಲಿ ಡಬ್ಬಗಳಿಗೆ ಹೋಲಿಸುವಲ್ಲಿಯೇ ಅವರ ತಲ್ಲಣದ ಅರಿವಾಗುತ್ತದೆ. ಆದರೆ ಬಿಗಿದಿಟ್ಟ ಡಬ್ಬದ

ಹಾಗೆ ಜೀವನದಲ್ಲಿ ಯಾವುದನ್ನೂ ಹಿಡಿದಿಡಲು ಸಾಧ್ಯವಿಲ್ಲ. ಅದೂ ಪ್ರತಿಭಾ ಅವರಿಗೂ ಗೊತ್ತು. ಕವಿ ಮನಸ್ಸಿನ ಅವರ ಬರವಣಿಗೆಯ ಶೈಲಿಯು ಅವರ ಇಲ್ಲಿನ ನಿರೂಪಣೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಿದೆ.

ಈ ಮೇಲಿನ ಸಾಲುಗಳಲ್ಲಿ ಪ್ರತಿಭಾರ ಇಡೀ ಬಾಲ್ಯ ನೆನಪಿನ ಸಾರವಿದೆ. ಎರಡು ರೀತಿಯ ವಿಭಿನ್ನ ಸಂಘರ್ಷಗಳು ಇದರಲ್ಲಿ ಕಾಣಿಸುತ್ತವೆ. ಒಂದು, ಸಾಂಸಾರಿಕ ಜೀವನದ ಕಷ್ಟಗಳ ಮೂಲಕ ಬಾಲ್ಯವನ್ನು ಹಿಂತಿರುಗಿ ನೋಡಿದಾಗ ಸಿಹಿಯಾಗಿ ಕಾಣಿಸುವ ಬಾಲ್ಯ. ಎರಡು, ಸ್ವತಃ ಬಾಲ್ಯದ ನೆನಪುಗಳು ಚಡಪಡಿಕೆಗಳ ಮರು ಅನಾವರಣದಂತೆ ಕಾಣಿಸುತ್ತವೆ. ಯಾಕೆಂದರೆ, ಬಾಲ್ಯದಲ್ಲಿದ್ದ ಸೌಂದರ್ಯದ ಕಲ್ಪನೆಯು ಸಾಂಪ್ರದಾಯಿಕ ತಿಳಿವಳಿಕೆಯ ಭಾಗವಾಗಿದ್ದರಿಂದ ಬಾಲ್ಯದ ನೆನಪುಗಳು ದೂರ ಉಳಿದಿವೆ. ಇಲ್ಲಿ ರೂಪಕವಾಗಿ ಡಬ್ಬಿಗಳನ್ನು ಬಳಸಿರುವುದು ಅತ್ಯಂತ ಕುತೂಹಲವನ್ನು ಕೆರಳಿಸುತ್ತದೆ. ಪ್ರಸ್ತುತದಲ್ಲಿರುವ ನೆನಪುಗಳಿಂದ ತುಂಬಿರುವ ಡಬ್ಬಿಗಳು 'ಒಂದು' ಖಾಲಿಯಾದರೂ ಆತಂಕಗೊಳ್ಳುವ ಅವರು ಬಾಲ್ಯದ ನೆನಪುಗಳಿಂದ ದೂರ ಉಳಿಯಲು ಪ್ರಯತ್ನಿಸುತ್ತಾರೆ. ಅದೇ ರೀತಿ ಬಾಲ್ಯದಲ್ಲಿದ್ದ ಸಿಹಿ ನೆನಪುಗಳೇ ಬೇಡ ಎಂಬ ಧೋರಣೆಯೂ ಇಲ್ಲಿ ಕಾಣಿಸಿಕೊಳ್ಳುತ್ತದೆ. ಇಲ್ಲಿನ ಬರವಣಿಗೆಯ ಬಾಲ್ಯದ ನೆನಪಿನಲ್ಲಿ ಈ ಎರಡು ಸಂಘರ್ಷ ಮತ್ತು ವೈರುದ್ಯಗಳನ್ನು ಕಾಣಬಹುದು.

ಪ್ರತಿಭಾ ನಂದಕುಮಾರ್ ಅವರು ಮಗಳಿಗೆ ವರ್ಷಕ್ಕೊಂದು ರೇಷ್ಮೆ ಲಂಗವನ್ನು ಹೊಲಿಸಿ, ನೀಳ ಕೂದಲನ್ನು ಬೆಳೆಸಿ, ಆ ಮೂಲಕ ಅವರು ಕಾಣದೇ ಇರುವ ಸೌಂದರ್ಯವನ್ನು ಮಗಳ ಮೂಲಕ ಕಾಣುತ್ತಾರೆ. ಇದು ಬಾಲ್ಯದಿಂದ ಬಹುದೂರ ನಡೆದು, ಬಾಲ್ಯವನ್ನು ಸವೆಸಿದ ನಂತರ ಅದನ್ನು ನನಸುಮಾಡಿಕೊಳ್ಳುವ ಮತ್ತೊಂದು ಪರಿಣಾಮಕಾರಿ ವಿಧಾನ.

ಬಾಲ್ಯದಲ್ಲಿ ತಾನು ಕುರೂಪಿ, ತನ್ನ ಭಾವನೆಗಳನ್ನು ಹಂಚಿಕೊಳ್ಳಲು ಯಾರೂ ಇಲ್ಲ ತನ್ನನ್ನು ಯಾರೂ ಪ್ರೀತಿಸಲಾರರು ಎಂದು ಬಲವಾಗಿ ನಂಬಿದ್ದ ಪ್ರತಿಭಾ ಅವರು 'ಹರೆಯದ ದಿನಗಳಲ್ಲಿ ಹೊಸ ಪ್ರೀತಿ ತುಂಬಿ ಬರುತ್ತಿತ್ತು' ಎಂದು ಹೇಳಿಕೊಂಡಿದ್ದು, ಅದನ್ನು ಯಾರಿಗೆ ಕೊಡಲಿ ಹೇಗೆ ಕೊಡಲಿ? ತಾನೋ ಕುರೂಪಿ ಆದರೇನಂತೆ ಪ್ರೀತಿಗೆ ಕುರೂಪ ಅಡ್ಡ ಬರುತ್ತದೆಯೇ? ಅವರಿಗಾಗಿ ಏನು ಬೇಕಾದರೂ ಮಾಡುತ್ತೇನೆ ಅಂತ ತುಡಿಯುತ್ತಿತ್ತು ಮನಸ್ಸು ಎಂದು ಭಾವುಕವಾಗಿ ಹೇಳಿಕೊಂಡಿರುವುದನ್ನು ಗಮನಿಸಿದಾಗ ಬಾಲ್ಯದಲ್ಲಿದ್ದಂತಹ ಸೌಂದರ್ಯದ ಭಾವನೆಗಳು ತಾರುಣ್ಯಕ್ಕೆ ಬಂದಾಗ ಅದರ ಕಲ್ಪನೆಯೇ ಬೇರೆಯಾಗಿದೆ ಎಂಬುದು ತಿಳಿಯುತ್ತದೆ. ಬಾಲ್ಯದಲ್ಲಿ ಪ್ರೀತಿಗೆ ಸೌಂದರ್ಯ ಮುಖ್ಯ ಎಂಬ ಕಲ್ಪನೆ ಇದ್ದದ್ದು ತಾರುಣ್ಯದಲ್ಲಿ ಪ್ರೀತಿಗೆ ಸೌಂದರ್ಯದ ಬದಲಾಗಿ ಭಾವನೆ ಮುಖ್ಯ ಎಂದಾಗುತ್ತದೆ. ಇದು ಅವರು ಸಾಗಿಬಂದ ದಾರಿ ಮತ್ತು ಅವರು ಬಯಸಿದ ಪ್ರೀತಿಯ ಸ್ವರೂಪವನ್ನು ತಿಳಿಸುತ್ತದೆ.

ಓದಿನಲ್ಲಿ ಮುಂದಿದ್ದ ಪ್ರತಿಭಾರಿಗೆ ಪ್ರೀತಿಯನ್ನು ಪಡೆಯುವುದೂ ಕೂಡ ಅಷ್ಟೇ ಸಹಜವಾದುದಾಗಿ ಕಾಣಿಸುತ್ತದೆ. ಕಾಲೇಜು ದಿನಗಳಲ್ಲಿ ಮೇಷ್ಟ್ರನ್ನು ಪ್ರೀತಿ ಮಾಡಲು ಬಯಸುತ್ತಾರೆ. ಆದರೆ ಅವರಿಂದ ಪ್ರೀತಿಯನ್ನು ಪಡೆಯಲು ಸಾದ್ಯವಾಗುವುದಿಲ್ಲ. ಕೊನೆಗೆ ೨೦ ವರ್ಷಗಳ ನಂತರವೂ ಅವರ ಮೇಲೆ ಪ್ರೀತಿ ಇದ್ದು, ದುಃಖವಿಲ್ಲದೆ, ನೆಮ್ಮದಿಯ ಸ್ನೇಹ ಮುಂದುವರಿದಿರುವುದನ್ನು ಗಮನಿಸಿದಾಗ ಪ್ರೀತಿಯೆಡೆಗಿನ ಅವರ ತಳಮಳ ಗೊತ್ತಾಗುತ್ತದೆ. ಅಲ್ಲದೆ ಇದು ಅವರ ಜೀವನ ಪ್ರೀತಿಯನ್ನು ಅನಾವರಣ ಮಾಡುತ್ತದೆ.

ಸಂಪ್ರದಾಯಸ್ತ ಕೂಡು ಕುಟುಂಬದಲ್ಲಿ ಜನಿಸಿದ ಪ್ರತಿಭಾ ಅವರ ಮನೆಯಲ್ಲಿ ಪ್ರತಿದಿನ ಬೆಳಿಗ್ಗೆ ಭಾರತ ಮತ್ತು ಭಗವದ್ಗೀತೆಗಳನ್ನು ರಾಗವಾಗ ಓದುವ ಪರಿಪಾಠವಿತ್ತು. ಹಾಗೆಯೇ 'ಅನ್ನಪೂರ್ಣೆ ಸದಾ ಪೂರ್ಣೆ' ಎಂದು ಹೇಳುತ್ತಿದ್ದ ಧಾರ್ಮಿಕ ವಾತಾವರಣದಲ್ಲಿ ಬೆಳೆದರೂ ದೇವರ ಬಗ್ಗೆ ಪೂರ್ಣಪ್ರಮಾಣದಲ್ಲಿ ನಂಬಿಕೆ ಉಳ್ಳವರಲ್ಲ. ಸಾಂಪ್ರದಾಯಿಕ ವಾತಾವರಣವಿದ್ದರೂ ಪ್ರತಿಭಾ ಅವರು ಸ್ವಚ್ಚಂದ ಹಕ್ಕಿಯಂತೆ ಬೆಳೆದುದರಿಂದ ಯಾವುದೇ ರೀತಿಯ ಶೋಷಣೆ, ವಂಚನೆ, ಅಸಮಾನತೆಗಳಿಗೆ ಒಳಗಾಗಲಿಲ್ಲ. ಇದು ಅವರು ಕುಟುಂಬದಲ್ಲಿ ಹೊಂದಿದ್ದ ಸ್ವಾತಂತ್ರದ ಸಾಕ್ಷಿಯಂತಿದೆ. ಯಾವುದೇ ರೀತಿಯ ಹೆಣ್ಣು-ಗಂಡು ಎಂಬ ಬೇಧವಿಲ್ಲದೆ ಸ್ವೇಚ್ಚೆಯಿಂದ ಇದ್ದುದರಿಂದ ಪ್ರತಿಭಾ ಅವರು ಜೀವನದ ಅನೇಕ ಸಂಕಷ್ಟಗಳನ್ನು ಮೀರಿರುವುದನ್ನು ಕಾಣಬಹುದು. ಇಲ್ಲಿ ಕುಟುಂಬದ ವಾತಾವರಣ ಪ್ರಮುಖ ಪಾತ್ರ ವಹಿಸುತ್ತದೆ. ಸಾಂಪ್ರಾದಾಯಿಕ ಹುಡುಗಿಯರಂತೆ ಇರದೆ ಸ್ವೇಚ್ಚೆಯಿಂದ ಇರುವುದಕ್ಕೆ ಕಾರಣ ಕುಟುಂಬದಲ್ಲಿದ್ದ ಸ್ವಾತಂತ್ರ್ಯ ಎಂದರೆ ತಪ್ಪಾಗಲಾರದು.

ಪ್ರತಿಭಾ ಅವರ ಕುಟುಂಬದಲ್ಲಿ ೧೧ ಜನ ಇದ್ದರೂ ಅವರವರ ಜೀವನದ ದಾರಿಯನ್ನು ಅವರು ನೋಡಿಕೊಂಡಿರುವುದು ಕುಟುಂಬದಲ್ಲಿದ್ದ ವೈಯುಕ್ತಿಕ ಸ್ವಾತಂತ್ರ್ಯ ಎನ್ನಬಹುದು. ಇದೇ ರೀತಿ ಇರಬೇಕು, ಇದೇ ರೀತಿ ನಡೆಯಬೇಕು ಎಂಬ ನಿಯಮ ಅವರ ಕುಟುಂದಲ್ಲಿರಲಿಲ್ಲ. ಆದುದರಿಂದ ಪ್ರತಿಭಾ ಅವರು ಸಾಂಸಾರಿಕ ಜೀವನದಲ್ಲಿ ಕಾಲಿಟ್ಟ ನಂತರ ವೈಯುಕ್ತಿಕ ಸ್ವಾತಂತ್ರ್ಯಕ್ಕೆ ದಕ್ಕೆ ಬಂದ ಸಂದರ್ಭದಲ್ಲಿ ಬಾಲ್ಯದ, ಕುಟುಂಬದ ವಾತಾವರಣವನ್ನು ಸ್ಮರಿಸುವುದು ಅನಿವಾರ್ಯದಂತೆ ಕಂಡು ಬಂದಿದೆ.

'ತಂದೆ ತಾಯಿಗಳಿಂದ ಒಂದು ಸಣ್ಣ ಏಟಾಗಲಿ, ಕೆಟ್ಟ ಬೈಗುಳವಾಗಲೀ, ನಕಾರಾತ್ಮಕವಾದ ಯಾವುದೇ ಭಾವನೆಯಾಗಲಿ ಪಡೆಯದ ನಾನು ಈ ಹೊಸಾ ದಾಳಿಯಿಂದ ತೀರಾ ಕಂಗಾಲಾದೆ' ಎನ್ನುವ ಲೇಖಕಿ ಮದುವೆಯಾಗಿ ಗಂಡನ ಮನೆಯಲ್ಲಿ 'ಅವನಿಂದ' ಹಿಂಸೆಗೆ ಒಳಗಾದಾಗ ಈ ರೀತಿ ಹೇಳಿದ್ದಾರೆ. ಈ ಹೇಳಿಕೆಯನ್ನು ಗಮನಿಸಿದರೆ ಕುಟುಂಬದಲ್ಲಿದ್ದ ಸ್ವಾತಂತ್ರಕ್ಕೂ, ಗಂಡನ ಮನೆಯಲ್ಲಿರುವ ಸ್ವಾತಂತ್ರಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಬದುಕು ಏರುಪೇರಾದಾಗ ಅವರು ಆತಂಕಕ್ಕೆ ಜಾರುವ ಮನಸ್ಥಿತಿಯನ್ನು ಕಾಣಬಹುದು. ಇಲ್ಲಿ 'ಹೆಣ್ಣು' ಎಂಬ ಕಾರಣಕ್ಕೆ ಎಲ್ಲವನ್ನು ಸಹಿಸಿಕೊಂಡು ಹೋಗುವ ಭಾವನೆಗೆ ಬದಲಾಗಿ ಯಾರ ಹಂಗೂ ಇಲ್ಲದೆ ಬಾಳಬೇಕು ಎಂಬ

ಅವರ ಭಾವನೆ ಮುಖ್ಯವಾಗುತ್ತದೆ. ಅಂದರೆ ಅವರು ಸಂಸಾರದಲ್ಲಿ 'ಅವನಿಂದ' ಪಡುವ ಕಷ್ಟಗಳಿಗೂ ಮತ್ತು ಅದೇ ಸಮಯಕ್ಕೆ ಅವರು ನೆನೆಯುವ ತಮ್ಮ ಕುಟುಂಬದ ನೆನಪುಗಳಿಗೂ ಒಂದು ಆಂತರಿಕ ಸಂಬಂಧವಿದೆ.

'ಹೆಣ್ಣು ಎಂದ ಮಾತ್ರಕ್ಕೆ ಎಲ್ಲಾ ಅನ್ಯಾಯವನ್ನು ಸಹಿಸುವುದೂ ಅನ್ಯಾಯ ಮಾಡಿದಂತೆ' ಎಂಬ ನಂಬಿಕೆಯನ್ನು ಹೊಂದಿರುವ ಪ್ರತಿಭಾ ಅವರು ಅನ್ಯಾಯದ ವಿರುದ್ಧ ಮಾಡುವ ಪ್ರತಿಭಟನೆ ಒಂದು ಹೊಸ ಹೆಜ್ಜೆಯಂತೆ ತೋರುತ್ತದೆ. ಗಂಡ ನೀಡಿದ ಎಲ್ಲಾ ಹಿಂಸೆಯನ್ನು ತಡೆದುಕೊಂಡಿದ್ದರೆ ಪರಿಸ್ಥಿತಿಯೇ ಬೇರೆಯಾಗಿರುತ್ತಿತ್ತು. ಆದರೆ ಪ್ರತಿಭಾರ ಧೈರ್ಯ ಮತ್ತು ಛಲ, ಯಾವುದೇ ನಿರ್ಣಯವನ್ನು ಅವರೇ ತೆಗೆದುಕೊಳ್ಳುವ ನಿಲುವು ಸಾಂಪ್ರದಾಯಿಕ ಚೌಕಟ್ಟನ್ನು ಮೀರುವಂತದ್ದಾಗಿದೆ.

ಬಾಲ್ಯ ಮತ್ತು ಯೌವ್ವನದಲ್ಲಿ ತಂದೆ-ತಾಯಿ, ಅಕ್ಕ-ಅಣ್ಣ-ತಮ್ಮಂದಿರೊಂದಿಗಿದ್ದ ಕುಟುಂಬಕ್ಕೂ ಪ್ರತಿಭಾರು ಗಂಡ-ಮಕ್ಕಳೊಂದಿಗಿನ ಕುಟುಂಬಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಬಾಲ್ಯದಿಂದಲೂ ಸ್ವಚ್ಛಂದ ಹಕ್ಕಿಯಂತೆ ಬೆಳೆದ ಅವರಿಗೆ ಅವರದೇ ಕುಟುಂಬದಲ್ಲಿ ಸ್ವಾತಂತ್ರವಿಲ್ಲದಿರುವುದು ಸಹಿಸದ ನೋವಾಗಿ ಕಂಡುಬರುತ್ತದೆ. ಲೌಕಿಕ ವ್ಯವಹಾರದ ನೂರೆಂಟು ತಾಪತ್ರಯಗಳ ಜೊತೆಗೂ ಮಕ್ಕಳನ್ನು ನಿಭಾಯಿಸಿ, ಗಂಡನೊಂದಿಗೆ ಹೊಂದಿಕೊಂಡು ಹೋಗಬೇಕಾದ ಪರಿಸ್ಥಿತಿಗೆ ಅವರು ಸಿಲುಕುತ್ತಾರೆ. ಹೀಗೆ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ ಪ್ರತಿಭಾ ಅವರು ಒರಟು ಕುಟುಂಬದಲ್ಲಿ ಕಷ್ಟಗಳ ಸಾಲನ್ನು ಎದುರಿಸಬೇಕಾದ ಸವಾಲು ಮತ್ತು ಅವರು ಅದನ್ನು ಎದುರಿಸಿದ ಛಲವನ್ನು ಒಟ್ಟಿಗೆ ಕಾಣಬಹುದು.

೩.೨. ಬರಹಗಾರ್ತಿ ಗಂಡನ ಜೊತೆಗಿನ ಸಂಬಂಧ

ಪ್ರತಿಭಾ ಅವರ ಗಂಡನ ಜೊತೆಗಿನ ಸಂಬಂಧವನ್ನು ಆತ್ಮಕಥೆಯಲ್ಲಿ ಗೃಹ ಪ್ರವೇಶದ ದಿನದಂದು ಗುರುತಿಸಲಾಗಿದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಹೊಸ ಮನೆಯ ಪ್ರವೇಶದೊಂದಿಗೆ ಮೂರು ವರ್ಷಗಳವರೆಗೆ ಬೇರೆ ಬೇರೆಯಾಗಿದ್ದ ಕುಟುಂಬ ಮತ್ತೆ ಒಂದಾಗಿ ಹೊಸ ಜೀವನದ ಪ್ರಾರಂಭ ಆಗಿದೆ. 'ನಾನು ಮನೆ ಕಟ್ತೇನಿ ಬಂದು ಬಿಡು' ಅಂತ ಅವನು ಕರೆದಾಗ ನಾನು ಹೇಳಿದ್ದೆ, 'ನನ್ನದೇನೇನೂ ಅಭ್ಯಂತರವಿಲ್ಲ. ಆದರೆ ನನಗೆ ಈಗ ನಲವತ್ತೈದು ದಾಟಿರುವುದರಿಂದ ಹದಿನಾರರ ಹುಡುಗಿಗೆ ಹಾಕುವಂತಹ ಕಟ್ಟುಪಾಡು, ನಿಬಂಧನೆಗಳನ್ನು ಹಾಕಬಾರದು, ನನ್ನ ಮೇಲೆ ನಿರ್ಬಂಧಗಳಿರಬಾರದು. ನನ್ನ ಹೊಣೆ ಜವಾಬ್ದಾರಿ ನನಗೆ ಚೆನ್ನಾಗಿ ಗೊತ್ತಿದೆ. ಅದನ್ನು ನಾನು ನಿರ್ವಹಿಸುತ್ತೇನೆ. ಆದರೆ ನನ್ನ ಸ್ವಭಾವ ಬದಲಾವಣೆಗೆ ಯಾವ ಒತ್ತಡವನ್ನು ತರಬಾರದು'. ಎಂದು ನೇರವಾಗಿ ಹೇಳುತ್ತಾರೆ.

ಈ ಹೇಳಿಕೆಗಳನ್ನು ಗಮನಿಸಿದಾಗ ಗಂಡ-ಹೆಂಡತಿ ಬೇರೆಯಾಗಿದ್ದಕ್ಕೆ ಕಾರಣಗಳನ್ನು ಕಂಡುಕೊಳ್ಳಬಹುದು. ಇಲ್ಲಿ ಪ್ರತಿಭಾ ಅವರ ಗಂಡನಾದ ನಂದ ಅವರು ಹೆಂಡಿಯಾದವಳು

ಸರಿಯಿರಲಿ, ತಪ್ಪಿರಲಿ ಗಂಡನ ಅನುಮತಿಯಂತೆ ನಡೆಯಬೇಕು ಎಂದು ಭಾವಿಸಿದವರು. ಆದರೆ ಪ್ರತಿಭಾ ಅವರು ಗಂಡನ ಮಿತಿಯಲ್ಲಿ ಇರದೆ ವೈಯುಕ್ತಿಕ ಸ್ವಾತಂತ್ರವನ್ನು ಬಯಸುವವರು. ಇಲ್ಲಿ ಪುರುಷಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸಿ ಆ ಮೂಲಕ ಹೆಣ್ಣು ಗಂಡು ಇಬ್ಬರೂ ಸಮಾನರು ಎಂಬ ಮನೋಭಾವ ಲೇಖಕಿಯಲ್ಲಿ ಇರುವುದನ್ನು ಕಾಣುತ್ತೇವೆ. ಇದು ಸಾಂಪ್ರದಾಯಿಕ ಸಮಾಜಕ್ಕೆ ಅಸಹಜದಂತೆ ಕಂಡಿದೆ.

ತನಗೆ ಈಗ ನಲವತ್ತೈದು ದಾಟಿರುವುದರಿಂದ ಹದಿನಾರರ ಹುಡುಗಿಗೆ ಹಾಕುವಂತಹ ಕಟ್ಟುಪಾಡು ನಿಬಂಧನೆಗಳನ್ನು ಹಾಕಬಾರದು ಎಂಬ ಷರತ್ತಿನ ಮೇರೆಗೆ ಮತ್ತೆ ಗಂಡನೊಂದಿಗೆ ಬರಲು ಒಪ್ಪುವ ಪ್ರತಿಭಾರ ಮನಸ್ಥಿತಿ ಇಲ್ಲಿ ಬಹಳ ಮುಖ್ಯವಾಗುತ್ತದೆ. ಏಕೆಂದರೆ ತಾರುಣ್ಯದಲ್ಲಿರುವಾಗ ಮಾನಸಿಕ ಹೊಯ್ದಾಟಗಳು ಇರುತ್ತವೆ. ಇದರ ಪರಿಣಾಮ ಸಂಸಾರದಲ್ಲಿ ಏರುಪೇರುಗಳು, ತಲ್ಲಣಗಳು ಉಂಟಾಗುತ್ತವೆ. ಅಷ್ಟೊಂದು ಸ್ವಾತಂತ್ರ್ಯವನ್ನು ಬಯಸಿಯೂ ಅವರು ಗಂಡನ ಜೊತೆಗೆ ಹೊಂದಿಕೊಂಡು ಹೋಗುವ ಅನಿವಾರ್ಯತೆಯನ್ನು ಸಾಂಪ್ರದಾಯಿಕ ಸಮಾಜ ತಂದೊಡ್ಡಿದೆ.

ತಾರುಣ್ಯ ದಾಟಿದ ನಂತರ ಇಂತಹ ಏರುಪೇರುಗಳು ತಲ್ಲಣಗಳು ಕಡಿಮೆಯಾಗುವುದು ಒಂದು ಕಾರಣವಾದರೆ, ಜವಾಬ್ದಾರಿಯ ಅರಿವು ಇನ್ನೊಂದೆಡೆಗೆ ಪರಿಸ್ಥಿತಿಯನ್ನು ನಿಭಾಯಿಸುವ ಶಕ್ತಿ ಕೊಡುತ್ತದೆ. ಈ ಕಾರಣಕ್ಕಾಗಿ ಪ್ರತಿಭಾ ಅವರು ಗಂಡನಿಂದ ಯಾವುದೇ ನಿರ್ಬಂಧಗಳನ್ನು ಅಲ್ಲಗಳೆಯುತ್ತಾರೆ. ಬಾಲ್ಯದಿಂದಲೂ ಸ್ವೇಚ್ಛೆಯಿಂದ ಬೆಳೆದು ಬಂದ ಪ್ರತಿಭಾರು ಎಂತಹುದೇ ಕಷ್ಟ ಬಂದರೂ ಎದುರಿಸಿರುವುದನ್ನು ಕಾಣುತ್ತೇವೆ. ವೈಯುಕ್ತಿಕ ಸ್ವಾತಂತ್ರಕ್ಕೆ ದಕ್ಕೆಯಾದಾಗ ಅದನ್ನು ಮೀರಿ ಬದುಕಿ ತೋರಿಸಿದ ದಿಟ್ಟ ಮಹಿಳೆಯಾಗಿ ಪ್ರತಿಬಾ ಅವರು ಕಾಣಿಸುತ್ತಾರೆ.

ನಂದಕುಮಾರ್ ಅವರು ಮೊದಲಬಾರಿಗೆ ಕಾಯಿಲೆಗೆ ತುತ್ತಾದಾಗ ಪ್ರತಿಭಾ ಅದನ್ನು ನಿಭಾಯಿಸಿದ ರೀತಿಯನ್ನು ಕಂಡು ವಾರ್ಡ್‌ಬಾಯ್ ಹೇಳಿದ 'ಸಾವಿತ್ರಿ ಥರ ಕಣಮ್ಮ ನೀನು ಗಂಡನ ಉಳಿಸಿಕೊಂಡು ಹೋಗ್ತಿದ್ದೀಯಾ'. ಎಂಬ ಮಾತು ನಂದ ಮತ್ತು ಪ್ರತಿಭಾ ಅವರ ನಡುವಿನ ಪ್ರೀತಿಯ ಆಳ ತಿಳಿಸಿಕೊಡುತ್ತವೆ. ಗಂಡನನ್ನು ಅತಿಯಾಗಿ ಪ್ರೀತಿಸಿಯೂ ಅವರು ಅಪೇಕ್ಷೆಪಡುತ್ತಿದ್ದುದು ವೈಯಕ್ತಿಕ ಸ್ವಾತಂತ್ರ್ಯವನ್ನು ಮಾತ್ರ ಎಂಬುದು ಇದರಿಂದ ತಿಳಿಯುತ್ತದೆ.

ಗಂಡ ಯಾವಾಗಲೂ ಹೆಣ್ಣಾದವಳು ತನ್ನ ಅಧೀನದಲ್ಲಿರಬೇಕು ಎಂದು ಬಯಸುವುದು ಬಹಳ ಹಿಂದಿನಿಂದಲೂ ಬಂದಿದೆ. ನಂದಕುಮಾರ್ ಅವರು ಕೂಡ ಇದಕ್ಕೆ ಹೊರತಾದಂತೆ ಕಂಡುಬಂದಿಲ್ಲ. ಇದಕ್ಕೆ ಬಲವಾದ ಕಾರಣ ಅವರಿಗೆ ಹೆಂಡತಿಯ ಮೇಲಿದ್ದ ಅತಿಯಾದ ಪ್ರೀತಿಯೂ ಆಗಿರಬಹುದು. ಅಥವಾ ಪುರುಷ ಪ್ರಧಾನ ಸಮಾಜಕ್ಕೆ ಅವರು ಕೊಟ್ಟ ಮನ್ನಣೆಯೂ ಆಗಿರಬಹುದು. ಆದರೆ ಪ್ರತಿಭಾ ಅವರು ಇದಕ್ಕೆ ತದ್ವಿರುದ್ದವಾಗಿರುವುದನ್ನು ಕಾಣುತ್ತೇವೆ. ತನ್ನ

ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಅಡ್ಡಿಯಾದಾಗಲೆಲ್ಲ ಪ್ರತಿಭಟಿಸಿರುವುದು ಅವರ ಸ್ವಚ್ಛಂದ ಬದುಕಿನ ಆಸಕ್ತಿಯನ್ನು ತಿಳಿಸುತ್ತದೆ. ಸಂಪ್ರದಾಯಸ್ತ ಹೆಣ್ಣುಮಗಳಂತೆ ಎಲ್ಲದಕ್ಕೂ ಗಂಡನನ್ನೇ ಅವಲಂಬಿಸಿ ಹೆದರಿ ಬೆದರಿ ನಡೆಯಬೇಕೆಂಬ ನಿಯಮಗಳನ್ನು ಅವರು ಪ್ರಶ್ನಿಸಿದ್ದಾರೆ.

'ನಾನು ಸಂಪ್ರದಾಯಸ್ತ ಹೆಂಡತಿಯಂತೆ ನಡೆದುಕೊಳ್ಳಬೇಕಾದರೆ ನೀನು ಸಂಪ್ರದಾಯಸ್ತ ಗಂಡನಂತೆ ನಡೆದುಕೊಳ್ಳಬೇಕು' ಎಂದು ಪ್ರತಿಭಾ ಗಂಡನನ್ನು ಪ್ರಶ್ನಿಸುತ್ತಾಳೆ. 'ಸಂಪ್ರದಾಯಸ್ತ ಹೆಣ್ಣು' ಎಂದರೆ ಹೀಗೇ ಇರಬೇಕು ಎಂದು ಬಯಸುವ ಸಮಾಜವು, 'ಸಂಪ್ರದಾಯಸ್ತ ಗಂಡು' ಎಂದರೆ ಹೀಗೇ ಇರಬೇಕು ಎಂಬ ನಿಯಮವನ್ನು ನಿರ್ಮಿಸಿಲ್ಲದಿರುವುದು ಪುರುಷಪ್ರಧಾನ ವ್ಯವಸ್ಥೆಯ ಕ್ರೂರತೆಯನ್ನು ತೋರಿಸಿಕೊಡುತ್ತದೆ. 'ಸಾಂಪ್ರದಾಯಸ್ತ ಹೆಣ್ಣು ಎಂದರೆ ಗಂಡ ಹೇಳಿದ ಹಾಗೆ ಕೇಳಬೇಕು, ಅವನ ಅನುಮತಿ ಪಡೆಯದೇ ಎಲ್ಲಿಗೂ ಹೋಗುವ ಹಾಗಿಲ್ಲ. ಹೊರಗಿನ ಕೆಲಸದ ಜೊತೆಗೆ ಅಡಿಗೆ, ಮಕ್ಕಳ ಪಾಲನೆ, ಮನೆ ಕೆಲಸ ಮಾಡಿಕೊಂಡು ಇರಬೇಕು. ಅವನು ಹೇಳಿದ ಕಡೆ ಹೋಗಬೇಕು. ಹೇಳಿದ ಕೆಲಸ ಮಾಡಬೇಕು. ಬೇಡ ಅಂದಿದ್ದನ್ನು ಮಾಡುವ ಹಾಗಿಲ್ಲ, ಅಂತಹ ಕಡೆಗೆ ಹೋಗುವ ಹಾಗಿಲ್ಲ. ಇತ್ಯಾದಿ ನಿಯಮಗಳನ್ನು ಗಂಡೂ ಕೂಡ ಪಾಲಿಸಬೇಕು. ಇಲ್ಲಿ ಹೆಣ್ಣಿನ ಮೇಲೆ ಹೇರಲಾಗಿರುವ ಸಾಂಪ್ರದಾಯಿಕ ನಿಯಮ ನಿಬಂಧನೆಗಳನ್ನು ಗಂಡಿನ ಮೇಲೂ ಹೇರಬೇಕು' ಎಂಬುದು ಲೇಖಕಿಯ ವಾದ. ಆದರೆ ಗಂಡು ಯಾವತ್ತಿಗೂ ಈ ಎಲ್ಲಾ ನಿಯಮಗಳನ್ನು ಪಾಲಿಸಲು ಒಪ್ಪುತ್ತಾನೆಂಬುದು ಅಕ್ಷರಸಹ ಸುಳ್ಳು. ಅದೇ ರೀತಿ ಹೆಣ್ಣಾದವಳು ಇದಕ್ಕೆ ಒಪ್ಪಲೇಬೇಕು ಎಂಬ ವಾದವನ್ನು ಕಾಣುತ್ತೇವೆ. ಇಂತಹ ಸಾಂಪ್ರದಾಯಿಕ ನಿಯಮಗಳನ್ನು ಪ್ರಶ್ನಿಸಿದಾಗ ಹುಟ್ಟುವುದೇ ಜಗಳ. ಪ್ರತಿಭಾ ಅವರು ಕೂಡ ಬಾಲ್ಯದಿಂದ ಯಾವುದೇ ಕಟ್ಟುಪಾಡು ಇಲ್ಲದೆಯೇ ಬೆಳೆದು ಬಂದಿದ್ದರ ಪರಿಣಾಮ ಈ ಸಾಂಪ್ರದಾಯಿಕ ನಿಯಮಗಳಿಗೆ ಎದುರಾಗಿ ನಿಲ್ಲುತ್ತಾರೆ.

ಪ್ರತಿಭಾ ಅವರು ಸಾಂಪ್ರದಾಯಿಕ ನಿಯಮಗಳನ್ನು ಧಿಕ್ಕರಿಸಿರುವುದು ಹೆಣ್ಣಿನ ವಾಸ್ತವವಾದದ ಕಲ್ಪನೆಯಂತಿದೆ. ಶತಮಾನಗಳಿಂದಲೂ ಹೆಣ್ಣಾದವಳು ಹುಟ್ಟಿದಾಗ ಅಂದರೆ ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿ, ಯೌವನದಲ್ಲಿ ಗಂಡನ ಆಶ್ರಯದಲ್ಲಿ, ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿ ಇರಬೇಕು. ಅವಳಿಗೆ ಸ್ವಾತಂತ್ರ್ಯವೆಂಬುದೇ ಇಲ್ಲ. ಅವಳು ಸಬಲೆಯಲ್ಲ, ಅಬಲೆ. ಅವಳು ಒಂಟಿಯಾಗಿ ಸ್ವತಂತ್ರ್ಯವಾಗಿ ಜೀವಿಸಲು ಅನರ್ಹಳು ಎಂಬ ತಿಳುವಳಿಕೆಯನ್ನು ಪ್ರಶ್ನಿಸುವ ದ್ಯೋತಕವಾಗಿದೆ, ಇಲ್ಲಿನ ಲೇಖಕಿಯ ಧೋರಣೆ.

ಗಂಡನಿಂದ ದೈಹಿಕವಾಗಿ ಮಾನಸಿಕವಾಗಿ ಹಿಂಸೆಗೊಳಗಾದ ಪ್ರತಿಭಾರವರು ಎಲ್ಲವನ್ನು ಸಹಿಸಿಕೊಂಡವರು. ಎಲ್ಲವನ್ನು ಸಹಿಸಿಕೊಂಡು ಯಾಕೆ ಇರಬೇಕು ಎಂದು ಪ್ರಶ್ನಿಸಿದಾಗ ಇವರ ಉತ್ತರ 'ಯಾಕೆಂದರೆ ನಾನು ಅವನನ್ನು ಪ್ರೀತಿಸುತ್ತೀನಿ. ಅದಕ್ಕೆ' ಎನ್ನುವುದೇ ಆಗಿದೆ. ಪ್ರತಿಭಾ ಅವರ ಪ್ರೀತಿಯು ಎತ್ತರದ ಸ್ಥಾನದಲ್ಲಿ ನಿಲ್ಲುವುದು ಈ ಕಾರಣಕ್ಕಾಗಿ. ಪ್ರೀತಿಯಲ್ಲಿ ಹಿಂಸೆ

ಇರುತ್ತದೆ ಎಂಬ ಮಾತು ಸತ್ಯಕ್ಕೆ ಹತ್ತಿರವಾದಂತಿದೆ. ಇಲ್ಲಿ ನಂದಾ ಅವರ ಪ್ರಮುಖ ಉದ್ದೇಶ ಹೆಂಡತಿಯನ್ನು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಸಿಕ್ಕಿಸಬೇಕೆಂಬುದಲ್ಲದೆ, ಅವರಿಗೆ ಹೆಂಡತಿಯನ್ನು ಎಲ್ಲಿ ಕಳೆದುಕೊಳ್ಳುತ್ತೇನೊ ಎಂಬ ಆತಂಕ ಕೂಡ ಮನೆಮಾಡಿದೆ. ಪ್ರತಿಭಾ ರವರೇ ಹೇಳುವಂತೆ 'ನನಗೆ ಐವತ್ತು ವರ್ಷ ಆದ ಮೇಲೆ ಇದೆಲ್ಲ ಇರಲ್ಲ' ಎಂಬ ಮಾತು ವ್ಯಕ್ತಿಯ ಜೀವನದಲ್ಲಿ ವಯಸ್ಸು ವಹಿಸಿವ ಪ್ರಮುಖ ಪಾತ್ರವನ್ನು ತಿಳಿಸುತ್ತದೆ. ಐವತ್ತು ವರ್ಷ ಆದ ಮೇಲೆ ಇದೆಲ್ಲ ಇರಲ್ಲ ಅನ್ನುವಾಗ ಜೀವನದಲ್ಲಿ ಕಷ್ಟ ಸುಖಗಳನ್ನು ನೋಡಿ, ಪಾರಾದ ಮೇಲೆ ತಪ್ಪುಗಳ ಅರಿವಾಗುತ್ತದೆ. ಅನುಭವದಿಂದ ಎಂತಹ ಸಂದರ್ಭ ಬಂದರೂ ಎದುರಿಸಿ ನಿಲ್ಲಬೇಕು ಎಂಬುದನ್ನು ತೋರಿಸಿಕೊಡುತ್ತದೆ. ಅಲ್ಲದೆ ವಯಸ್ಸು ಏರುತ್ತಾ ಹೋದಂತೆ ಅಲ್ಲಿ ಯಾವುದೇ ಸಾಂಪ್ರದಾಯಿಕ ನಿಯಮಗಳಿರುವುದಿಲ್ಲ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ತಾರುಣ್ಯದಲ್ಲಿದ್ದಾಗ ಕಟ್ಟುಪಾಡುಗಳು ಆವರಿಸಿರಿತ್ತವೆ. ಅದೇ ಮುಪ್ಪಿಗೆ ಕಾಲಿಟ್ಟಾಗ, ಸಾಂಪ್ರದಾಯಿಕ ನಿಯಮ, ನಿಬಂಧನೆಗಳು ಕಳಚುತ್ತಾ ಹೋಗುತ್ತವೆ.

ಸಾಂಸಾರಿಕ ಜೀವನವನ್ನು ತೂಗಿಸಲು ಮತ್ತು ಮನೆಯಲ್ಲಿ ಗಲಾಟೆ ಇಲ್ಲದಂತೆ ಶಾಂತಿ, ನೆಮ್ಮದಿ ತರಲು ಪ್ರತಿಭಾ ಅವರು ಕಂಡುಕೊಂಡ ಏಕೈಕ ಮಂತ್ರ/ದಾರಿ/ವಿದ್ಯೆ ಎಂದರೆ ಸುಳ್ಳು ಹೇಳುವುದು. ಸುಳ್ಳು ಹೇಳುವುದು ಇಲ್ಲಿ ಒಂದು ಅಪರಾಧವಾಗಿಲ್ಲ. ಸುಳ್ಳು ಹೇಳುವುದರಿಂದ ಅನುಕೂಲವೂ ಇದೆ. ಅನಾನುಕೂಲವೂ ಇದೆ. ಆದರೆ ಎಂತಹ ಸುಳ್ಳು ಎಂಬುದರ ಮೇಲೆ ಪರಿಸ್ಥಿತಿಯನ್ನು ನಿಭಾಯಿಸಬಹುದಾಗಿದೆ. ಇಲ್ಲಿ ಹೆಣ್ಣಾದವಳು ಗಂಡನನ್ನು ಮನೆ ಮಕ್ಕಳನ್ನು ಅತಿಯಾಗಿ ಪ್ರೀತಿಸುತ್ತಿದ್ದರಿಂದ ಅದೆಲ್ಲವನ್ನು ನಿಭಾಯಿಸುವ ಸಲುವಾಗಿ ಸುಳ್ಳನ್ನು ಮಂತ್ರವಾಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇದು ಮೇಲುನೋಟಕ್ಕೆ ಅಪರಾಧವಾಗಿ ಕಂಡರೂ ಮಹಿಳೆ ತಾನು ಸಮಾಜದ ದೃಷ್ಠಿಯಲ್ಲಿ ಕೆಟ್ಟವಳು ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಾಗ ಸುಳ್ಳು ಎಂಬುದೊಂದು ಸಹಾಯಕ ತಂತ್ರವಾಗುತ್ತದೆ. ಇದೇ ತಂತ್ರವನ್ನು ಇಲ್ಲಿನ ನಿರೂಪಣೆಯಲ್ಲಿ ಕಾಣಬಹುದು. ಜೀವನದುದ್ದಕ್ಕೂ ಎಷ್ಟೊಂದು ಸುಳ್ಳುಗಳನ್ನು ಹೇಳುವ ಲೇಖಕಿ ಅದಕ್ಕಾಗಿ ಯಾವತ್ತೂ ಮರುಗುವುದಿಲ್ಲ. ಅವರಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂಬ ಅಪರಾಧಿ ಭಾವವೂ ಇಲ್ಲ, ಜೊತೆಗೆ ಅವರು ಹಾಗೆ ಅಪರಾಧ ಮಾಡುವುದಕ್ಕಾಗಿ ಯಾವತ್ತೂ ಸುಳ್ಳುಗಳನ್ನು ಹೇಳಿಲ್ಲ.

ಇಲ್ಲಿ ಹೆಣ್ಣು ಎಂದಿಗೂ ಗಂಡಿಗೆ ಸರಿ ಸಮಾನವಾಗಿ ನಿಲ್ಲುವಂತಿಲ್ಲ. ಕಷ್ಟಗಳಿದ್ದರೂ ಸಹಿಸಿಕೊಂಡು ಹೋಗುವ ಗುಣ ಹುಟ್ಟಿನಿಂದಲೂ ಬಂದಿರುತ್ತದೆ ಎಂಬುದನ್ನು ನಂಬಿಸಲಾಗಿದೆ. ಹೆಣ್ಣು ಇರುವುದೇ ಸೇವೆ ಮಾಡಲು ಎಂಬುದನ್ನು ಬಲವಂತವಾಗಿ ಹೇರಿದಂತಿದೆ. ಹೆಣ್ಣು ಇದನ್ನೆಲ್ಲ ಪ್ರಶ್ನಿಸಿದಾಗ ಗಂಡಿನಿಂದ ಬರುವ ಉತ್ತರ ಹೆಣ್ಣು ಯಾವಾಗಲು ಗಂಡಿನ ಹದ್ದುಬಸ್ತಿನಲ್ಲಿರಬೇಕು. 'ಯಾಕೆ' ಎಂದು ಪ್ರಶ್ನೆ ಮಾಡಿದಾಗ ಹೆಣ್ಣು ಕೆಟ್ಟವಳಂತೆ ಕಾಣುತ್ತಾಳೆ. ಇಲ್ಲಿ ಮತ್ತೆ ಪುರುಷ ಪ್ರಧಾನ ಸಮಾಜದಲ್ಲಿ ಗಂಡೇ ಮುಖ್ಯವಾಗುತ್ತಾನೆ.

ಆತ್ಮಕಥೆಯಲ್ಲಿ ಹೆಚ್ಚಿನ ನಿರೂಪಣೆ ಕಂಡು ಬರುವುದು ಆಸ್ಪತ್ರೆಯ ಘಟನಾವಳಿಗಳು. ಅದರಲ್ಲೂ ನಂದಾ ಅವರಿಗೆ ಕಾಯಿಲೆಯಾದಾಗ ಪ್ರತಿಭಾ ಅದನ್ನು ನಿಭಾಯಿಸಿದ ರೀತಿಯು ತುಂಬಾ ಚಿತ್ರಿತವಾಗಿದೆ. ಹಣವಿಲ್ಲದೆ ಅವರು ಎದುರಿಸಿದ ಕಷ್ಟಗಳು ಮನಮುಟ್ಟುವಂತೆ ಚಿತ್ರಿತವಾಗಿವೆ. ಹಾಗೆಯೇ 'ಸಾವಿತ್ರಿಯಂತೆ ಗಂಡನನ್ನು ಉಳಿಸಿಕೊಂಡಳು' ಇವಳು ಸಾವಿತ್ರಿ, ಎಂಬ ಬಿರುದನ್ನು ಸ್ವಾಮೀಜಿ ಯವರಿಂದ ಪಡೆದದ್ದನ್ನು ಗಮನಿಸಿದಾಗ, ಹೆಣ್ಣು ಗಂಡ ಎಷ್ಟೇ ಕ್ರೂರಿಯಾಗಿದ್ದರೂ, ಕಷ್ಟ ಕೊಟ್ಟರೂ, ಪ್ರೀತಿಯೆಂಬುದು ಇದ್ದೇ ಇರುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ. ಪ್ರತಿಭಾರ ಪ್ರಮುಖ ಉದ್ದೇಶ ಗಂಡನನ್ನು ತಿರಸ್ಕರಿಸುವುದಾಗಿರದೆ ಆತನಲ್ಲಿರುವ ಪುರುಷವಾದಿ ಧೋರಣೆಯನ್ನು ಬದಲಾಯಿಸುವುದೇ ಆಗಿದೆ. ಬದಲಾಗಿ ಪ್ರೀತಿಯನ್ನು ಪಡೆಯುವುದೂ ಪ್ರಮುಖ ಉದ್ಧೇಶವಾಗಿದೆ.

'ಎಲ್ಲ ಕೌಟುಂಬಿಕ ಕ್ರೌರ್ಯ ಪ್ರಾರಂಭವಾಗುವುದು ಒಂದು ಸಣ್ಣ ತಳ್ಳುವಿಕೆ, ಸಣ್ಣ ತಿವಿತ, ಸಣ್ಣದೊಂದು ಏಟಿನಿಂದ. ಅದು ಪ್ರಾರಂಭವಾದಾಗ ಕೌಟುಂಬಿಕ ಕ್ರೌರ್ಯಕ್ಕೆ ಬಲಿಯಾಗುತ್ತಿರುವುದು ಹೆಣ್ಣು. ಆದರೆ ಅದು ಗೊತ್ತೇ ಆಗದಿರುವಷ್ಟು ಸಹಜವಾಗಿ ನಡೆಯುತ್ತದೆ. ಗಂಡ ಎನ್ನುವ ಅಧಿಕಾರದಿಂದ ಗಂಡು ಕೈ ಎತ್ತುತ್ತಾನೆ. ತೀವ್ರ ಅಘಾತಕ್ಕೆ ಒಳಗಾದರೂ ಹೆಂಡತಿ ಎನ್ನುವ ಕಾರಣಕ್ಕೆ ಹೆಣ್ಣು ಅದನ್ನು ನುಂಗಿಕೊಂಡು ಕ್ಷಮಿಸಿ ಬಿಡುತ್ತಾಳೆ. ಚಿಕ್ಕಂದಿನಿಂದ ಮಕ್ಕಳನ್ನು ನಾವು ಬೆಳೆಸುವುದು ಇದೇ ಧೋರಣೆಯಲ್ಲಿ ತಾನೆ?' ಎಂದು ಪ್ರಶ್ನಿಸುವ ಲೇಖಕಿಯು ಸಮಾಜದಲ್ಲಿ ಇರುವ ಲಿಂಗ ತಾರತಮ್ಯದ ವಾಸ್ತವವನ್ನು ಬಯಲಿಗೆ ಎಳೆಯುತ್ತಾರೆ. ಸಮಾಜ ಇದನ್ನು ಸಹಜ ಎಂಬಂತೆ ನಂಬಿಸಲಾಗಿದೆ. ಸ್ವತಃ ಮಹಿಳೆಯರೂ ಕೂಡ ಇದನ್ನು ಶೋಷಣೆ ಎಂದು ಭಾವಿಸುವುದೇ ಇಲ್ಲ. ಅಷ್ಟು ವ್ಯವಸ್ಥಿತವಾಗಿ ಈ ಲಿಂಗ ಅಸಮಾನತೆಯನ್ನು ಸಹಜವೆಂಬಂತೆ ನಂಬಿಸಲಾಗಿದೆ.

ವೈವಾಹಿಕ ಸಂಬಂಧಕ್ಕೆ ಸಮಾಜದಲ್ಲಿ ಅದರದೇ ಆದ ಚೌಕಟ್ಟಿದೆ. ಆ ಚೌಕಟ್ಟನ್ನು ಮೀರಿದಾಗ ಅದು 'ಹಾದರ' ಎನಿಸಿಕೊಳ್ಳುವ ಅಪಾಯ ಒದಗಿಬರುತ್ತದೆ. ಪ್ರತಿಭಾ ಅವರು ಬಯಸಿದ ಪ್ರೀತಿಯನ್ನು ಹುಡುಕುತ್ತಾ, ಅದು ಪವಿತ್ರವಾದ ಪ್ರೀತಿಯೇ ಹೊರತು ಹಾದರ ಅಲ್ಲ ಎಂದು ಬಿಂಬಿಸಿದ್ದಾರೆ. ಅವರ ನಿರೂಪಣೆಯೇ ಇದನ್ನು ದೃಢಪಡಿಸುತ್ತದೆ. ವೈವಾಹಿಕ ಸಂಗಾತಿಗಳನ್ನು ಬಿಟ್ಟು ಇನ್ನೊಬ್ಬರೊಂದಿಗೆ ಇರುವುದಕ್ಕೆ ವಾಸ್ತವ ಸಮಾಜದಲ್ಲಿ ಅನೇಕ ಕಡಿವಾಣಗಳು, ಸಂಪ್ರದಾಯಗಳು, ಅಡಚಣೆಗಳು, ನಿಬಂಧನೆಗಳು ಇತ್ಯಾದಿ ಅಡ್ಡಬರುತ್ತವೆ. ಆದರೆ ಅದು ಪರಸ್ಪರರ ನಡುವೆ ನಡೆಯುವ ಸಂಪೂರ್ಣ ವೈಯಕ್ತಿಕ ವಿಷಯವಾದಾಗ ಇಂಥ ವಿಷಯಗಳು ಪ್ರಮುಖವಾಗುವುದಿಲ್ಲ.

ತಾನು ಬಯಸಿದ ಪ್ರೀತಿ ಗಂಡನಲ್ಲಿ ದೊರೆಯದೇ ಹೋದಾಗ ಬೇರೊಂದು ಕಡೆಯಿಂದ ಆ ಪ್ರೀತಿಯನ್ನು ಬಯಸಿದ ಪ್ರತಿಭಾ ಅವರು ಗಂಡನಿಗೆ ಈ ವಿಷಯ ತಿಳಿಯಬಾರದೆಂದು ಅವನನ್ನು ಇನ್ನಷ್ಟು ಹೆಚ್ಚು ತೀವ್ರವಾಗಿ ಪ್ರೀತಿಸಲು ಪ್ರಾರಂಭಿಸುತ್ತಾರೆ. ಇದು ಗಂಡನನ್ನು ಪ್ರೀತಿಯಿಂದ ಮಾತ್ರ ಹಿಡಿತದಲ್ಲಿಡಲು ಸಾಧ್ಯ ಎಂದು ಹೇಳುವಂತಿದೆ. ಪ್ರತಿಭಾ ಅವರು

ಗಂಡನಿಂದ ಬಯಸಿದ ರೀತಿಯ ಪ್ರೀತಿ ದೊರೆಯುವುದಿಲ್ಲ ಎಂದು ತಿಳಿದ ತಕ್ಷಣ ಅವರಿಂದ ದೂರವಾಗಲು ಬಯಸುವುದಿಲ್ಲ. ಯಾಕೆಂದರೆ ಇದು ನಮ್ಮ ಸಾಂಪ್ರದಾಯಿಕ ಸಮಾಜದ ಕಟ್ಟುಪಾಡು. ಇಲ್ಲಿ ಪ್ರತಿಭಾ ಅವರು ಗಂಡನೊಂದಿಗೆ ಪ್ರೀತಿಯಿಂದ ಇದ್ದು, ಬೇರೆಯವರಿಂದಲೂ ಪ್ರೀತಿಯನ್ನು ಬಯಸುತ್ತಾರೆ. ಇದು ಮೇಲುನೋಟಕ್ಕೆ 'ದಾರಿ ತಪ್ಪಿದ' ನಡೆಯಂತೆ ಕಂಡರೂ ಅವರು ಬಯಸುವ ಪ್ರೀತಿಯ ಸ್ವರೂಪವೇ ಬೇರೆಯದು. ಗಂಡು ಹೆಣ್ಣಿನ ನಡುವೆ ಕೇವಲ ಅಪರಾಧದ ದೃಷ್ಟಿಯಲ್ಲಿ ನೋಡುವ ಸಮಾಜಕ್ಕೆ ಪ್ರತಿಭಾ ಅವರ ಪ್ರೀತಿಯ ಸ್ವರೂಪ ಅರ್ಥವಾಗುವುದಿಲ್ಲ. ಗಂಡು ಹೆಣ್ಣಿನ ವಿಷಯದಲ್ಲಿ ನಮ್ಮ ಸಮಾಜ ಇನ್ನೂ ಅಂತಹ ಮನಸ್ಥಿತಿಯನ್ನು ತಂದುಕೊಂಡಿಲ್ಲ.

ಗಂಡನಿಗೆ ಹೆಂಡತಿಯಾಗಿಯೂ ಬೇರೆಯವರೊಂದಿಗೆ ಪ್ರೀತಿಯನ್ನು ಹಂಚಿಕೊಂಡ ಸಂತೋಷ ಪ್ರತಿಭಾರಲ್ಲಿ ಎದ್ದು ಕಾಣುತ್ತಿದೆ. 'ನನ್ನದೇ ಗುಪ್ತ ಲೋಕದಲ್ಲಿ ನನ್ನಿಷ್ಟದಂತೆ ರಾಣಿಯಂತೆ ಮೆರೆಯುತ್ತಿದ್ದೆ' ಎಂಬ ಅವರ ಮಾತು ಇದನ್ನು ಧ್ವನಿಸುತ್ತದೆ. ಇದು 'ತಪ್ಪು' ಎಂದು ಅವರಿಗೆ ಭಾಸವಾಗುವುದೇ ಇಲ್ಲ. ಬಯಸಿದ ಪ್ರೀತಿ ಸಂಪೂರ್ಣವಾಗಿ ದೊರೆಯದ ಕಾರಣ ಅವರ ಪ್ರೀತಿಯ ಹುಡುಕಾಟದಲ್ಲಿ ನಿರಂತರತೆಯನ್ನು ಕಾಣಬುಹುದು. ಗಂಡನ ಬಗೆಗೆ ಮೊದಲು ಕೋಪ, ನಂತರ ತಿರಸ್ಕಾರ ಕೊನೆಗೆ ಕನಿಕರ ಎಂಬ ಮೂರು ಭಾವಗಳ ಹೊಯ್ದಾಟದಲ್ಲಿ ಬದುಕು ಖಾಲಿ ಖಾಲಿ ಎನಿಸುವುದರ ಜೊತೆಗೆ ಪ್ರತಿಭಾ ಅವರ ಪ್ರೀತಿಯ ಹಂಬಲ ಇನ್ನೂ ಹೆಚ್ಚಾಗುತ್ತಾ ಹೋಗುತ್ತದೆ.

ಪ್ರತಿಭಾ ಅವರ ಗಂಡ ನಂದಕುಮಾರ್ ಆಸ್ಪತ್ರೆಯಲ್ಲಿ ಇರುವಾಗ ಇಲ್ಲಿನ ಬರವಣಿಗೆ ಹೆಚ್ಚಿನ ಸ್ಪೇಸ್‌ಅನ್ನು ಪಡೆದಿದೆ. ಆ ಸಮಯದಲ್ಲಿ ನಂದ ಆಸ್ಪತ್ರೆಯಲ್ಲಿರುವಾಗ ಪ್ರತಿಭಾರನ್ನು ಕುರಿತು 'ನಾನು ಸತ್ತರೆ ನೀನೂ ಸತ್ತು ಹೋಗಬೇಕು. ಹಾಗಂತ ಪ್ರಾಮೀಸ್ ಮಾಡು. ಹುಟ್ಟಿದ್ದು ನನಗಾಗಿ ಮಾತ್ರ ನಾನು ಸತ್ತ ಮೇಲೆ ನೀನು ಬೇರೆ ಯಾರಿಗೂ ಸೇರಬಾರದು. ಬೇರೆ ಯಾರನ್ನು ಪ್ರೀತಿಸಿ ಮದುವೆಯಾಗಬಾರದು. ನಾನು ಸತ್ತ ಸುದ್ದಿ ತಿಳಿದ ತಕ್ಷಣ ನೀನೂ ಆತ್ಮಹತ್ಯೆ ಮಾಡಿಕೊಳ್ಳಬೇಕು' ಎಂದು ಒತ್ತಾಯಿಸುವ ಸನ್ನಿವೇಶ ಹೆಚ್ಚು ಭಾವುಕತೆಯಿಂದ ಕೂಡಿದೆ.

ಈ ಮೇಲಿನ ಹೇಳಿಕೆಯನ್ನು ಗಮನಿಸಿದಾಗ ಗಂಡನಾದವನು ಹೆಂಡತಿಯನ್ನು ಎಷ್ಟು ಪ್ರೀತಿಸುತ್ತಾನೆ ಎಂಬುದು ಒಂದುಕಡೆಯಾದರೆ, ಹೆಣ್ಣಿಗೆ ಗಂಡನಿಲ್ಲದೆ ಯಾವುದೇ ಆಸರೆಯಿಲ್ಲ. ಇದ್ದಾಗ ಗಂಡನ ಜೊತೆಗೆ ಇರಬೇಕು. ಸಾಯುವಾಗ ಗಂಡನ ಜೊತೆಯುಲ್ಲಿಯೇ ಸಾಯಬೇಕು. ಇಲ್ಲಿ ಹೆಣ್ಣಿಗೆ ಯಾವುದೇ ವೈಯುಕ್ತಿಕವಾದ ಸ್ವಾತಂತ್ರ್ಯವಿಲ್ಲ. ಅವಳ ಭಾವನೆಗಳನ್ನು ಯಾರೊಂದಿಗೂ ಹಂಚಿಕೊಳ್ಳುವ ಹಾಗಿಲ್ಲ. ಎಂಬ ಮಹಾನ್ ಪುರುಷವಾದಿ ಧೋರಣೆ ವ್ಯಕ್ತವಾಗುತ್ತದೆ. ಈ ಎರಡೂ ರೀತಿಯ ವಿಚಿತ್ರ ಸನ್ನಿವೇಶಗಳಲ್ಲಿ ಪ್ರತಿಭಾ ಅವರು ಸಿಲುಕಿದ್ದಾರೆ. ಆದರೆ ನಂದಾ ಅವರು ಎಷ್ಟೇ ಜಗಳ ಮಾಡಿದರೂ ಅವರ ಪ್ರೀತಿಯನ್ನು ವ್ಯಕ್ತಪಡಿಸುವ ಬಗೆ ಕುತೂಹಲಕರವಾದುದು. 'ಯಾಕೆ ಹುಚ್ಚೀ? ನಮ್ಮ ನಡುವೆ ಎಷ್ಟೇ ಜಗಳ ಇದ್ದರೂ ನಾವು ಹುಟ್ಟಿದ್ದೇ ಪರಸ್ಪರರಿಗಾಗಿ

ಅಲ್ಲವೇನೆ?' ಎಂದು ರಮಿಸಿ ಕೇಳುವಲ್ಲಿ ಅವರ ಪ್ರೀತಿಯನ್ನು ಅರ್ಥಮಾಡಿಕೊಳ್ಳಬಹುದು. ಅದೇ ರೀತಿ ಇಬ್ಬರ ನಡುವೆ ಮನಸ್ತಾಪ ಉಂಟಾದರೂ, ಅನಾರೋಗ್ಯದ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಮನೆಯ ನಿರ್ವಹಣೆಯ ಜೊತೆಗೆ ಮಕ್ಕಳ ನಿರ್ವಹಣೆಯೊಂದಿಗೆ ಆಸ್ಪತ್ರೆಯಲ್ಲಿ ಕಾಲ ಕಳೆದ ಬಗೆಯು ಪರಸ್ಪರರ ಪ್ರೀತಿಯ ಅನಾವರಣವೇ ಆಗಿದೆ.

ಒಂದು ಕಡೆ ಪ್ರತಿಭಾ ಅವರು ಅಂದರೆ ಮದುವೆಯಾದ ಸ್ವಲ್ಪ ದಿನಗಳಲ್ಲಿ ನಂದಾ ರವರು ಸಾಂಪ್ರದಾಯಿಕ ಹೆಂಡತಿಯಂತೆ ಅವರ ಅದೀನದಲ್ಲಿ ಇರಬೇಕು ಎಂದು ಹೇಳಿದಾಗ ಪ್ರತಿಭಾ ಅವರು ಇದನ್ನು ಪ್ರಶ್ನೆ ಮಾಡುತ್ತಾರೆ. ಎಲ್ಲಿಗೆ ಹೋದರೂ ಗಂಡನ ಅನುಮತಿಯನ್ನು ಪಡೆದೇ ಹೋಗಬೇಕು ಎಂಬ ನಂದಾ ಅವರ ನಿಲುವನ್ನು ಒಂದು ಕಡೆ ಪ್ರಶ್ನಿಸಿದರೆ, ಮತ್ತೊಂದು ಕಡೆ ನಂದಾ ಅವರು ಸಾಂಪ್ರದಾಯಿಕ ಗಂಡನ ಹಾಗೆ ಆಡುವುದಿಲ್ಲ. ಸದಾ ಒಬ್ಬ ಗೆಳೆಯನ ಥರ ಇರುತ್ತಾನೆ. ಎಂದು ಹೇಳುವಲ್ಲಿ ಅವರ ದ್ವಂದ್ವವನ್ನು ಗುರುತಿಸಬಹುದು. 'ನಾನು ಮನೆಗೆ ಫೋನ್‌ಮಾಡಿ ತಡವಾಗಿ ಬರ್ತೀನಿ ಅಂತ ಪರ್ಮೀಷನ್ ತೆಗೆದುಕೊಂಡು ಪಾರ್ಟಿಗೆ ಹೋದೆ'. ಎನ್ನುವಲ್ಲಿ ಪ್ರತಿಭಾ ಸಾಂಪ್ರದಾಯಿಕ ಹೆಣ್ಣಿನಂತೆ ಹೊರಗಡೆ ಹೋಗಲು ಅನುಮತಿಯನ್ನು ಪಡೆಯುತ್ತಿರುವುದನ್ನು ಗಮನಿಸಬಹುದು. ಜಗಳ ಮತ್ತೆ ಶುರುವಾಗಬಾರದೆಂದು ಮತ್ತು ನಂದಾರ ಪ್ರೀತಿಯನ್ನು ಕಳೆದುಕೊಳ್ಳಬಾರದೆಂಬುದೇ ಅವರ ಮನದ ಬಯಕೆಯಾಗಿರುವಂತಿದೆ. ಇಲ್ಲಿ ನಂದ ಅವರಿಗೆ ಕೋಪ ಬಾರದ ಹಾಗೆ ನೋಡಿಕೊಳ್ಳುವುದು ಪ್ರತಿಭಾ ಅವರು ಒಂದು ಜವಾಬ್ದಾರಿಯೆಂದು ತಿಳಿದಂತೆ ತೋರುತ್ತದೆ.

ಪುಸ್ತಕ ಪ್ರಕಟಣೆಯ ಸಮಯದಲ್ಲಿ ಪ್ರತಿಭಾ ಮೋಸ ಹೋಗಿದ್ದಕ್ಕೆ ನಂದ ಅವರಿಂದ ಬಂದ ಪ್ರತಿಕ್ರಿಯೆ ಕಠೋರವಾದುದಾಗಿದೆ. ಇದನ್ನು ಗಮನಿಸಿದಾಗ, ಹೆಂಡತಿಯಾದವಳು ಗಂಡನಿಗೆ ಒಂದು ಮಾತೂ ಹೇಳದೆ ನಿರ್ಧಾರ ತೆಗೆದುಕೊಂಡಿರುವ ವಿರುದ್ಧವಾದ ಧೋರಣೆಯಂತೆ ತೋರುತ್ತದೆ. ಇಲ್ಲಿ ಹೆಂಡಿಯಾದವಳು ಗಂಡನಿಗೆ ಹೇಳದೆ ಯಾವ ಕೆಲಸವನ್ನು ಮಾಡುವಂತಿಲ್ಲ. ಹಾಗೊಂದು ವೇಳೆ ಮಾಡಿದರೆ ಮೋಸ ಹೋಗುವ ಸಂಗತಿಗಳೇ ಹೆಚ್ಚು ಎಂದು ನಂಬಿದಂತಿದೆ. ನಂದಾ ಅವರು ಪ್ರತಿಭಾರಿಗೆ ಸಮಾಧಾನದ ಮಾತು ಹೇಳದೆ, ಸಿಡಿಮಿಡಿಯಾಗುವುದು ದರ್ಪದ ಸಂಕೇತವಾಗಿದೆ. ಮೋಸ ಮಾಡುವ ಜನರು ಯಾವ ಯಾವ ರೂಪದಲ್ಲಿ ಬರುತ್ತಾರೆ ಎಂದು ಕಾಣದ ಮುಗ್ದರು ಸುಲಭವಾಗಿ ಬಲಿಯಾಗುತ್ತಾರೆ. ಹಾಗೆ ಪ್ರತಿಭಾ ಅವರು ಮೋಸ ಹೋಗಿದ್ದಾರೆ. ಆದರೆ ಅದು ಇಲ್ಲಿ ಮುಖ್ಯವಾದಂತೆ ಕಾಣುವುದಿಲ್ಲ. ಹೆಣ್ಣು ಗಂಡಿನ ಸಹಾಯವಿಲ್ಲದೆ ಏನನ್ನಾದರೂ ಮಾಡಿದರೆ ಅಪಾಯ ಎಂಬ ಭಾವ ಇಲ್ಲಿದೆ.

ನಂದಕುಮಾರ್ ಅವರು ಪ್ರತಿಭಾ ಮತ್ತು ಮಕ್ಕಳನ್ನು ಹೊರ ಹಾಕಿದಾಗ, ಧೃತಿಗೆಡದೆ ಛಲದಿಂದ ಮಕ್ಕಳನ್ನು ಕರೆದುಕೊಂಡು ಅವರನ್ನು ಸಲುಹಿದ ರೀತಿಯು ಮೆಚ್ಚುವಂತದ್ದಾಗಿದೆ. ಗಂಡು ಯಾವ ಕ್ಷಣದಲ್ಲಿ ಬೇಕಾದರೂ ಹೆಣ್ಣನ್ನು ಹೊರಗೆ ಹಾಕಬಹುದು. ಆದರೆ ಹೆಣ್ಣಾದವಳಿಗೆ

ಯಾವುದೇ ರೀತಿಯ ಹಕ್ಕು ಸಾಧಿಸುವ ಅವಕಾಶ ಇರುವುದಿಲ್ಲ. ಏನನ್ನೂ ಮಾತಾಡದೇ ಹೊರ ನಡೆಯಬೇಕು ಎಂಬ ಸಮಾಜದ ಕಟ್ಟಳೆ ಕಠೋರವಾದುದಾಗಿದೆ. ಮನೆಯಿಂದ ಹೊರಬಿದ್ದ ಪ್ರತಿಭಾರಿಗೆ ಅಭದ್ರತೆ ಕೊರಗು ಕಾಡುತ್ತದೆ. ಇದರಿಂದಾಗಿ ಪ್ರತಿಭಾ ಸದಾ ಪ್ರೀತಿಯ ಹುಡುಕಾಟದಲ್ಲಿ ನಿರತರಾಗಿರುವುದು ಕಂಡು ಬರುತ್ತದೆ.

ದೇವರಲ್ಲಿ ನಂಬಿಕೆಯಿಲ್ಲದ ಪ್ರತಿಭಾ ಅವರು ಗಂಡನಿಗೋಸ್ಕರ ತಿರುಪತಿಗೆ ಹೋಗಿ ಉರುಳುಸೇವೆ ಮಾಡುವುದು, ಗಂಡನನ್ನು ಸಾವಿನ ದವಡೆಯಿಂದ ಕಾಪಾಡಿಕೊಂಡು ಬರುವುದು, 'ಸಾವಿತ್ರಿ' ಎಂಬ ಹೆಗ್ಗಳಿಕೆಗೆ ಪಾತ್ರರಾಗುವುದು ಇವೆಲ್ಲವೂ ಬದುಕನ್ನು ಅವರು ಪ್ರೀತಿಸುವ ರೀತಿಯನ್ನು ತಿಳಿಸಿಕೊಡುತ್ತವೆ. ಹೆಣ್ಣು ಗಂಡಿನ ಸಹಾಯವಿಲ್ಲದೆ, ಪರಿಸ್ಥಿತಿಯನ್ನು ನಿಭಾಯಿಸಿರುವ ಬಗೆಯು ಇಲ್ಲಿ ಕಂಡು ಬರುತ್ತದೆ. ಅದೇ ಗಂಡ ಮನೆಯಿಂದ ಹೊರ ಹಾಕಿದಾಗ ಛಲದಿಂದ ಜೀವನ ನಡೆಸಿರುವುದು ಹೆಣ್ಣಿನ ಧೈರ್ಯದ ಸಂಕೇತದಂತಿದೆ. ಇದೆಲ್ಲವನ್ನೂ ನೋಡಿದಾಗ ಪ್ರತಿಭಾರ ಛಲ, ಹೋರಾಟ ಪ್ರಮುಖವಾಗುತ್ತವೆ.

ಪ್ರತಿಭಾ ಅವರ ಹುಡುಕಾಟ ನಿರಂತರವಾಗಿ ಮುಂದುವರಿದಿದೆ. ಕೊನೆಯಲ್ಲಿ ಅವರೇ ಹೇಳುವಂತೆ "ನಾನು ಬಯಸಿದ ಪ್ರೀತಿ ಬೇರೆ ಎಲ್ಲೆಲ್ಲೂ ಸಿಗದೆ, ಪ್ರೀತಿ ಹರಸಿ ಹೋಗುವುದು ಎಷ್ಟು ಮೂರ್ಖತನ. ಕೊನೆಗೆ ಎಲ್ಲರೂ ಒಂಟಿಯೇ. ಯಾರಿಗೂ ಪರಿಪೂರ್ಣ ಪ್ರೀತಿ ಸಿಗುವುದಿಲ್ಲ. ಸಿಕ್ಕರೆ ಅಂತಹವರು ಪೂಣ್ಯವಂತರು. ಇವನ ಪ್ರೀತಿ ಬಹಳ ವಿಚಿತ್ರ, ಅವನೂ ನನ್ನಂತೆಯೇ, ಆದರೆ ಅವನು ನನ್ನ ಹಾಗೆ ಪ್ರೀತಿಯನ್ನು ಹುಡುಕಿಕೊಂಡು ಅಲೆಯಲಿಲ್ಲ. ಏನಾದರೂ ಅವನಿಗೆ ನಾನು ಮತ್ತು ಮಕ್ಕಳೇ ಸರ್ವಸ್ವ. ಅವನಿಗಿರುವ ಸಂತೃಪ್ತಿ ನನಗೇಕಿಲ್ಲ? ಎಂಬ ಆತ್ಮವಿಮರ್ಶಕ ಮಾತುಗಳನ್ನು ಪ್ರತಿಭಾ ಅವರು ಆಡುವುದನ್ನು ಗಮನಿಸಿದರೆ ಪ್ರೀತಿ ಎಂಬುದು ಪ್ರತಿಯೊಬ್ಬರಲ್ಲಿಯೂ ಭಿನ್ನವಾದುದಾಗಿರುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ. ಅಲ್ಲದೆ ಪ್ರತಿಭಾ ಅವರು ಬಯಸಿದ ಪ್ರೀತಿ ಸಂಪೂರ್ಣ ಭಿನ್ನವಾಗಿರುವುದು ಕಂಡುಬರುತ್ತದೆ.

ಪ್ರತಿಭಾ ಅವರು ಹೇಳುವಂತೆ ಪರಿಪೂರ್ಣ ಪ್ರೀತಿಯನ್ನು ಹುಡುಕುವುದಲ್ಲ. ಬದಲಾಗಿ ಪಡೆಯುವುದೇ ಆಗಿದೆ. ನಾವು ಯಾವುದನ್ನು ಹುಡುಕಿಕೊಂಡು ಹೋಗುತ್ತೇವೆಯೋ ಅದಕ್ಕೆ ಕೊನೆಯೆಂಬುದಿರುವುದಿಲ್ಲ. ಇದ್ದುದರಲ್ಲಿಯೇ ಪಡೆಯಲು ಪ್ರಯತ್ನಿಸಿದಾಗ ಫಲ ದೊರೆಯುತ್ತದೆ. ಆಸೆ ಎಂಬುದಕ್ಕೆ ಕೊನೆಯೇ ಇಲ್ಲ. ಅಂತೆಯೇ ಅತಿ ಆಸೆಯಿಂದ ದುಃಖ ತಂದುಕೊಳ್ಳುವುದು ಸಹಜ. ಇಲ್ಲಿ ಪ್ರತಿಭಾರ ಮಾನಸಿಕ ತೊಳಲಾಟ ಎದ್ದು ಕಾಣುವಂತಿದೆ. ಇದರಿಂದ ಹೊರಬರಲು ಅವರು ನಿರಂತರ ಪ್ರಯತ್ನ ಮಾಡುತ್ತಾರೆ.

ಲೇಖಕಿ ಒಂದುಕಡೆ ನೆಲೆನಿಂತು ಪ್ರೀತಿಯನ್ನು ಪಡೆಯದೆ ಅಥವಾ ಒಂದೇ ಕಡೆ ಸಂತೃಪ್ತ ಪ್ರೀತಿ ದೊರೆಯುವುದಿಲ್ಲ ಎಂದು ತಿಳಿದು ಹುಡುಕಲಾರಂಬಿಸಿದಂತೆ ಕಾಣುತ್ತದೆ. ಆ ಹುಡುಕಾಟದಲ್ಲಿ ಪ್ರೀತಿ ದೊರೆತರೂ, ಸಂಪೂರ್ಣ ಪ್ರೀತಿಯನ್ನು ಪಡೆಯಲಾಗಿಲ್ಲ. ಅಂದರೆ ಇಲ್ಲಿ ಪ್ರೀತಿಯ

ಹುಡುಕಾಟಕ್ಕೆ ಕೊನೆಯಿಲ್ಲವೆಂಬುದು ತಿಳಿದುಬರುತ್ತದೆ. ಆದರೆ ಪ್ರತಿಭಾ ಅವರ ಗಂಡ ನಂದಕುಮಾರ್ ಅವರು ಪ್ರೀತಿಯನ್ನು ಬೇರೆಲ್ಲಿಯೂ ಹುಡುಕಿಕೊಂಡು ಹೋಗುವುದಿಲ್ಲ. ಹೆಂಡತಿ ಮಕ್ಕಳೊಂದಿಗೆ ಸಂತೃಪ್ತ ಪ್ರೀತಿಯನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿ ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ ವೈಯುಕ್ತಿಕ ಭಿನ್ನತೆ ಭಾವನೆಗಳ ಮೇಲೆ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ವೈಯುಕ್ತಿಕ ಭಿನ್ನತೆಯಿಂದ ಪ್ರತಿಯೊಬ್ಬ ವ್ಯಕ್ತಿಯ ಭಾವನೆಗಳು ಭಿನ್ನವಾದ ರೂಪ ಪಡೆಯುತ್ತವೆ. ಪ್ರತಿಭಾ ಅವರು ಬಯಸಿದ ಪ್ರೀತಿಯ ಸ್ವರೂಪವು ಅವರ ಪ್ರೀತಿ ಹುಡುಕಾಟವನ್ನು ಹೆಚ್ಚು ಮಾಡಿದೆ. ಮನುಷ್ಯ ಮಾಗಿದ ಹಾಗೆಲ್ಲಾ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಗುಣ ಬೆಳೆಸಿಕೊಳ್ಳುತ್ತಾನೆ. ವಯಸ್ಸು ಮೀರಿದಂತೆ ಸ್ವಭಾವದಲ್ಲಿ ಪಕ್ವತೆ ಪಡೆಯುವ ಸಾಮರ್ಥ್ಯ ಹೊಂದುತ್ತಾನೆ. ಇದನ್ನು ಪ್ರತಿಭಾ ಅವರ ಜೀವನಕ್ರಮದಲ್ಲಿ ಗುರುತಿಸಬಹುದು. ಅವರು ಪ್ರೀತಿಯ ಹುಡುಕಾಟದಲ್ಲಿಯೂ ಮಾಗುತ್ತಾ ಹೋಗಿದ್ದಾರೆ. ಹಾಗೆ ಮಾಗಿದಂತೆಲ್ಲಾ ಅವರ ಪ್ರೀತಿಯ ಹುಡುಕಾಟದ ಸ್ವರೂಪವೂ ಬದಲಾಗುತ್ತಾ ಸಾಗುತ್ತದೆ.

೩.೩. ಬರಹಗಾರ್ತಿ ಮತ್ತು ಮಕ್ಕಳ ಜೊತೆಗಿನ ಸಂಬಂಧ

ಬಾಲ್ಯದಲ್ಲಿ ಸಿಕ್ಕಂತಹ ಸ್ವೇಚ್ಛೆಯನ್ನು ತಾರುಣ್ಯದಲ್ಲಿ ನೆನಪಿಸಿಕೊಳ್ಳುವುದು ಸಾಮಾನ್ಯ ಸಂಗತಿ. ಹಾಗೆಯೇ ಆ ಸಂತೋಷವನ್ನು ಮಕ್ಕಳಲ್ಲಿ ಕಾಣುವುದೂ ಕೂಡ ಅದರ ಒಂದು ಭಾಗವೇ ಆಗಿರುತ್ತದೆ. ಈ ಆತ್ಮಕಥನದಲ್ಲಿ ಪ್ರತಿಭಾ ಅವರು ಬಾಲ್ಯದಲ್ಲಿ ಕಂಡ ಕನಸನ್ನು ಅವರ ಮಕ್ಕಳ ಮೂಲಕ ನನಸಾಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ರೇಷ್ಮೆ ಲಂಗವನ್ನು ಜೀವನದಲ್ಲಿ ಒಮ್ಮೆಯಾದರೂ ಹಾಕಿಕೊಳ್ಳಬೇಕೆಂಬ ಕನಸು ಈಡೇರದೆ ಇದ್ದಾಗ, ಮಗಳಿಗೆ ವರ್ಷಕ್ಕೆ ಒಂದು ರೇಷ್ಮೆ ಲಂಗವನ್ನು ಹೊಲಿಸುತ್ತಾರೆ. ಹಾಗೆಯೇ ತಾನು ಅತೀ ಸುಂದರಿಯಾಗಿಲ್ಲ ಎಂಬ ಕೊರಗನ್ನು ಮಗಳಿಗೆ ಅಲಂಕಾರ ಮಾಡಿ ನೋಡುವುದರ ಮೂಲಕ ನೀಗಿಸಿಕೊಳ್ಳುತ್ತಾರೆ. ಇವು ಬಾಲ್ಯದಲ್ಲಿ ಕಂಡ ಕನಸನ್ನು ಮಕ್ಕಳ ಮೂಲಕ ಪಡೆದುಕೊಳ್ಳುವ ಪರ್ಯಾಯಗಳಾಗಿವೆ. ಇಂತಹ ಪರ್ಯಾಯಗಳೇ ಇರುವ ನೋವನ್ನು ಮರೆಸುವ ಮತ್ತು ಸಂತೋಷವನ್ನು ಕಾಣುವ ಮಾರ್ಗವಾಗಿರುತ್ತವೆ.

ತಾಯಿಯಾದ ದಿವಸಗಳಲ್ಲಿ ಪ್ರತಿಯೊಂದು ಕ್ಷಣವನ್ನು ಅನುಭವಿಸುವುದರ ಮೂಲಕ ಎಲ್ಲಾ ಕಷ್ಟಗಳನ್ನು ಮರೆಯುವ ಮತ್ತು ಆ ಮೂಲಕ ಗಂಡನ ಕಿರಿಕಿರಿಗಳನ್ನು ಸಹಿಸಿಕೊಳ್ಳುವುದು ಸಹನೆಯ ಪ್ರತಿಬಿಂಬವಾಗಿದೆ. ಇಲ್ಲಿ ತನಗೆ ಎಷ್ಟೇ ಕಷ್ಟ ಬಂದರೂ ಮಕ್ಕಳಿಗೋಸ್ಕರ ಅದೆಲ್ಲವನ್ನು ಪಕ್ಕಕ್ಕೆ ಸರಿಸುವ ಮತ್ತು ಮರೆಯಲು ಪ್ರಯತ್ನಿಸುವ ಗುಣ ತಾಯಂದಿರಿಗೆ ಬಂದುಬಿಡುವುದು ಸಾಮಾನ್ಯ ಲಕ್ಷಣದ ಸಂಕೇತವಾಗಿದೆ. ಹೊಸ ತಾಯಿಗೆ ಮಗುವೇ ಪ್ರಪಂಚ. ಮಗುವನ್ನು ಬಿಟ್ಟು ಉಳಿದುದೆಲ್ಲವೂ ಗೌಣ. ತಾಯಿ ತನ್ನ ಮಗುವಿನ ಲಾಲನೆ ಪಾಲನೆಯಲ್ಲೇ ಕಷ್ಟ ಮರೆತು ಸಂತೋಷ ಕಾಣುತ್ತಾಳೆ. ಮಕ್ಕಳನ್ನು ಪಡೆಯುವುದು ಒಂದು ಸಾಧನೆಯಿದ್ದಂತೆ ಎಂದು ಎಲ್ಲಾ

ತಾಯಂದಿರೂ ಭಾವಿಸುತ್ತಾರೆ. ಹಾಗೆಯೇ ಅವರನ್ನು ಸಾಕಿ ಬೆಳೆಸುವುದೂ ಸಾಗರವನ್ನು ಈಜಿದಷ್ಟೇ ಕಷ್ಟಕರವಾದುದು. ಮಕ್ಕಳ ಲಾಲನೆ ಪಾಲನೆ ಎಷ್ಟು ಮಾಡಿದರೂ ಮುಗಿಯದ ಕೆಲಸವಾಗಿದೆ. ಎಂದು ಸ್ವತಃ ಪ್ರತಿಭಾ ಅವರು ಭಾವಿಸುತ್ತಾರೆ.

ಪ್ರತಿಭಾ ಅವರು ತಾಯಿಯಾಗಿ ಹಾಲುಣಿಸಿ, ಲಾಲಿ ಹಾಡಿ, ಕಥೆ ಹೇಳಿ, ಊಟ ತಿಂಡಿ, ಮಾತು, ಕನಸುಗಳ ಲೋಕದಲ್ಲಿ ಮುಳುಗುವ ಜೊತೆ ಜೊತೆಗೆ ಗಂಡನೊಂದಿಗೆ ಲೋಕರೂಢಿಯ ವ್ಯವಹಾರದಲ್ಲಿ ಸ್ಪಂಧಿಸುವುದು, ಮತ್ತು ಅವರದೇ ಲೋಕದಲ್ಲಿ ಕಿನ್ನರಿಯಂತೆ, ದೇವತೆಯಂತೆ ಕಂಗೊಳಿಸುವ ಈ ಪಾತ್ರಗಳು ಒಂದಕ್ಕೊಂದು ಸಂಬಂಧವಿಲ್ಲದೇ ಇರುವುದನ್ನು ಲೇಖಕಿ ಕುತೂಹಲ ಮತ್ತು ಸಹಜವೆಂಬಂತೆ ನೋಡುತ್ತಾಳೆ. ಅಲ್ಲದೇ ಆ ಎಲ್ಲಾ ಸವಾಲುಗಳನ್ನು ಎದುರಿಸಿ ನಿಲ್ಲುತ್ತಾರೆ. 'ಮಕ್ಕಳಿರಲವ್ವ ಮನೆತುಂಬ' ಎಂಬ ಗಾದೆಮಾತಿನಂತೆ ಮಕ್ಕಳು ಮನೆಯ ಭಾಗ್ಯವಾಗುತ್ತಾರೆ. ಆ ಮಕ್ಕಳ ಪೋಷಣೆಯಲ್ಲಿ ತಾಯಿಯಾದವಳು ಅವಳನ್ನೆ ಮರೆಯುತ್ತಾಳೆ. ಪ್ರತಿಭಾ ಮಕ್ಕಳ ಮೇಲೆ ಅತಿಯಾದ ಪ್ರೀತಿ ಹೊಂದಿರುವುದನ್ನು ಕಾಣುತ್ತೇವೆ.

ಪ್ರತಿಭಾ ಅವರಿಗೆ ಸುಟ್ಟಗಾಯಗಳಾದ ಸಂದರ್ಭದಲ್ಲಿ "ನನಗೆ ಸಾಯುವುದು, ಈಗಲೇ ಸಾಯೋದು ಇಷ್ಟ ಇಲ್ಲ. ನನ್ನ ಮಕ್ಕಳು ಇನ್ನೂ ಚಿಕ್ಕವರು. ಅವರಿಗೆ ತಾಯಿ ಬೇಕು". ಎಂದು ತಮಗೆ ತಾವೇ ಹೇಳಿಕೊಳ್ಳುತ್ತಾರೆ. ಇಲ್ಲಿ ತಾಯಿಯ ಮಹತ್ವ ಮತ್ತು ತಾಯಿ ಮಕ್ಕಳ ಮೇಲೆ ಇಟ್ಟಿರುವ ಪ್ರೀತಿಯು ಸ್ಪಷ್ಟವಾಗಿ ತಿಳಿಯುತ್ತದೆ. ಮಕ್ಕಳು ಏನಾದರೂ ತಪ್ಪು ಮಾಡಿದಾಗ ಅದನ್ನು ಸ್ವೀಕರಿಸುವ ಮತ್ತು ಅವರನ್ನು ಪೋಷಣೆ ಮಾಡುವ ಹೊಣೆಯನ್ನು ತಾಯಿ ತನ್ನದು ಎಂದು ಭಾವಿಸುತ್ತಾಳೆ. ಇಲ್ಲಿ ತಂದೆಗಿಂತ ತಾಯಿಯ ಪಾತ್ರ ಮಹತ್ವದಾಗಿದೆ. ಈ ಪಾತ್ರವನ್ನು ಪ್ರತಿಭಾ ಅವರು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅವರು ಜವಾಬ್ದಾರಿಂದ ಯಾವತ್ತೂ ನುಣುಚಿಕೊಂಡವರಲ್ಲ. ಆದರೆ ತನ್ನ ಪ್ರೀತಿಯನ್ನು ಹಲವು ಬಗೆಗಳಲ್ಲಿ ಹುಡುಕಿದವರು. ಅದಕ್ಕಾಗಿ ಅವರು ಸಮಾಜದ ಕಣ್ಣಿನಲ್ಲಿ ಕೆಟ್ಟವರಾಗಿಯೇ ಕಂಡವರು. ಆದರೆ ಅವರು ತಮ್ಮ ಆತ್ಮಸ್ಥೈರ್ಯವನ್ನು ಯಾವತ್ತೂ ಕಳೆದುಕೊಂಡವರಲ್ಲ. ಬದುಕುವ ಛಲವನ್ನು ಯಾವತ್ತೂ ಸಡಿಲಗೊಳಿಸಿಕೊಂಡವರಲ್ಲ.

ಮನೆಯಿಂದ ಹೊರಬಂದ ತರುವಾಯ ಮಕ್ಕಳ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು ಮತ್ತು ಅವರೊಂದಿಗೆ ಸ್ನೇಹಿತೆಯಾಗಿ, ತಾಯಿಯಾಗಿ, ತಂದೆಯಾಗಿ ಬೇಸರ ಮಾಡಿಕೊಳ್ಳದೆ, ಹೊಸ ಬದುಕನ್ನು ಕಟ್ಟಿಕೊಂಡ ರೀತಿಯು ಅವರ ಛಲವನ್ನು ತೋರಿಸಿಕೊಡುತ್ತದೆ. ಮಕ್ಕಳಿಗೆ ತಾಯಿ ಪಾತ್ರ ಎಷ್ಟು ಮುಖ್ಯವೋ ತಂದೆಯ ಪಾತ್ರವೂ ಅಷ್ಟೇ ಮುಖ್ಯವಾಗಿರುತ್ತದೆ. ತಂದೆಯಿಂದ ದೂರಾದ ಮಕ್ಕಳಿಗೆ ಯಾವ ಕೊರಗೂ ಬರದಂತೆ ಸಲಹುವಲ್ಲಿ ಕಷ್ಟಗಳು ಅನೇಕ. ಕಷ್ಟಗಳನ್ನು ದಾಟುವುದರ ಜೊತೆಗೆ ಮಕ್ಕಳಿಗೆ ವ್ಯವಹಾರ ಜೀವನದ ಪಾಠ ಕಲಿಸುತ್ತಾ ಮಕ್ಕಳಿಗಾಗಿ ಹಗಲು-ರಾತ್ರಿಯೆನ್ನದೆ ದುಡಿಯುವುದು ಅವರ ಛಲದ ಬದುಕಿನ ಪ್ರತೀಕದಂತಿದೆ. ಪ್ರತಿಭಾ ಅವರು

ಆಧುನಿಕ ಮಹಿಳೆಯಾಗಿ ಅದರಲ್ಲೂ ಕನ್ನಡದ ಪ್ರಮುಖ ಚಿಂತಕಿಯಾಗಿ, ಮಹಿಳಾ ದೃಷ್ಟಿಕೋನ ಉಳ್ಳವರೂ ಆದ ಕಾರಣ ಅವರಿಗೆ ಹೆಣ್ಣಿನ ಮೇಲೆ ನಡೆಯುವ ಶೋಷಣೆಯ ವಿವಿಧ ಮುಖಗಳ ಬಗ್ಗೆ ಖಚಿತವಾದ ತಿಳುವಳಿಕೆ ಇರುವುದರಿಂದಲೂ ಅವರು ಗಂಡನಿಂದ ಹೊರಬಂದಾಗ ಛಲದಿಂದ ಬಾಳಿ ತೋರಿಸಬೇಕು ಎಂಬಂತೆ ಬದುಕುತ್ತಾರೆ. ಇದು ತನ್ನೊಳಗಿನ ಬಂಡಾಯವನ್ನು ಹೊರಹಾಕಿದ ರೀತಿಯಂತಿದೆ. ಯಾವೊಬ್ಬ ಹೆಣ್ಣು ತಾನು ಅಬಲೆ, ಗಂಡಿನ ಆಶ್ರಯವಿಲ್ಲದೆ ಬದುಕಲು ಸಾಧ್ಯವಿಲ್ಲ ಎಂದು ಭಾವಿಸುತ್ತಾಳೋ ಆಗ ಗಂಡಿನ ಕ್ರೌರ್ಯ ಹೆಚ್ಚುತ್ತದೆ. ಒಂದು ವೇಳೆ ಹೆಣ್ಣು ತಾನು ಗಂಡಿನ ಆಶ್ರಯವಿಲ್ಲದೆಯೂ ಬದುಕಬಲ್ಲೆ ಎಂಬ ನಿಲುವನ್ನು ತೋರುತ್ತಾಳೋ ಆಗ ಪುರುಷನೂ ಕೂಡ ಜಾಗೃತನಾಗುತ್ತಾನೆ. ಇದು ಮಹಿಳೆಯರು ಪುರುಷ ಪ್ರಾಬಲ್ಯದ ವಿರುದ್ಧ ತೋರಬೇಕಿರುವ ಬಂಡಾಯ ಮತ್ತು ಪ್ರತಿರೋಧದ ಒಂದು ಮಾರ್ಗ ಎಂದು ಹೇಳಬಹುದು.

ಮಕ್ಕಳಿಗೆ ಯಾವ ಕೊರತೆಯೂ ಆಗದಂತೆ ನಿಭಾಯಿಸಿರುವ ಪ್ರತಿಭಾರ ಛಲ ಮಾದರಿಯಂತಿದೆ. ಗಂಡ ಮಕ್ಕಳೊಂದಿಗೆ ಜಗಳವಾಡುತ್ತಿರಲಿಲ್ಲ. ಅವನ ಬಳಿಯೇ ಬಿಟ್ಟು ಒಂಟಿಯಾಗಿ ಹೊರ ಬರಬಹುದಾಗಿತ್ತು. ಆದರೆ ಪ್ರತಿಭಾ ಮಕ್ಕಳಿಲ್ಲದಿದ್ದರೆ ಜೀವನವೇ ಒಂಟಿಯಾಗುತ್ತದೆ ಎಂದು ಮಕ್ಕಳಿಗೋಸ್ಕರ, ಅವರ ಭವಿಷ್ಯಕ್ಕೋಸ್ಕರ ಶ್ರಮ ವಹಿಸಿರುವುದು ತಾಯಿಯ ಕರ್ತವ್ಯಕ್ಕೆ ಇಟ್ಟ ಕಿರೀಟದಂತಿದೆ. ಕುಂಟುಂಬದಲ್ಲಿ ನಿಜವಾಗಿಯೂ ಹೆಣ್ಣಿನ ಕರ್ತವ್ಯ ಅತ್ಯಂತ ಪ್ರಮುಖ ವಾದುದಾಗಿರುತ್ತದೆ. ನಮ್ಮ ಸಮಾಜದ ಬಹುತೇಕ ಕುಟುಂಬಗಳು ನಡೆಯುವುದು ಹೆಣ್ಣಿನ ಹೆಗಲ ಮೇಲಿನ ಜವಾಬ್ದಾರಿಯಿಂದ ಎಂಬುದು ಕಟುವಾದ ಸತ್ಯವಾಗಿದೆ. ಪುರುಷನಿಗೂ ಈ ಸತ್ಯ ಗೊತ್ತಿಲ್ಲವೆಂದಲ್ಲ. ಗೊತ್ತಿದ್ದರೂ ತಿಳಿಯದಂತೆ ನಟಿಸುವುದು ಪುರುಷ ಮನಸ್ಥಿತಿಯ ವಿಕೃತ ಮನಸ್ಥಿಗೆ ಸಾಕ್ಷಿ. ಮನೆಯಲ್ಲಿ ಹೆಣ್ಣೊಬ್ಬಳಿಲ್ಲದಿದ್ದರೆ ಆಗುವ ಎಲ್ಲಾ ಅನಾಹುತಗಳು ತಿಳಿದಿದ್ದರೂ ಪುರುಷನ ಅಹಂಕಾರ ಕಳೆಯುವುದಿಲ್ಲ.

ಪ್ರತಿಭಾ ಆಸ್ಪತ್ರೆಯಲ್ಲಿದ್ದಾಗ ಮಕ್ಕಳು ವಾರಕ್ಕೊಮ್ಮೆ ಬಂದು ತಾಯಿಯೊಂದಿಗೆ ಕಳೆದ ಕ್ಷಣಗಳು ಮತ್ತು ಅವರ ಆದರದಿಂದ ಅವರನ್ನು ನೋಡು ನೋಡುತ್ತಾ ನಾನು ಕಲಿತೆ ಎಂದಿದ್ದಾರೆ. ಇಲ್ಲಿ ಮಕ್ಕಳಿಗೆ ತಾಯಿಯ ಸ್ಥಿತಿ ಅರ್ಥವಾಗಿ ಅವರ ಬಗ್ಗೆ ನೋವು, ದುಃಖ, ಮರುಕ ಇತ್ಯಾದಿ ಇದ್ದರೂ ತೋರಿಸಿಕೊಳ್ಳದೆ, ತಾಯಿಯ ಆನಂದಕ್ಕೆ ಕಾರಣವಾಗುವಂತೆ ಹರ್ಷಗೊಳಿಸುತ್ತಿದ್ದುದ್ದು ಮಕ್ಕಳ ಕರ್ತವ್ಯ ಎಂಬಂತೆ ಭಾಸವಾಗುತ್ತದೆ. ಮಕ್ಕಳ ಮೇಲಿನ ಮಮತೆ ತಾನು ಮಕ್ಕಳ ಮುಂದೆ ನಡೆದುಕೊಳ್ಳಬೇಕಾದ ರೀತಿಯ ಬಗ್ಗೆ ಪ್ರತಿಭಾ ಅವರಿಗೆ ಖಚಿತ ನಿಲುವುಗಳಿವೆ. ತನ್ನ ಮಗಳು ತನ್ನ ಮೋಟಾರ್ ಸೈಕಲ್ ನೋಡಿ 'ನಿನ್ನ ಹುಡುಗ ಮುಂದೊಂದು ದಿನ ನನಗೇ ಬಿಡಮ್ಮ' ಎಂದ ಮಾತನ್ನು ಪ್ರತಿಭಾ ಅವರು ತುಂಬಾ ಆಭಿಮಾನದಿಂದ ಹೇಳಿಕೊಳ್ಳುತ್ತಾರೆ. ಅದರಲ್ಲಿ ಹಲವು ಧ್ವನಿಗಳು ಇರುವುದನ್ನು ಕಾಣಬುಹುದು.

೩.೪. ಬರಹಗಾರ್ತಿ ಮತ್ತು ಸ್ನೇಹಿತರೊಂದಿಗಿನ ಸಂಬಂಧ

ಈ ಆತ್ಮಕಥೆಯಲ್ಲಿ ತುಂಬಾ ತೊಡಕಿನದೂ ಮತ್ತು ಓದುಗರಿಗೆ ಹೆಚ್ಚು ಗಮನ ಸೆಳೆಯುವುದೂ ಇದೇ ಆಗಿದೆ. ಲೇಖಕಿಯ ಸ್ನೇಹಿತರೊಂದಿಗಿನ ಸಂಬಂಧವನ್ನೇ ಮುಖ್ಯ ಪ್ರಶ್ನೆಯಾಗಿ ಮಾಡಿಕೊಂಡು ಹೆಚ್ಚು ಚರ್ಚೆ ಮಾಡಲಾಗಿದೆ. ಅದೇ ಒಬ್ಬ ಪುರುಷನ ಸಂಬಂಧಗಳ ವಿಷಯದಲ್ಲಾದರೆ ಇಂತಹ ಪ್ರಶ್ನೆಗಳು ಅಷ್ಟು ಮುಖ್ಯವಾಗುವುದಿಲ್ಲ. ಆದರೆ ಹೆಣ್ಣಿನ ವಿಷಯದಲ್ಲಿ ಮಾತ್ರ ಇದೊಂದು ಮನೋರಂಜನೆಯ ವಿಷಯ ಎಂಬಂತೆ ನೋಡಲಾಗುತ್ತದೆ. ಅದರಲ್ಲೂ ಹೆಣ್ಣೊಬ್ಬಳ ಪುರುಷ ಸ್ನೇಹಿತರೊಂದಿಗಿನ ಸಂಬಂಧವನ್ನು ಸಮಾಜ 'ಅನೈತಿಕ' ಪರಿಧಿಯೊಳಗೇ ಗ್ರಹಿಸುತ್ತದೆ. ಇದು ಸಾಂಪ್ರದಾಯಿಕ ಸಮಾಜದ ದೃಷ್ಟಿಕೋನವಾಗಿದೆ. ಇದು ಸಮಾಜವೊಂದು ತಾನೇ ನಿರ್ಮಿಸಿಕೊಂಡಿರುವ ಸಾಂಪ್ರದಾಯಿಕ ಚೌಕಟ್ಟನ್ನು ಮೀರಲಾರದ ಅದರೊಳಗೇ ತೊಳಲಾಡುವುದು ಪ್ರತೀಕ ಎನ್ನಬಹುದು. ಇದನ್ನು ಸಮಾಜವು ಹೆಣ್ಣಿನ ಮೇಲೆ ಹೊರಿಸುತ್ತದೆಯೇ ಹೊರತು ತನ್ನನ್ನು ರೋಗಗ್ರಸ್ತ ಸಮಾಜ ಎಂದು ಎಲ್ಲಿಯೂ ಭಾವಿಸುವುದಿಲ್ಲ. ಹೆಣ್ಣೊಬ್ಬಳು ತನ್ನ ಗೆಳೆಯರೊಡನೆ ಸಲುಗೆಯಿಂದ ವರ್ತಿಸುವುದನ್ನು 'ಅನೈತಿಕ'ವಾಗಿ ನೋಡುವುದು ಆ ಸಮಾಜದ ದೃಷ್ಟಕೋನದ ಸಮಸ್ಯೆ. ಇದು ಸಾಹಿತ್ಯದಲ್ಲಿಯೂ ಪ್ರತಿಭಾ ನಂದಕುಮಾರ್ ಅವರ ಆತ್ಮಕಥೆ ಹೊರಬಂದ ಮೇಲೆ ನಡೆಯಿತು. ಆತ್ಮಕಥೆಯನ್ನು ಕೈಯಲ್ಲಿ ಹಿಡಿದು ಅದರಲ್ಲಿನ 'ಇವನು', 'ಅವನು' ಮತ್ತು 'ಅವರು' ಎಂದು ಇರುವ ಪುರುಷರು ಯಾರಿರಬಹುದು ಎಂಬ ಪತ್ತೇದಾರಿ ಕೆಲಸವನ್ನು ಕನ್ನಡ ಅಕಾಡೆಮಿಕ್ ಲೋಕ ಮಾಡಿದ್ದು ಅಚ್ಚರಿಪಡುವಂತಹುದು.

ಪ್ರತಿಭಾ ಅವರ ಬಾಲ್ಯದ ಗೆಳೆತನಕ್ಕೂ ಮತ್ತು ನಂತರದ ಗೆಳೆತನ್ನೂ ಸಾಕಷ್ಟು ವ್ಯತ್ಯಾಸವಿದೆ. ಬಾಲ್ಯದಲ್ಲಿ ಅವರು ಇತರೆ ಗೆಳತಿಯರೊಡನೆ ಬೆರೆಯುವಾಗ ಅವರು ಇತರರಿಗಿಂದ ತಾನು ಸಂದರವಾಗಿಲ್ಲ, ಕುರೂಪಿಯಾಗಿದ್ದೇನೆ ಎಂದು ಹೇಳಿಕೊಳ್ಳುತ್ತಾಳೆ. ಆ ಕಾರಣಕ್ಕಾಗಿ ತಾವು ಅನುಭವಿಸಿದ ಅವಮಾನಗಳನ್ನು ಹೆಳಿಕೊಳ್ಳುತ್ತಾರೆ. ಶಾಲೆಯಲ್ಲಿ ಕಲಿಯುವಾಗ ತಾನು ಪ್ರತಿಭಾವಂತೆಯಾಗಿದ್ದರೂ ಸುಂದರವಾಗಿಲ್ಲ ಎಂಬ ಕಾರಣದಿಂದ ಯಾವುದೇ ಅವಕಾಶ ಅವರಿಗೆ ಸಿಕ್ಕುವುದಿಲ್ಲ. ಇದರಿಂದ ಪ್ರತಿಭಾ ಅವರು ಸಾಕಷ್ಟು ಕೀಳರಿಮೆಯನ್ನು ಅನುಭವಿಸುತ್ತಾರೆ. ಇದರಿಂದ ಎಲ್ಲದಕ್ಕೂ ಸೌಂದರ್ಯವೇ ಅತಿ ಮುಖ್ಯ ಎಂದು ಅವರು ಭಾವಿಸುತ್ತಾರೆ. ಇದು ಸುಳ್ಳು ಎಂದು ಗೊತ್ತಾಗಲು ಅವರಿಗೆ ಸಾಕಷ್ಟು ಸಮಯವೇ ಬೇಕಾಗುತ್ತದೆ.

ಪ್ರತಿಭಾ ಅವರು ತಮ್ಮ ಜೀವದ ಗೆಳತಿ ಅತಿ ಸುಂದರಿ, ಅತಿ ಬುದ್ದಿವಂತೆ, ಅತಿ ಧಾರಾಳಿ, ಸ್ನೇಹಮಯಿ ಮತ್ತು ಜಗಳಗಂಟಿಯಾದ ಫರ್ಹಾರೊಂದಿಗಿನ ಸ್ನೇಹ ಪ್ರತಿಭಾರಿಗೆ ಪ್ರಿಯವಾಗಿದ್ದಂತೆ ತೋರುತ್ತದೆ. ಈ ಗೆಳೆತನದಿಂದ ಪ್ರತಿಭಾರಿಗೆ ಪ್ರೀತಿಯ ಬಗ್ಗೆ ಜ್ಞಾನ ಹುಟ್ಟಿದಂತೆ ಕಾಣುತ್ತದೆ. ಇದನ್ನು ಅವರೇ ಹೇಳಿಕೊಳ್ಳುತ್ತಾರೆ. ಗೆಳತಿಯ ಪ್ರೀತಿಯನ್ನು ಕಂಡು ನನಗೂ ಇಂತಹ ಪ್ರೀತಿ ಇಲ್ಲವಲ್ಲ ಎಂದು ಅವರು ಮರುಗುತ್ತಾರೆ. ಫರ್ಹಾಳ ಬದುಕಿಗೆ ದಾರಿದೀಪವಾಗಿ ಅವಳ ಮದುವೆ

ಮಾಡಿಸಿದ ಪ್ರತಿಭಾರಿಗೆ ಅಮ್ಮಿಜಾನ್‌ನ ಈ ಮಾತು ನೆನಪಾಗುತ್ತದೆ. "ನಿನಗೆ ಬದುಕಿನಲ್ಲಿ ಎಂದಿಗೂ ಪ್ರೀತಿಗೆ ಬರ ಬರದಿರಲಿ, ಬರುವುದೂ ಇಲ್ಲ". ಪ್ರೀತಿಯ ವ್ಯಾಖ್ಯಾನವನ್ನು ತಿಳಿಯದಿದ್ದ ಪ್ರತಿಭಾ ಅವರು ಗೆಳೆಯನಿಗೆ 'ಪ್ರೀತಿಯ ಬೆಲೆ ನಿನಗೆ ಗೊತ್ತಾಗಿಲ್ಲ. ಸಿಕ್ಕ ಪ್ರೀತಿಯನ್ನು ಕಳೆದುಕೊಂಡಾಗ ಮಾತ್ರ ಅದರ ಬೆಲೆ ಗೊತ್ತಾಗೋದು' ಎಂದು ಹೇಳುತ್ತಾರೆ. ಆಗ ಗೆಳೆಯನಿಂದ ಬಂದ ಉತ್ತರ ಪ್ರತಿಭಾ ಅವರನ್ನು ಗೇಲಿಮಾಡಿದಂತಿದೆ. 'ನೀನು ಜಗನ್ಮಾತೆ' ಎಲ್ಲರನ್ನು ಪ್ರೀತಿಸುತ್ತೀಯ, ಮರಳಿ ಎಷ್ಟು ಜನ ನಿನಗೆ ಅದೇ ಪ್ರೀತಿಯನ್ನು ಕೊಟ್ಟಿದ್ದಾರೆ?'. ಪ್ರೀತಿ ಸೌದ ಅಲ್ಲ, ವ್ಯಾಪಾರ ಅಲ್ಲ, ಹುಚ್ಚಿ ನೀನು' ಎನ್ನುತ್ತಾನೆ. ಈ ಮಾತು ಪ್ರತಿಭಾ ಅವರ ಜೀವನದಲ್ಲಿ ನಿಜವಾಗಿ ಕಾಣುತ್ತದೆ. ಅವರು ಪ್ರೀತಿಯನ್ನು ಹರಸಿ ಸಾಕಷ್ಟು ದೂರ ಪಯಣಿಸಿದರೂ ಅವರ ಜೊತೆ ನಡೆದದ್ದು ಮಾತ್ರ 'ಇಲ್ಲ' ಎನ್ನುವಷ್ಟು ಕಡಿಮೆ. ನಮ್ಮ ಸಮಾಜವೇ ಹಾಗೆ. ಪ್ರೀತಿಯನ್ನು ಪಡೆಯುತ್ತದೆ ಆದರೆ ಅದೇ ಸ್ವರೂಪದಲ್ಲಿ ಅದು ಮರಳಿ ಕೊಡುವುದಿಲ್ಲ.

ಇಲ್ಲಿ ಪ್ರತಿಭಾರಿಗೆ ಪ್ರೀತಿಯ ವ್ಯಾಖ್ಯಾನ ಸರಿಯಾಗಿ ಗೊತ್ತಿಲ್ಲ ಎಂದು ಅವರೇ ಹೇಳಿಕೊಂಡಿದ್ದಾರೆ. ಈ ಘಟನೆಯಿಂದಾಗಿ ಅವರು ಪ್ರೀತಿಯನ್ನು ಪಡೆಯಲು ಹಂಬಲಿಸಿದಂತೆ ತೋರುತ್ತದೆ. ಸ್ನೇಹಿತರ ಪ್ರೀತಿಯನ್ನು ಕಂಡು 'ನಾನು ಯಾರನ್ನಾದರೂ ಪ್ರೀತಿಸಬೇಕು ಎಂಬ ಹಂಬಲ ಹುಟ್ಟಿದೆ' ಎಂದು ಹೇಳುವ ಮಾತಿನಲ್ಲಿ ಪ್ರೀತಿಯನ್ನು ಪಡೆಯುವ ಅವರ ತವಕ ವ್ಯಕ್ತವಾಗುತ್ತದೆ. ಆ ಸಮಯದಲ್ಲಿ ಅವರ ಪ್ರೀತಿಯ ವ್ಯಾಖ್ಯಾನವೇ ಬೇರೆ ಸ್ವರೂಪದಲ್ಲಿರುತ್ತದೆ. ಪ್ರೀತಿ ಮಾಡಲು ಅತ್ಯಂತ ಸುಂದರವಾಗಿರಬೇಕು ಎಂಬುದೇ ಅವರ ತಿಳುವಳಿಕೆಯಾಗಿರುತ್ತದೆ. ಆದರೆ ಇದು ಕ್ರಮೇಣ ಬದಲಾಗುತ್ತಾ ಸಾಗುತ್ತದೆ.

ಪ್ರತಿಭಾ ಅವರ ಗೆಳೆತನದ ಸ್ವರೂಪವನ್ನು ಗಮನಿಸಿದಾಗ, ಅವರು ಹೆಚ್ಚಾಗಿ ಗೆಳೆತನಕ್ಕಿಂತ ಪ್ರೀತಿಯನ್ನು ನಿರೀಕ್ಷಿಸಿದಂತೆ ಭಾಸವಾಗುತ್ತದೆ. ಹಾಗೆ ನೋಡಿದರೆ ಅವರ ದೃಷ್ಟಿಯಲ್ಲಿ ಪ್ರೀತಿ ಮತ್ತು ಗೆಳೆತನದ ನಡುವೆ ಅಷ್ಟೊಂದು ವ್ಯತ್ಯಾಸವಿರುವಂತೆ ಕಾಣುವುದಿಲ್ಲ. ಅದು ನಿಷ್ಕಲ್ಮಶವಾದುದು. ಅದರಲ್ಲಿ ಕಪಟ, ಮೋಸ, ವಂಚನೆ ಏನೊಂದೂ ಕಾಣಿಸುವುದಿಲ್ಲ. ಇದರ ಭಾಗವಾಗಿಯೇ ಅವರು ಗೆಳೆಯರ ಜೊತೆಗಿನ ಒಡನಾಟವನ್ನು ಹೆಚ್ಚು ಚಿತ್ರಿಸಿದ್ದಾರೆ. ಇದು ಗೆಳೆತನವನ್ನು ಒಳಗೊಂಡ ಪ್ರೀತಿಯ ಹುಡುಕಾಟವೇ ಹೊರತು ಅದನ್ನು 'ನೈತಿಕ' ಮತ್ತು 'ಅನೈತಿಕ' ಚೌಕಟ್ಟಿನಲ್ಲಿಟ್ಟು ನೋಡಲು ಬರುವುದಿಲ್ಲ. ಇಲ್ಲಿ ಗೆಳೆತನದ ಜೊತೆಗೆ ಪ್ರೀತಿಯ ಬಯಕೆಯಿದೆ. ಆದರೆ ಆ ಪ್ರೀತಿ ಎಂಬುದು ಅವರು ಬಯಸಿದ ಸ್ವರೂಪದಲ್ಲಿ ಕೊನೆಯ ವರೆಗೂ ದೊರೆಯುವುದೇ ಇಲ್ಲ. ಅವರ ಪ್ರೀತಿಯ ಹುಡುಕಾಟದ ಸ್ವರೂಪವು ಅವರಿಗೆ ಅರ್ಥವೇ ಆಗುವುದಿಲ್ಲ. ಅಂದರೆ ಪ್ರತಿಭಾ ಅವರು ಬಯಸುವ ಪ್ರೀತಿಯ ಸ್ವರೂಪವು ಸಾಂಪ್ರದಾಯಿಕ ಚೌಕಟ್ಟನ್ನು ಮೀರಿದ್ದು ಎಂಬುದು ಇಲ್ಲಿನ ಅರ್ಥವಾಗಿದೆ.

ಹುಡುಗರ ಜೊತೆ ಹುಡಗನಂತೆಯೇ ಇದ್ದ ಪ್ರತಿಭಾ ಅವರ ಹತ್ತಿರ ಎಲ್ಲರೂ ಅವರವರ ಪ್ರಣಯ ಸಮಸ್ಯೆಗಳನ್ನು ಹೇಳಿಕೊಂಡಾಗ, "ಯಾರಿಗೂ ನಾನು ಮಾತ್ರ ಪ್ರೇಯಸಿ ಅಲ್ಲ". ಎಂದು ಹೇಳುವಾಗ ಅವರಿಂದ ಅಥವಾ ಅವರಂತಹ ಪುರುಷರಿಂದ ಪ್ರೀತಿಯನ್ನು ಬಯಸಿದಂತೆ ಕಂಡರೂ ಅದರ ಸ್ವರೂಪ ಮಾತ್ರ ಸಾಂಪ್ರದಾಯಿಕ ಸಮಾಜದ ಗ್ರಹಿಕೆಯೇ ಆಗಿದೆ. ಹಾಗಾಗಿ ಪ್ರತಿಭಾ ಅವರು ಗೆಳೆಯರಿಂದ ಪ್ರೀತಿಯನ್ನು ಬಯಸಿದರೂ ಅದರ ವಿಫಲತೆಯ ಕುರುಹನ್ನು ತೋರಿಸುವಂತಿದೆ. ಅಂದರೆ ಎಲ್ಲಾ ಹೆಣ್ಣು ಮಕ್ಕಳಂತೆ ನನ್ನನ್ನೇಕೆ ನೋಡುವುದಿಲ್ಲ?, ಎಂಬ ಪ್ರಶ್ನೆಯನ್ನು ಕೇಳುವಂತಿದೆ. ಇಲ್ಲಿ ಪ್ರೀತಿಯ ತುಡಿತ ಎದ್ದು ಕಾಣುತ್ತಿದೆ. ಒರಟು ಸ್ವಭಾವದ ಗುಣಗಳನ್ನು ಹೊಂದಿರುವ ಗೆಳೆಯನನ್ನು, ಸೌಮ್ಯ ಹಿನ್ನೆಲೆ ಹೊಂದಿದ ಪ್ರತಿಭಾ ಒಳಗೊಳಗೆ ಇಷ್ಟ ಪಡುವುದು ಪ್ರೀತಿಯ ಹುಟ್ಟನ್ನು ಧ್ವನಿಸುತ್ತದೆ. 'ಆದರೆ ಇಬ್ಬರ ನಡುವೆ ಪ್ರೀತಿ, ಪ್ರಣಯ ಏನೂ ಇರಲಿಲ್ಲ, ಬರೀ ಜಗಳ' ಎಂದು ಹೇಳಿಕೊಳ್ಳುವ ಜೊತೆಗೆ ಪ್ರೀತಿಯನ್ನೂ ಬಯಸುವುದು ಅವರ ಪ್ರೀತಿಯ ಹುಡುಕಾಟದ ವಿಶಿಷ್ಟ ಸ್ವರೂಪವನ್ನು ತೋರಿಸುತ್ತದೆ.

ಓದಿನಲ್ಲಿ ಮುಂದೆ ಇದ್ದ ಪ್ರತಿಭಾರಿಗೆ ಇನ್ನೂ ಹೆಚ್ಚು ಓದುವ ಆಸೆ. ಐ.ಎ.ಎಸ್. ಮಾಡಬೇಕೆಂಬ ಕನಸಿದ್ದರೂ, ಯಾರಿಗೂ ಸಿಗದ ಹಂತಕ್ಕೆ ಹೋಗಿ ಬಿಡುತ್ತೇನೆ ಎಂಬ ಆತಂಕ ಉಂಟಾಗಲು ಕಾರಣ ಅವರ ಸರಿಸಮನಾದ ಗಂಡು ಸಿಗದೇ ಹೋಗಬಹುದು ಎನ್ನುವ ಭಯ. ಇಲ್ಲಿ ಪ್ರತಿಭಾರು ಓದಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಪ್ರೀತಿಗೆ ಕೊಟ್ಟಿರುವುದು ಸ್ಪಷ್ಟವಾಗುತ್ತದೆ. ಪ್ರತಿಯೊಂದು ಜೀವಿಗೂ ಪ್ರೀತಿ ಅತ್ಯಗತ್ಯ. ಮೂಲಭೂತ ಅವಶ್ಯಕತೆಗಳ ಜೊತೆಗೆ ಪ್ರೀತಿಯೂ ಅಗತ್ಯವಾದುದಾಗಿದೆ. ಮೊದಲೇ ತಾನು ಸುಂದರವಾಗಿಲ್ಲ, ತನ್ನನ್ನು ಯಾರೂ ಇಷ್ಟಪಡುವುದಿಲ್ಲ ಎನ್ನುವ ಕೀಳರಿಮೆಯಲ್ಲಿದ್ದ ಪ್ರತಿಭಾ ಅವರು ತಾನು ಅಷ್ಟೊಂದು ಮೇಲಕ್ಕೆ ಹೋದರೆ ಯಾರೂ ತನ್ನನ್ನು ಮದುವೆಯಾಗುವುದಿಲ್ಲ ಎಂಬ ಆತಂಕವನ್ನು ವ್ಯಕ್ತಪಡಿಸುತ್ತಾರೆ. ಅವರ ಜೀವನದಲ್ಲಿ ಈ ರೀತಿಯ ಅನೇಕ ಗೊಂದಲಗಳು ಮನೆಮಾಡಿರುವುದನ್ನು ನೋಡಬಹುದು.

'ಒಂದು ರಾತ್ರಿಯ ಪ್ರಯಾಣ' ಎಂಬ ಪ್ರತಿಭಾರ ಕಥೆಯನ್ನು ಓದಿದ ವ್ಯಕ್ತಿ ಕಥೆಯನ್ನು ಮೆಚ್ಚಿ ಅವರೊಂದಿಗೆ ಪೋನಿನಲ್ಲಿ ಮಾತಾಡಿದ ನಂತರ ಗೆಳೆತನ ಶುರುವಾದದ್ದು, ಮತ್ತು ಅವರೊಂದಿಗೆ ತುಂಬಾ ಒಳ್ಳೆಯ ಸ್ನೇಹ ಬೆಳೆದಿರುವುದನ್ನು ಕಾಣುತ್ತೇವೆ. ಎಲ್ಲಾ ವಿವರಗಳನ್ನು ಪರಸ್ಪರ ಹೇಳಿಕೊಳ್ಳುವ ಮುಖಾಂತರ ಒಳ್ಳೆಯ ಗೆಳೆತನ ಬೆಳೆದಿದೆ. ಪ್ರತಿಭಾರಿಗೆ ಗೆಳೆಯನ ಕುಡಿತ, ಕೊಳಕುತನ, ಹೆಣ್ಣಿನ ಖಯಾಲಿ, ಸುಳ್ಳು ಬುರುಕುತನ, ಕತೆಗಾರಿಕೆ, ಎಲ್ಲವೂ ಗೊತ್ತಿದ್ದರೂ ಒಳಗೊಳಗೆ ಒಪ್ಪಿತವಾಗಿ ಆ ಗುಣಗಳು ಇಷ್ಟವಾಗತೊಡಗುತ್ತವೆ. ಇದೂ ಒಂದು ರೀತಿಯ ಗೊಂದಲದ ಮತ್ತು ದ್ವಂದ್ವದ ನಿಲುವಾಗಿ ಕಾಣಿಸುತ್ತದೆ. ಇಲ್ಲಿ ಪ್ರತಿಭಾರು ಕೇವಲ ಸ್ನೇಹವನ್ನು ಬಯಸದೆ, ಪ್ರೀತಿಯನ್ನು ಬಯಸುತ್ತಾರೆ. ಆದರೆ ಅವರ ಪ್ರೀತಿ ಆ ವ್ಯಕ್ತಿಯ ಕೆಟ್ಟ ಗುಣಗಳನ್ನು ಇಷ್ಟ ಪಡುವ ರೀತಿಯಲ್ಲಿಲ್ಲ. ಹಾಗಾಗಿ ಅವರ ತುಡಿತವೇನಿದ್ದರೂ ಪ್ರೀತಿಯದು. ಆದರೆ

ಗೆಳೆಯನದು ಮಾತ್ರ ಸಂಪೂರ್ಣ 'ಅನೈತಿಕ' ಎಂದು ಕರೆಯಲಾಗುವ ರೀತಿಯದು. ಈ ಗೊಂದಲದ ನಡುವೆಯೂ ಅವರು ತಮ್ಮ ಪ್ರೀತಿಯ ಹುಡುಕಾಟವನ್ನು ಮುಂದುವರೆಸುತ್ತಾರೆ. ಗೆಳೆಯನಿಗೆ ನೋವಾದರೆ ಉಪಚಾರ ಮಾಡುವುದು, ಅಪಘಾತವಾಗಿ ಏಟಾದರೆ ತನಗೇ ಏಟಾದಂತೆ ನರಳುವುದು, ಅವನಿಗೆ ಪ್ರೀತಿ, ನೆಮ್ಮದಿ, ಸಹಾನುಭೂತಿಯ ಅಗತ್ಯವಿದೆ ಎಂದು ಸಮರ್ಥಿಸಿಕೊಳ್ಳುವುದು, ಇವೆಲ್ಲವೂ ಅವರ ಪ್ರೀತಿಯ ಹುಡುಕಾಟದ ತುಡಿತವನ್ನೇ ತೋರಿಸಿಕೊಡುತ್ತವೆ.

ಪ್ರತಿಭಾ ಅವರ ಆ ಗೆಳೆಯನು ಒಂದು ಪತ್ರದಲ್ಲಿ 'ನಾನು ಎಲ್ಲಾ ಹೆಣ್ಣುಗಳ ಸಂಗವನ್ನು ಮಾಡುವುದೂ ಅವರ ಮೇಲೆ ಒಂದು ಕಣ್ಣಿಟ್ಟೆ. ಆದರೆ ಇಡೀ ಜಗತ್ತಿನಲ್ಲಿ ನಿನ್ನೊಬ್ಬಳನ್ನು ಆ ಥರ ನೋಡೋದು ನನಗೆ ಸಾಧ್ಯವಿಲ್ಲ.' ಎಂದು ಬರೆದಿರುವುದನ್ನು ನೋಡಿದಾಗ ಪ್ರತಿಭಾರಿಂದ ಬರೀ ಗೆಳೆತನವನ್ನು ಮಾತ್ರ ನಿರೀಕ್ಷಿಸಿರುವುದು ಕಂಡುಬರುತ್ತದೆ. ಆದರೆ ಪ್ರತಿಭಾರು ಅನಿಶ್ಚಿತತೆಗೆ ಒಳಗಾಗಿ ಅವನನ್ನು ಪ್ರಿಯಕರನಾಗಿ ಸ್ವೀಕರಿಸಲು ಚಡಪಡಿಸುತ್ತಾರೆ. ಇಲ್ಲಿ ಸ್ನೇಹವನ್ನು ಆಸರೆಯಾಗಿಟ್ಟುಕೊಂಡು ಪ್ರೀತಿಯನ್ನು ಹುಡುಕುವ ಪ್ರಯತ್ನ ಎದ್ದು ಕಾಣುತ್ತದೆ. ಒಳ್ಳೆಯ ಗೆಳತಿಯಾಗಿದ್ದುಕೊಂಡು ಪ್ರೀತಿಯನ್ನೂ ಯಾಕೆ ಪಡೆಯಬಾರದು ಎಂಬ ತುಡಿತ ಅವರನ್ನು ಹೆಚ್ಚಾಗಿ ಕಾಡುತ್ತದೆ. ಇಂತಹ ಅನೇಕ ಸಮಸ್ಯೆಗಳಿದ್ದರೂ ಅವರು ಆ ಸ್ನೇಹಿತನಿಂದ ದೂರವಾಗುವುದಿಲ್ಲ. ಮನಸ್ಸಿನಲ್ಲಿ ಅಷ್ಟೆಲ್ಲಾ ದ್ವಂದ್ವಗಳು ಇದ್ದರೂ ಆ ಸ್ನೇಹವನ್ನು ಮುಂದುವರೆಸಿಕೊಂಡು ಹೋಗುವುದು ಎದ್ದು ಕಾಣುತ್ತದೆ.

'ನಿನ್ನದು ಹುಲಿಮದ್ದು, ಅತಿಯಾದರೆ ಅಪಾಯ'. ಪ್ರತಿಭಾರ ಅತಿಯಾದ ಬಯಕೆ, ಏಕಮನಸ್ಸಿನ ನಿಷ್ಠೆ, ಪ್ರೀತಿ, ಎಲ್ಲವೂ ಗೆಳೆಯನಿಗೆ ಉಸಿರುಕಟ್ಟಿಸುವ ಸರಪಳಿಯಂತೆ ಕಿರಿಕಿರಿಯಾಗಿರುವುದು ಕಂಡುಬರುತ್ತದೆ. ಆ ಗೆಳೆಯ ಕೇವಲ ಸ್ನೇಹ ಬಯಸಿದ್ದಾರೆಯೇ ಹೊರತು ಬೇರೆ ಏನನ್ನು ಅಲ್ಲ. ಆದರೆ ಪ್ರತಿಭಾ ಅವರು ಅವನಿಂದ ಪ್ರೀತಿಯನ್ನು ಬಯಸಿದ ಪರಿಣಾಮ ಅವರ ಗೆಳೆತನದಲ್ಲಿ ಒಡಕು ಉಂಟು ಆಗಿರುವುದನ್ನು ಕಾಣುತ್ತೇವೆ. ಇಲ್ಲಿ ಪ್ರೀತಿಯೇ ಬೇರೆ, ಗೆಳೆತನವೇ ಬೇರೆ. ಗೆಳೆಯನಿಂದ ಪ್ರೀತಿ ಬಯಸಿದರೂ ಅದು ದೊರಕದೇ ಇರಲು ಕಾರಣ ಅವನ ಸ್ನೇಹದ ಸಂಕೇತವಾಗಿದೆ. ಆದರೆ ಪ್ರತಿಭಾ ಅವರ ಜೀವನದಲ್ಲಿ ಬಯಸಿರುವುದು ಒಬ್ಬ ಮನುಷ್ಯಳಂತೆ ಸಹಾನುಭೂತಿಯಿಂದ ನೋಡುವ ಮನಸ್ಸನ್ನು. ಅವಳನ್ನು ದೇವತೆ ಮಾಡುವ ಅಥವಾ ದಾಸಿಯಂತೆ ತುಳಿಯುವ ಮನಸ್ಥಿತಿ ಹೊಂದಿದವರನ್ನಲ್ಲ. ಈ ರೀತಿಯ ವಿರುದ್ಧ ನಿಲ್ಲುವ ನಿಲುವುಗಳು ಈ ಆತ್ಮಕಥನದ ಅನೇಕ ಕಡೆಗಳಲ್ಲಿ ಕಾಣಸಿಗುತ್ತವೆ.

ಕಾಲ ಬದಲಾದಂತೆ ವ್ಯಕ್ತಿಯ ವ್ಯಕ್ತಿತ್ವವೂ ಕೂಡ ಬದಲಾಗುತ್ತಾ ಹೋಗುವುದು ಸಹಜ. ಅದೇ ರೀತಿ ವ್ಯಕ್ತಿತ್ವವನ್ನು ಕುಗ್ಗಿಸುವ ಮತ್ತು ಹಿಗ್ಗಿಸುವ ಪ್ರಕ್ರಿಯೆಗಳು ಮನುಷ್ಯ ಸಂಬಂಧಗಳ ನಡುವೆ ಸದಾ ನಿರಂತರವಾಗಿ ನಡೆಯುತ್ತಿರುತ್ತವೆ. ತೀರಾ ಬಡತನದಿಂದ ಶ್ರೀಮಂತಿಕೆ ದೊರೆತ ನಂತರ ಎಂಥವರೂ ಬದಲಾವಣೆ ಹೊಂದುವುದು ಸಾಮಾನ್ಯ ಸಂಗತಿ. ಪ್ರತಿಭಾ ಅವರ

ಸ್ನೇಹಿತನೂ ಕೂಡ ಬದಲಾದಾಗ ಪ್ರತಿಭಾರ ಅಭಿಪ್ರಾಯ, 'ಅದು ಕೇವಲ ಸ್ನೇಹವಲ್ಲದೇ ಬೇರೇನೂ ಆಗಿರಲಿಲ್ಲ' ಎಂಬುದೇ ಆಗಿದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಒಬ್ಬ ವ್ಯಕ್ತಿಯನ್ನು ಸ್ನೇಹಿತನಂತೆ ಕಂಡು ನಂತರ ಪ್ರೀತಿಯನ್ನು ಬಯಸಲಾಗಿದೆ. ಆ ಪ್ರೀತಿ ದೊರೆಯುವುದಿಲ್ಲ ಅಂತ ತಿಳಿದಾಗ, ಅದು ಕೇವಲ ಸ್ನೇಹವಷ್ಟೇ ಬೇರೆ ಏನೂ ಅಲ್ಲ ಎಂಬ ನಿಲುವಿಗೆ ಬಂದಂತಿದೆ. ಮತ್ತು ಆ ಸ್ನೇಹವು ಕೂಡ ಶಾಶ್ವತವಾಗಿ ಉಳಿಯುತ್ತದೆ ಎಂಬ ಭರವಸೆ ಇಲ್ಲದಿರುವುದನ್ನು ಅವರೇ ಸೂಚಿಸುತ್ತಾರೆ. ಕೇವಲ ಪ್ರೀತಿಯನ್ನು ಹಂಚಿಕೊಂಡರೆ ಮಾತ್ರ ಸ್ನೇಹ ಶಾಶ್ವತವಾಗಿ ಉಳಿಯುತ್ತದೆ ಎಂಬ ನಿಲುವು ಇಲ್ಲಿ ಕಾಣುತ್ತದೆ. ಪರಸ್ಪರರ ವಿಷಯಗಳನ್ನು ಅರಿತಿದ್ದರೂ ಪ್ರೀತಿ ಉಂಟಾಗುವುದಿಲ್ಲ. ಪ್ರತಿಭಾ ರವರು ಪ್ರೀತಿಯ ಹುಡುಕಾಟದಲ್ಲಿ ಇರುವುದರಿಂದ ಸ್ನೇಹದಲ್ಲಿ ಪ್ರೀತಿಯ ಹುಡುಕಾಟ ಮಾಡಿರುವುದು ಗೊತ್ತಾಗುತ್ತದೆ. ಅದು ದೊರೆಯುವುದಿಲ್ಲ ಎಂದು ಸ್ಪಷ್ಟವಾದಾಗ ಸ್ನೇಹ ಸ್ನೇಹವಾಗಿಯೇ ಉಳಿಯುತ್ತದೆ ಮತ್ತು ಅದು ಹೆಚ್ಚುದಿನ ಇರಲಾರದು. ಒಂದಲ್ಲ ಒಂದು ದಿನ ಕಳಚಿ ಬೀಳುತ್ತದೆ ಎಂಬ ನಿರ್ಧಾರಕ್ಕೆ ಬಂದಂತಿದೆ. ಬರೀ ಸ್ನೇಹವನ್ನಷ್ಟೇ ಬಯಸಿದಿದ್ದರೆ ಶಾಶ್ವತವಾಗಿ ಉಳಿಯುತ್ತಿತ್ತು. ಪ್ರೀತಿಯ ಹುಡುಕಾಟದಲ್ಲಿರುವುದರಿಂದ ಪರಿಪೂರ್ಣ ಪ್ರೀತಿಯನ್ನು ಪಡೆಯುವ ಪ್ರಯತ್ನ ನಿರಂತರವಾಗಿ ಮುಂದುವರಿಯುವುದನ್ನು ನೋಡುತ್ತೇವೆ.

ಪ್ರತಿಭಾ ಅವರ ಪ್ರೀತಿಯ ಹುಡುಕಾಟದ ಸ್ವರೂಪವು ವಿಚಿತ್ರವಾದುದಾಗಿದೆ. ಮೈಯಲ್ಲಾ ಸುಟ್ಟುಕೊಂಡು ಆಸ್ಪತ್ರೆಯಲ್ಲಿದ್ದಾಗಲೂ 'ನನಗೊಂದು ಮುತ್ತು ಕೊಡ್ತೀಯಾ?' ಎಂದು ಗೆಳೆಯನನ್ನು ಕೇಳುತ್ತಾರೆ. ಅದೊಂದು ಉತ್ಕಟವಾದ ಪ್ರೀತಿಯ ಸೆಳೆತವಾಗಿದೆ. ನಿರೂಪಣೆಯಲ್ಲಿ ಅದೊಂದು 'ಅನೈತಿಕ' ಎಂದು ಯಾವತ್ತೂ ಅನಿಸುವುದಿಲ್ಲ. ಅವರ ನಿರೂಪಣಾ ಶಕ್ತಿ ಅಂಥದ್ದೇ ಆಗಿದೆ. ಅವರ ನಿರೂಪಣಾ ಶಕ್ತಿಯಂತೆ ಅವರ ಜೀವನವೂ ಕೂಡ ಸಾಗಿದೆ ಎನಿಸುತ್ತದೆ. ಅದು ಯಾವತ್ತೂ ತನ್ನ ಗಡಿಯನ್ನು ದಾಟದೇ ಪ್ರೀತಿಯನ್ನು ಬಯಸಿದ ರೀತಿ ಎನ್ನಬಹುದು.

ಪ್ರತಿಭಾ ಅವರು ಸ್ನೇಹಿತನಿಂದ ಬಯಸಿದ್ದು ಪ್ರೀತಿಯನ್ನು ಎಂಬುದು ಈ ವಾಕ್ಯದಿಂದ ತಿಳಿದುಬರುತ್ತದೆ. ಮೈಯೆಲ್ಲಾ ಸುಟ್ಟುಕೊಂಡು ಫಿಸಿಯೋಥೆರಪಿ ಮಾಡಿಸಿಕೊಳ್ಳಲು ನಿರಾಕರಿಸುತ್ತಿದ್ದ ಪ್ರತಿಭಾ ಸ್ನೇಹಿತನಿಂದ ಒಂದು ಮುತ್ತು ದೊರೆತರೆ ಫಿಸಿಯೋಥೆರಪಿ ಮಾಡಿಸಿಕೊಳ್ಳಲು ಒಪ್ಪುತ್ತಾರೆ. ಇಲ್ಲಿ ಪ್ರೀತಿಗೆ ಏನೆಲ್ಲಾ ಶಕ್ತಿಯಿದೆ ಎಂದು ತಿಳಿದು ಬರುತ್ತದೆ. ಇಲ್ಲಿ ಪ್ರತಿಭಾರ ಉದ್ದೇಶ ಗೆಳೆಯನಿಂದ ಪ್ರೀತಿ ಪಡೆಯುವ ತಂತ್ರವಾಗಿದೆ. ಆದರೆ ಆ ತಂತ್ರ ಫಲಿಸದಿರುವುದು ಸ್ನೇಹದ ಬಂಧವಾಗಿದೆ.

ಫಿಸಿಯೋಥೆರಪಿ ಮಾಡಿಸಿಕೊಂಡ ನಂತರವೂ ಗೆಳೆಯನಿಂದ ಕೇಳಿದ್ದನ್ನು ಪಡೆಯಲಾಗಲಿಲ್ಲ. ಅವನು ಬಂದಾಗಲೆಲ್ಲಾ ಅದೇ ಬೇಡಿಕೆ ಇಟ್ಟರೂ, ಅವನು ನಿರಾಕರಿಸುವ ರೀತಿಯು ಕೇವಲ ಒಂದು ಆಟದಂತೆ ಕಾಣುತ್ತದೆಯೇ ಹೊರತು ಬೇರೇನೂ ಸಿಗುವುದಿಲ್ಲ. ಇಲ್ಲಿ ಪ್ರೀತಿಯು ಯಾರಿಂದಲೂ ಸುಲಭವಾಗಿ ದೊರೆಯುವಂತದಲ್ಲ ಎಂಬುದನ್ನು ಸಾಬೀತು ಪಡಿಸುವಂತಿದೆ.

ಸ್ನೇಹಿತನಾಗಿದ್ದುಕೊಂಡು ಬರೀ ಸ್ನೇಹವನ್ನು ಮಾತ್ರ ಒಪ್ಪಿಕೊಂಡು ಪ್ರೀತಿಯನ್ನು ನಿರಾಕರಿಸಿ, ಬೇರೆಯವರು ಪ್ರತಿಭಾರನ್ನು ಇಷ್ಟ ಪಡ್ತಾರೆ ಅಂತ ಗೊತ್ತಾದಾಗ, ನಿನಗೆ ಒಳ್ಳೆಯದಾಗಲಿ ಎಂದು ಹಾರೈಸುವ ಮತ್ತು ಆ ಮೂಲಕ ಸಂತೋಷ ವ್ಯಕ್ತಪಡಿಸುವ ಗುಣ ಇಷ್ಟವಾಗುತ್ತದೆ. ಯಾವುದೇ ರೀತಿಯ ದುಗುಡವಿಲ್ಲದೆ, ಬೇಸರವಿಲ್ಲದೆ, ಬಯಸಿದ ಪ್ರೀತಿ ಸಿಗಲಿ. ಸಂತೋಷವಾಗಿರು, ಖುಷಿಯಾಗಿರು ಎಂದು ಹೇಳುವಲ್ಲಿ ಭಾರವಾದ ಧ್ವನಿಯಿರುವುದು ವ್ಯಕ್ತವಾಗುತ್ತದೆ. ಸ್ನೇಹಿತನಿಂದ ಪಡೆಯಲಾಗದ ಪ್ರೀತಿ ಬೇರೆಯವರಿಂದ ಅರಸಿ ಬಂದಾಗ ಅದನ್ನು ತಿರಸ್ಕರಿಸದೆ, ನಿನಗೆ ಒಳ್ಳೆಯದಾದರೆ ಸಾಕು. ಅದರಿಂದ ನನ್ನಷ್ಟು ಸಂತೋಷ ಪಡುವವರು ಬೇರೆ ಯಾರೂ ಇಲ್ಲ, ಎಂಬ ಧ್ವನಿಯಲ್ಲಿ ನಿಸ್ವಾರ್ಥತೆ ವ್ಯಕ್ತವಾಗುತ್ತದೆ. ಸ್ನೇಹಿತೆಗೆ ಪ್ರೀತಿ ದೊರಕಲಿ ಅವಳ ಹುಡುಕಾಟಕ್ಕೆ ನೆಲೆ ದೊರೆಯಲಿ ಎಂಬುದು ಸ್ನೇಹಿತನ ಆಶಯವಾಗಿದೆ.

ಇಲ್ಲಿ ಪ್ರತಿಭಾ ಅವರ ಅಂತರಂಗದ ಹಸಿವು, ಶುದ್ಧ ಪ್ರೀತಿಯ ಉನ್ಮಾದದ ಹುಡುಕಾಟ, ಗೆಳೆಯನಿಗೆ ಮಾತ್ರ ಅರ್ಥವಾದಂತಿದೆ. ಒಂದು ಕಡೆಯ ಪ್ರೀತಿ ನಿರಾಕರಣೆಯಿಂದ ಇನ್ನೊಂದು ಕಡೆಗೆ ಹೋದಾಗ ಅದು ಸುಖಕರವಾಗಿರಲಿ ಎಂಬ ಆಶಯದ ಹಿಂದೆ ಸ್ನೇಹದ ಅರ್ಥ ಸ್ಪಷ್ಟವಾಗುತ್ತದೆ. ಇಲ್ಲಿ ಸ್ನೇಹಿತನಾಗಿ ಪ್ರೀತಿಯ ಹುಡುಕಾಟದಲ್ಲಿ ನಿರಾಸೆಯಾದವಳಿಗೆ ಸಮಾಧಾನಿಸುವ ಮತ್ತು ತಾಳ್ಮೆಯಿಂದ ಕಾಯಬೇಕು ಎಂಬ ಮಾತುಗಳು ಪ್ರತಿಭಾರಿಗೆ ಹಿತವಾಗಿವೆ. ಪ್ರತಿಭಾರು ಗೆಳೆಯನಿಂದ ಪ್ರೀತಿ ಬಯಸಿದರೂ ಅದು ದೊರೆಯಲಿಲ್ಲ. ಆದರೆ ಸ್ನೇಹದಿಂದ ಸಾಂತ್ವಾನದ ನುಡಿಗಳು ದುಃಖವನ್ನು ಮರೆಸುವ ಮದ್ದಾಗಿ ಕೆಲಸ ಮಾಡಿವೆ.

ಹೆಸರನ್ನು ಅಜ್ಞಾತವಾಗಿಡಲು 'ಅವರು' ಎಂದು ಸಂಭೋದಿಸಿರುವ ಪ್ರತಿಭಾ ಅವರೊಟ್ಟಿಗೆ ಹಲವಾರು ಗೆಳತಿಯರ ಸಂಬಂಧ ಇದೆ ಎಂದು ಗೊತ್ತಾಗ್ಯೂ ಪ್ರೀತಿಯನ್ನು ಹರಸುತ್ತಾರೆ. ಪ್ರತಿಭಾ ಅವರ ಗೆಳತಿಯೇ ಅವರೊಟ್ಟಿಗೆ ಸಂಬಂಧವನ್ನು ಹೊಂದಿದ್ದರೂ ಅದು ಮುಖ್ಯವಾಗದೇ ಹೋಗುತ್ತದೆ. ಇಬ್ಬರು ಗೆಳತಿಯರೂ ಅವರ ಬಗ್ಗೆ ಇದ್ದ ಪ್ರೀತಿ, ಸೆಳೆತದ ಬಗ್ಗೆ ಅಪ್ಪಿ ತಪ್ಪಿಯೂ ಮಾತಾಡುವುದಿಲ್ಲ. ಇದನ್ನು ನೋಡಿದರೆ ಪ್ರೀತಿಯನ್ನು ಪಡೆಯುವುದಷ್ಟೆ ಇಬ್ಬರ ಹಂಬಲದಂತೆ ಭಾಸವಾಗುತ್ತದೆ. ಗೆಳತಿಯರಾಗಿದ್ದು ಒಬ್ಬರ ವಿಷಯ ಇನ್ನೊಬ್ಬರಿಗೆ ತಿಳಿಸಲು ಇಷ್ಟ ಪಡುವುದಿಲ್ಲ. ಸ್ನೇಹಿತರಾಗಿ ಅವರ ಪ್ರೀತಿಯ ಗುಟ್ಟನ್ನು ಗೌಪ್ಯವಾಗಿಡುವುದು ಕಂಡು ಬರುತ್ತದೆ.

ಗೆಳತಿಯು ಅವರೊಟ್ಟಿಗೆ ಒಬ್ಬಳೇ ರೂಮಿನಲ್ಲಿ ಕೆಲ ಗಂಟೆಗಳ ಕಾಲ ಕಳೆದರೂ ಅವರ ನಡುವೆ ಏನಾಯಿತು ಅಂತ ಕೇಳದಿರುವುದು ಮತ್ತು ಅವಳು ಅವರೊಡನೆ ಇದ್ದರೆ ತಾನೇಕೆ ತಲೆ ಕೆಡಿಸಿಕೊಳ್ಳಬೇಕು ಎಂಬ ನಿಲುವಿನಲ್ಲಿ ಪ್ರತಿಭಾರ ಭಾವನಾತ್ಮಕ ಅಂಶಗಳು ಗಟ್ಟಿಯಾಗಿಲ್ಲ ಎಂಬುದನ್ನು ತಿಳಿಸುತ್ತದೆ. ಹಾಗಿಲ್ಲದಿದ್ದರೆ ಗೆಳತಿಯನ್ನು ಪ್ರಶ್ನೆ ಮಾಡಬಹುದಾಗಿತ್ತು. ಅವರೇ ಹೇಳುವಂತೆ ಅದು ಕೇವಲ ಅವರ ನಡುವಿನ ದೈಹಿಕ ಆಕರ್ಷಣೆ. ಇಬ್ಬರ ಅಗತ್ಯ ಒಂದೇ ಮತ್ತು ಕ್ಷಣಿಕ ಎಂದು ಗೊತ್ತಿರುವುದರಿಂದ ಸ್ನೇಹಕ್ಕೆ ಯಾವುದೇ ರೀತಿಯ ಅಡಚಣೆ ಉಂಟಾಗಿಲ್ಲದಿರುವುದನ್ನು

ಸ್ಪಷ್ಟೀಕರಿಸುತ್ತದೆ. ಪ್ರತಿಭಾ ಅವರು ಒಂದು ಹೆಣ್ಣಾಗಿ ಇನ್ನೊಬ್ಬ ಹೆಣ್ಣಿನ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ಅವಳನ್ನು ಪ್ರಶ್ನಿಸದೆ, ಅಗತ್ಯವನ್ನು ಈಡೇರಿಸಿಕೊಳ್ಳುವ ಆಸೆ ಹೊಂದಿದಂತೆ ಕಾಣುತ್ತದೆ. ಗೆಳೆಯನಿಂದ ಪ್ರೀತಿ ದೊರೆಯದೇ ಇದ್ದಾಗ ಕೇವಲ ಗೆಳೆಯರಂತೆ ಪರಸ್ಪರ ಒಪ್ಪಿಕೊಂಡಿದ್ದ ಮತ್ತು ಯಾವುದೇ ಪ್ರೀತಿಯ ಭಾನೆಗಳಿಲ್ಲದ ಶುದ್ಧ ಗೆಳೆತನ ಹೊಂದಿರುವುದನ್ನು ಇಬ್ಬರೂ ಒಪ್ಪಿಕೊಂಡರೂ ಬೇರೆಯವರಿಗೆ ಅದು ಗೆಳೆತನದಂತೆ ಕಾಣುತ್ತಿರಲಿಲ್ಲ. ಪ್ರತಿಭಾ ಅವರು ಗೆಳೆಯನನ್ನು ಅಪಾರವಾಗಿ ಪ್ರೀತಿಸಿ ಬಯಸಿದ್ದು ನಿಜವಾಗಿದ್ದರೂ, ಅವರ ನಡುವೆ ಯಾವುದೇ ರೀತಿಯ ಸಂಬಂಧ ಏರ್ಪಡದಿರುವುದು ಪ್ರತಿಭಾರಿಗೆ ನಿರಾಸೆ ಉಂಟು ಮಾಡಿದೆ. ಒಮ್ಮೆ ಪ್ರತಿಭಾರು ಮನೆ ಬಾಡಿಗೆಗೆ ಸಹಿ ಹಾಕವ ಸಮಸ್ಯೆಗೆ ಸಿಲುಕಿದಾಗ, ಗಂಡನಂತೆ ಅಭಿನಯಿಸು ಎಂದು ಸ್ನೇಹಿತನ ಕೇಳಿಕೊಂಡಾಗ, "ಹೋಗೆ ಹೋಗು, ಕನಸಿನಲ್ಲೂ ಒಂದು ನಿಮಿಷವೂ ನಿನ್ನ ಗಂಡ ಅಂತ ಅಭಿನಯಿಸಕ್ಕೂ ನನಗೆ ಸಾಧ್ಯವಿಲ್ಲ." ಎಂಬ ಮಾತು ಪ್ರೀತಿ ಮತ್ತು ಗೆಳೆತನಕ್ಕೆ ಇರುವ ಅಂತರವನ್ನು ತಿಳಿಸುತ್ತದೆ. ಇಲ್ಲಿನ ಪರಿಸ್ಥಿತಿಯಲ್ಲಿ ಪ್ರತಿಭಾ ಆವರೂ ಕೂಡ ಬಯಸಿದ್ದು ಅಪಾರ್ಥ ಮಾಡಿಕೊಳ್ಳುವಂತದ್ದು ಏನೂ ಇಲ್ಲ. ಇದನ್ನು ಸಾಂಪ್ರದಾಯಿಕ ಮನಸ್ಸುಗಳು ಅರ್ಥ ಮಾಡಿಕೊಳ್ಳದೆ ಹೋಗುತ್ತವೆ. ಆಗ ಅದು ಒಂದು 'ಅನೈತಿಕ' ನಡೆಯಂತೆ ಕಾಣುತ್ತದೆ.

ಪರಸ್ಪರರು ಪ್ರೀತಿಯನ್ನು ಹರಸದೆ ಬರೀ ಗೆಳೆತನವನ್ನು ಅಪೇಕ್ಷಿಸಿದ ಗೆಳೆತನ ಕೊನೆಗೆ ಮುರಿದು ಬೀಳುವ ಸಂದರ್ಭವನ್ನು ಗಮನಿಸಿದಾಗ ವಾಸ್ತವ ಅರಿವಾದಂತೆ ಬದಲಾವಣೆ ಆಗುವುದನ್ನು ಗಮನಿಸಬಹುದಾಗಿದೆ. ಪ್ರತಿಯೊಂದು ವಿಷಯವನ್ನು ಪ್ರತಿಭಾರೊಂದಿಗೆ ಹಂಚಿಕೊಳ್ಳುತ್ತಿದ್ದ ಗೆಳೆಯನಿಗೆ ಪ್ರತಿಭಾ ಅವರ ಬಗ್ಗೆ ಜಿಗುಪ್ಸೆ ಮೂಡಿತ್ತು. ಸಣ್ಣದೊಂದು ಉಲ್ಲಂಘನೆಯನ್ನು ಮಾಡದ ಪ್ರತಿಭಾ ಅವರು ಅವನ ಕಣ್ಣಿನಲ್ಲಿ ಹುಳುವಾಗಿರುವುದನ್ನು ಗಮನಿಸಿದಾಗ ಸ್ನೇಹದ ತಿರಸ್ಕಾರದ ಭಾವ ಎದ್ದು ಕಾಣುತ್ತದೆ. ಪ್ರತಿಭಾ ಅವರು ಮೊದಲು ಪ್ರೀತಿಯನ್ನು ಬಯಸಿದ್ದರಾದರೂ ಅದು ಸಿಗುವುದಿಲ್ಲ ಎಂದು ತಿಳಿದೊಡನೆ ಸ್ನೇಹಿತೆಯಾಗಿ ಮುಂದುವರೆಯಲು ಒಪ್ಪಿಕೊಂಡು ಅದರಂತೆ ನಡೆಯುತ್ತಾರೆ. ಆದರೆ ಗೆಳೆಯನಿಗೆ ಅದು ಇಷ್ಟವಾಗದೆ ತಿರಸ್ಕಾರ ಮನೋಭಾವ ತಳೆದಿದ್ದಾರೆ. ಇಲ್ಲಿ ಮನಸ್ಸು ಮತ್ತು ವಯಸ್ಸು ಪಕ್ವವಾದಂತೆ ಒಪ್ಪಿಗೆ ಮತ್ತು ನಿರಾಕರಣೆಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ. ಪ್ರತಿಭಾ ಅವರ ದೃಷ್ಟಿಯಲ್ಲಿ ಒಪ್ಪಿಗೆ ಮತ್ತು ಸಮ್ಮತಿ ಇದ್ದರೆ, ಗೆಳೆಯನ ದೃಷ್ಟಿಯಲ್ಲಿ ನಿರಾಕರಣೆ ಮತ್ತು ತಿರಸ್ಕಾರದ ಮನೋಭಾವ ಇದೆ.

ವಿದೇಶದ ವ್ಯಕ್ತಿಯೊಬ್ಬ ಭಾರತ ದೇಶದ ಸಂಸ್ಕೃತಿಯನ್ನು ತಿಳಿಯಲು ಆಸಕ್ತಿಹೊಂದಿ, ಪ್ರತಿಭಾರನ್ನು ಕಂಡು ಇಬ್ಬರೂ ಸ್ನೇಹಿತರಾದರು. ಇಬ್ಬರೂ ಖಾಸಗಿ ಬದುಕನ್ನು ಹಂಚಿಕೊಳ್ಳಲು ಪ್ರಾರಂಭಿಸಿದ ನಂತರ ಸ್ನೇಹ ಗಾಢವಾಗಿ ಬೆಳೆದಿರುವುದನ್ನು ಕಾಣುತ್ತೇವೆ. ಸ್ನೇಹಿತನಾಗಿ ಸೀಸ್ ಅವರು ಹೇಳುವ ಹಾಗೆ 'ಯಾವಾಗಲೂ ತೆರೆದ ಬಯಲಾಗಬೇಕು, ಮುಕ್ತವಾಗು, ಸ್ವಾತಂತ್ರಳಾಗೂ ಮನಸ್ಸನ್ನು ಮುಚ್ಚಿಟ್ಟುಕೊಳ್ಳಬೇಡ, ಭಾರತೀಯರಿಗೆ ಸದಾ ಮೈ ಮನಸ್ಸನ್ನು ಮುಚ್ಚಿಟ್ಟುಕೊಳ್ಳಲು

ಹೇಳಲಾಗುತ್ತದೆ. ನೀನು ಹಾಗಾಗಬೇಡ. ಸ್ಫಟಿಕದ ಹಾಗೆ ಪಾರದರ್ಶಕಳಾಗು' ಎಂಬ ಆಶಾವಾದದ ಮಾತುಗಳು ಸ್ನೇಹದ ಅವಶ್ಯಕತೆಯನ್ನು ಪ್ರತಿಪಾದಿಸುತ್ತವೆ. ಯಾವುದೇ ವ್ಯಕ್ತಿ ಒಂದು ಸಮಸ್ಯೆಯಲ್ಲಿ ಸಿಲುಕಿ ಪಾರಾಗದೆ ಒದ್ದಾಡುತ್ತಿದ್ದಾಗ, ಇಂತಹ ಮಾತುಗಳ ಅವಶ್ಯಕತೆ ಮತ್ತು ಅನಿವಾರ್ಯ ಇರುತ್ತದೆ. ಪ್ರತಿಭಾ ಅವರು ಈ ಮಾತುಗಳಿಂದ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು, ಮಾನಸಿಕ ಪಕ್ವತೆಯ ಕಡೆಗೆ ಹೆಚ್ಚು ಗಮನಕೊಡುತ್ತಾರೆ. ಇಲ್ಲಿ ಸ್ನೇಹಿತನ ಪಾತ್ರ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ.

ಪ್ರತಿಭಾ ಅವರಿಂದ ದೂರವಾದ ನಂದಕುಮಾರ್ ಅವರು ಮತ್ತೆ ಒಟ್ಟಾಗಿ ಜೀವನ ಸಾಗಿಸುವ ವಿಷಯವನ್ನು ಸೀಸ್ ಜೊತೆ ಚರ್ಚಿಸಿದ್ದಾಗ ಅವರ ಅಭಿಪ್ರಾಯ 'ಒಪ್ಪಕೋ' ಎಂಬುದೇ ಆಗಿದೆ. ಪ್ರತಿಭಾ ಅವರು ಸ್ನೇಹಿತನ ಮಾತಿಗೆ ಬೆಲೆಕೊಟ್ಟು ಒಪ್ಪಿಕೊಳ್ಳುತ್ತಾರೆ. ಪ್ರತಿಭಾ ಅವರು ಬಯಸಿದ ಪ್ರೀತಿಯು ಎಲ್ಲೂ ದೊರೆಯದೆ ಹೋದಾಗ, ಕೈಯೊಳಗಿನ ಪ್ರೀತಿಯನ್ನು ಬಿಟ್ಟು ಬೇರೆಡೆ ಅರಸಿ ಹೋಗುವುದನ್ನೂ ಕಾಣಬಹುದು. ಇದು ಗೊಂದಲದಂತೆ ಕಾಣಿಸುತ್ತದೆ. ಸೀಸ್ ಅವರ ಗೆಳೆತನದಿಂದ ಲೇಖಕಿ ಮಾನಸಿಕ ಸ್ಥಿಮಿತತೆಯನ್ನು ಹೊಂದಲು ಪ್ರಾರಂಭಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ಗೆಳೆತನವೇ ಆಗಿದೆ. ಪ್ರತಿಭಾ ಅವರು ಸೀಸ್‌ನಿಂದ ಪ್ರೀತಿಯನ್ನು ಬಯಸಲಿಲ್ಲ. ಆದರೆ ಕಳೆದುಕೊಂಡಿರುವ ಪ್ರೀತಿಯನ್ನು ಪಡೆಯುವಲ್ಲಿ ಯಶಸ್ಸಿನ ಹಾದಿ ಕಂಡುಕೊಂಡಂತಿದೆ ಎನಿಸುತ್ತದೆ. ಪ್ರತಿಭಾ ಅವರ ಇಡೀ ಜೀವನವನ್ನು ಗಮನಿಸಿದರೆ ಅವರ ಬಾಲ್ಯದ ಗೆಳೆತನಕ್ಕೂ, ತಾರುಣ್ಯದ ಗೆಳೆತನಕ್ಕೂ ಮತ್ತು ವಯಸ್ಕ ಗೆಳೆತನಕ್ಕೂ, ಹೋಲಿಕೆ ಮಾಡಿದಾಗ ಕಾಲದಿಂದ ಕಾಲಕ್ಕೆ ಗೆಳೆತನದಲ್ಲಿನ ಪಕ್ವತೆ ಎದ್ದುಕಾಣುತ್ತದೆ. ಅನುಭವವು ಪಕ್ವವಾದಂತೆಲ್ಲಾ ಸ್ನೇಹವೂ ಪಕ್ವವಾಗುತ್ತಾ ಸಾಗುತ್ತದೆ. ಅನುಭವಗಳಿಂದ ಪಾಠ ಕಲಿತ ಮೇಲೆ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ತಾಳ್ಮೆಯ ಗುಣ ಬರುವ ಲಕ್ಷಣಗಳು ಹೆಚ್ಚಾಗಿ ಕಂಡು ಬರುತ್ತವೆ. ಇದನ್ನು ಬದುಕಿನಲ್ಲಾದ ಅನುಭವದ ಬದಲಾವಣೆ ಎಂದು ಕರೆಯಬಹುದು.

೩.೫. ಬರಹಗಾರ್ತಿ ಮತ್ತು ಬರಹದೊಂದಿಗಿನ ಸಂಬಂಧ

ಕಾಲೇಜು ದಿನಗಳಿಂದಲೇ ತನ್ನ ಭಾವನೆಗಳನ್ನು ವ್ಯಕ್ತ ಪಡಿಸುವ ಸಲುವಾಗಿ, ಪದ್ಯ ಕವನಗಳನ್ನು ಬರೆಯತೊಡಗಿದ ಪ್ರತಿಭಾರು ಓದುಗರಿಂದ ಮನ್ನಣೆ ಗಳಿಸಿ ಅದನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಮೇಷ್ಟ್ರಿಂದ 'ಅಕ್ಷರ ಹೊಸ ಕಾವ್ಯ' ಕವನ ಸಂಕಲನವನ್ನು ಉಡುಗೊರೆಯಾಗಿ ಸ್ವೀಕರಿಸಿದವರು ಮುಂದಿನ ಇಪ್ಪತ್ತು ವರ್ಷಗಳ ನಂತರ ಅದೇ 'ಮೇಷ್ಟ್ರು', 'ಅಕ್ಷರ ಹೊಸ ಕಾವ್ಯ' ಸಂಕಲನದ ಪರಿಷ್ಕೃತ ಸಂಪುಟ ಹೊರಬಂದಾಗ, ಪ್ರತಿಭಾ ಅವರ ಕವನ ಸೇರಿರುವುದು ಅವರ ಬರವಣಿಗೆಯ ಪಕ್ವತೆಯನ್ನು ತಿಳಿಸುತ್ತದೆ. ಇದನ್ನು ಅವರ 'ಮೇಷ್ಟ್ರೇ' ಸ್ವತಃ ಪ್ರತಿಭಾ ಅವರಲ್ಲಿ ಹೇಳಿಕೊಂಡಿದ್ದಾರೆ. ಬರವಣಿಗೆಯನ್ನು ಜೀವನದ ಒಂದು ಭಾಗವೆಂದೇ ಅವರು ಭಾವಿಸಿದಂತಿದೆ. ಬರವಣಿಗೆಯ ಮುಖಾಂತರ ತನ್ನ ನೋವು

ಮತ್ತು ಪ್ರೀತಿಯ ಹುಡುಕಾಟವನ್ನು ವ್ಯಕ್ತಪಡಿಸಿದ್ದಾರೆ. ಬರವಣಿಗೆಗೆ ಎಂತಹದೇ ಸಮಸ್ಯೆ, ನೋವನ್ನು ಕಡಿಮೆ ಮಾಡುವ ಶಕ್ತಿ ಇದೆ ಎಂಬುದು ಪ್ರತಿಭಾ ಅವರ ಜೀವನದಲ್ಲಿ ನಿಜವಾಗಿದೆ. ಎಲ್ಲರೂ ಬರಹಗಾರರಾಗಲು ಸಾಧ್ಯವಿಲ್ಲ. ಬರವಣಿಗೆಯ ಮುಖಾಂತರವೇ ಜೀವನವನ್ನು ಕಟ್ಟಿಕೊಂಡಂತಹ ಹಲವಾರು ಉದಾಹರಣೆಗಳನ್ನು ಕಾಣಬಹುದಾಗಿದೆ. ಅನೇಕ ಕಾರಣಗಳಿಗಾಗಿ, ವಿವಿಧ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಬರವಣಿಗೆ ಹುಟ್ಟಿಕೊಂಡಿರುವುದನ್ನು ಕಾಣಬಹುದು.

ಕಾಲೇಜು ದಿನಗಳಲ್ಲಿ 'ಮೇಷ್ಟ್ರು' ಬಗ್ಗೆ ಇದ್ದ ಅಭಿಮಾನ, ಪ್ರೀತಿಯನ್ನು ಅವರು ಗುರುತಿಸದೇ ಹೋದ ಸಂದರ್ಭ ಮತ್ತು ಹಾಗೆಯೇ ಪ್ರತಿಭಾ ಅವರು ಅದನ್ನು ಧೈರ್ಯವಾಗಿ ಹೇಳಲಾಗದ ಸಂದರ್ಭಗಳಲ್ಲಿ ಭಾವನೆಗಳನ್ನು ಬರವಣಿಗೆಯ ಮೂಲಕ ಹೊರಹಾಕುವುದು ಸಾಮಾನ್ಯವಾದ ಸಂಗತಿಯಂತೆ ತೋರುತ್ತದೆ. ಆ ಭಾವನೆಗಳು ಕವನಗಳಲ್ಲಿ ವ್ಯಕ್ತವಾಗಿವೆ. ಪ್ರತಿಭಾ ಅವರು ಬರವಣಿಗೆಯನ್ನು ತಮ್ಮ ನೋವಿನ ಬಿಡುಗಡೆಗೆ ಇರುವ ದಾರಿ ಎಂದು ಭಾವಿಸಿದ್ದಾರೆ. ಅದು ನಿಜವೂ ಕೂಡ ಆಗಿದೆ. ಅನೇಕ ಜನ ತಮ್ಮ ನೋವುಗಳನ್ನು ಬರವಣಿಗೆಯ ಮೂಲಕ ಮರೆಯುವ ಪ್ರಯತ್ನವನ್ನು ಮಾಡಿದ್ದಾರೆ ಮತ್ತು ಅದರಲ್ಲಿ ಸಫಲವೂ ಆಗಿದ್ದಾರೆ. ಇದನ್ನು ಪ್ರತಿಭಾ ಅವರ ಜೀವನದಲ್ಲಿಯೂ ಕಾಣಬಹುದು.

ಈ ಆತ್ಮಕಥೆಯಲ್ಲಿ ಲೇಖಕಿಯು ತಮಗೆ ನೋವಾದಾಗಲೆಲ್ಲಾ ಸ್ನೇಹಿತರೊಂದಿಗೆ ಪತ್ರ ವ್ಯವಹಾರ ಮಾಡುವ ಮೂಲಕ ಪರಸ್ಪರ ವಿಷಯಗಳನ್ನು ಹಂಚಿಕೊಳ್ಳುತ್ತಾರೆ. ಅದರಲ್ಲಿಯೂ ಕೂಡ ಸಾಹಿತ್ಯಕ ಪರಿಬಾಷೆಯಲ್ಲಿ ಹೆಚ್ಚು ಬರೆದಿರುವುದನ್ನು ಕಾಣುತ್ತೇವೆ. ಅಂದರೆ ಅವರ ನೋವನ್ನು ಮತ್ತೊಬ್ಬರ ಬಳಿ ಹೇಳಿಕೊಂಡಂತೆಯೂ ಆಯಿತು. ಜೊತೆಗೆ ಸ್ನೇಹಿತರ ಜೊತೆಗೆ ಒಂದು ರೀತಿಯ ಸಂಭಾಷಣೆಯೂ ಆಯಿತು. ಈ ಉಪಾಯವು ಆವರ ಜೀವನದಲ್ಲಿ ಸಾಕಷ್ಟು ಕಷ್ಟಗಳನ್ನು ತಂದರೂ ಅದು ಪ್ರತಿಭಾ ಅವರಿಗೆ ನೆಮ್ಮದಿಯನ್ನು ತಂದಿದೆ. ಇದು ಅವರಿಗೆ ಸದ್ಯದ ಬಿಡುಗಡೆಯಂತೆ ಕಂಡಿದೆ. ಅದೂ ಅಲ್ಲದೆ ಅವರ ಪ್ರೀತಿಯ ನಿವೇದನೆಯೂ ಬರವಣಿಗೆಯ ಮೂಲಕ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ.

ಸ್ನೇಹಿತರೊಂದಿಗೆ ಪತ್ರ ವಿನಿಮಯ ಮಾಡುವ ಸಂದರ್ಭದಲ್ಲಿ ಪ್ರತಿದಿನ ಒಂದು ಕವನ, ಒಂದು ಕಾರ್ಡ್ ಮಾಡುವ ಸಂದರ್ಭದಲ್ಲಿ ಮನೆಯವರಿಂದ ಗುಟ್ಟಾಗಿ ಮಾಡಬೇಕಾಗಿತ್ತು. ಮನೆಯವರಿಗೆ ಗೊತ್ತಾದರೆ ತೊಂದರೆಯಾಗಬಹುದು ಎಂಬ ಕಾರಣದಿಂದ ನಡುರಾತ್ರಿ ಎಲ್ಲರೂ ಮಲಗಿದಾಗ ಬರೆದು ಮುಗಿಸಿ, ಅದನ್ನು ಒಂದು ಕವರಿಗೆ ಹಾಕಿ, ಸೀಲ್ ಮಾಡಿ, 'ಸಂಪಾದಕರು' ಎಂದು ವಿಳಾಸ ಬರೆದು ದಿನವೂ ಕಳಿಸುತ್ತಿದ್ದರು. ಇಲ್ಲಿ ಪ್ರೀತಿಯು ಭಾವನೆಗಳಾಗಿ ಬರವಣಿಗೆಯ ಮುಖಾಂತರ ಕವನಗಳಾಗಿ ಹೊರಬಂದಿರುವುದನ್ನು ಕಾಣಬಹುದು. ಆದರೆ ಅವರು ಅದನ್ನು ಗೌಪ್ಯವಾಗಿ ಇಡಬೇಕಾಗಿದೆ. ಅಲ್ಲದೆ ಇದು ಅನಿವಾರ್ಯವೂ ಆಗಿದೆ. ಇದು ಸಮಾಜದ

ಕಟ್ಟುಪಾಡುಗಳಿಗೆ ವಿರುದ್ಧವಾದುದು ಎಂಬ ಭಾವನೆಯೂ ಅವರಿಗಿದೆ. 'ಪಂಚಭೂತಗಳ ಸಾಕ್ಷಿಯಾಗಿ' ಎಂಬ ಪದವನ್ನು ಬಳಸುವಾಗ ಪ್ರಕೃತಿಗೆ ಇರುವ ಗುಣ ಸಮಾಜಕ್ಕೆ ಇಲ್ಲ ಎಂದು ಹೇಳಿದಂತಿದೆ. ಅದಕ್ಕಾಗಿ ಅವರಿಗೆ ಸಮಾಜದಲ್ಲಿನ ಮನುಷ್ಯರಿಗಿಂತ ಪ್ರಕೃತಿಯು ಅತೀ ಪ್ರಿಯವಾಗಿ ಕಾಣಿಸುತ್ತದೆ.

ಲೇಖಕಿ ಪ್ರತಿಭಾ ಅವರು ತಮ್ಮ ನೆಚ್ಚಿನ ಸಾಹಿತಿ ಪರಿಚಯವಾದಾಗ ಅದನ್ನು ಅವರು ತಮ್ಮ ಭಾವನೆಗಳ ಜೊತೆ ಬೆರೆಸಿಕೊಂಡು ನೋಡುತ್ತಿದ್ದರು. ಪರಸ್ಪರರ ಬರಹಗಳ ಮೂಲಕ, ಪತ್ರ ವ್ಯವಹಾರದ ಮೂಲಕ ಅಕ್ಷರಗಳಲ್ಲಿ ಪೂರ್ತಿ ಹುದುಗಿ ಭಾವಗಳು ಜೊಂಪೆಯಾಗಿ ಹೊಮ್ಮುತ್ತಿದ್ದವು. ಇದು ಅವರ ಪ್ರೀತಿಯ ಹುಡುಕಾಟದ ತವಕ ಎಂದೂ ಕರೆಯಬಹುದು. ಅಕ್ಷರಗಳ ಮೂಲಕ ಬರವಣಿಗೆಯ ರೂಪ ಪಡೆದಿರುವ ಪ್ರೀತಿಯ ಹಂಬಲವು ಇಲ್ಲಿನ ವೈಶಿಷ್ಟ್ಯವಾಗಿದೆ. ಅಂದರೆ ಅವರು ಪ್ರೀತಿಯನ್ನು ಪಡೆಯುವುದಕ್ಕಾಗಿ ಬರವಣಿಗೆಯ ಮೊರೆ ಹೋಗಿದ್ದಾರೆ. ಹಾಗೆ ಯಾವುದೋ ರೂಪದಲ್ಲಿ ಅವರು ತಮ್ಮ ಬರವಣಿಗೆಯನ್ನು ಗಟ್ಟಿಗೊಳಿಸಿಕೊಳ್ಳುತ್ತಾರೆ. ಅವರ ಪ್ರೀತಿಯ ಹುಡುಕಾಟವು ಹೀಗ ಬರವಣಿಗೆಯ ಮೂಲಕ ಹೊರಬಂದಿರುವುದರಿಂದಲೇ ಅವರು ಒಬ್ಬ ಉತ್ತಮ ಕವಯತ್ರಿಯಾಗಿ ಕನ್ನಡ ಸಾಹಿತ್ಯದಲ್ಲಿ ನೆಲೆನಿಂತಿದ್ದಾರೆ.

ಅಲ್ಲದೆ ತಮ್ಮ ದುಃಖವನ್ನು ಹೊರಹಾಕುವ ಸಲುವಾಗಿಯೂ ಅವರು ಸಾಹಿತ್ಯವನ್ನು ಬಳಸಿಕೊಂಡಿದ್ದಾರೆ. ಗಂಡನಿಗೆ ಪತ್ರವ್ಯವಹಾರದ ಸಂಗತಿ ಗೊತ್ತಾಗಿ ಇನ್ನು ಮುಂದೆ ಯಾರಿಗೂ ಪತ್ರ ಬರೆಯಬಾರದೆಂದು ಕಟ್ಟಪ್ಪಣೆ ಮಾಡಿದಾಗ ತುಂಬಾ ದುಃಖಿತರಾದ ಪ್ರತಿಭಾ ನಡುರಾತ್ರಿ 'ಉತ್ತರ' ಎನ್ನುವ ಕಥೆ ಬರೆದ ವಿಷಯ ಪ್ರಸ್ತಾಪಿಸಿದ್ದಾರೆ. ಇಲ್ಲಿ ದುಃಖವನ್ನು ಹೊರಹಾಕುವ ಪ್ರಯತ್ನವು ಬರವಣಿಗೆಯ ರೂಪ ಪಡೆದಿರುವುದನ್ನು ಕಾಣಬಹುದು. ಬರವಣಿಗೆಯ ಮುಖಾಂತರ ಪ್ರೀತಿಯ ಭಾವನೆಗಳು ಹೊರಬಿದ್ದ ನಂತರ, ಅದನ್ನು ಓದಿದಾಗ ಬದುಕಿನ ಸಾರ್ಥಕತೆ ಅದರಲ್ಲಿ ಅಡಗಿರುತ್ತದೆ. 'ಇಡೀ ಹೆಣ್ಣಿನ ಬ್ರಹ್ಮಾಂಡವೇ ಪತ್ರಗಳಲ್ಲಿ ಇತ್ತು' ಎಂಬ ಪ್ರತಿಭಾ ಅವರ ಮಾತು ಅವರು ಬರವಣಿಗೆಯನ್ನು ನಂಬಿರುವುದರ ಸಂಕೇತದಂತಿದೆ. ಅಲ್ಲದೆ ಇದು ಬರವಣಿಗೆಗೆ ಇರುವ ಶಕ್ತಿಯ ಸಂಕೇತವೂ ಆಗಿದೆ. ಪ್ರತಿಭಾ ಅವರ ಜೀವನದಲ್ಲಿ ಪತ್ರಗಳೊಂದಿಗೆ ಪ್ರಾರಂಭವಾದ ಸ್ನೇಹವು ಪ್ರೀತಿಯಾಗಿ ಬೆಳೆಯುತ್ತದೆ. ಇಬ್ಬರೂ ಸಂಸಾರ ಉಳ್ಳವರಾದ ಕಾರಣ ಅವರು ಕಡಿವಾಣಕ್ಕೆ, ಕಟ್ಟುಪಾಡಿಗೆ, ಹೊಂದಿಕೊಳ್ಳಬೇಕಾಗಿತ್ತು. ಸಾಮಾಜಿಕ ಕಟ್ಟುಪಾಡನ್ನು ಮೀರಿದಾಗ ಅದು ಸಮಾಜದ ದೃಷ್ಟಿಯಲ್ಲಿ 'ಅನೈತಿಕ' ಸಂಬಂಧ ಎಂದು ಕರೆಸಿಕೊಳ್ಳುವ ಅಪಾಯವೂ ಇತ್ತು. ಆದುದರಿಂದ ಪರಸ್ಪರ ಭಾವನೆಗಳನ್ನು ಬರವಣಿಗೆಯ ಮುಖಾಂತರ ಹಂಚಿಕೊಳ್ಳುವ ರೀತಿಯನ್ನು ಈ ಆತ್ಮಕಥೆಯಲ್ಲಿ ನೋಡಬಹುದು.

ಸಾಹಿತ್ಯ ಲೋಕದೊಂದಿಗೆ ನಂಟನ್ನು ಹೊಂದಿದ್ದ ಪ್ರತಿಭಾ ಬರವಣಿಗೆಯ ಮೂಲಕ ಹಲವಾರು ಸ್ನೇಹಿತರನ್ನು ಪಡೆಯುವುದರ ಜೊತೆಗೆ ಓದುಗರಿಂದ ಹಲವು ರೀತಿಯ ಮೆಚ್ಚುಗೆಗಳನ್ನೂ ಪಡೆದವರು. ಅಂದರೆ ಸಾಹಿತ್ಯ ಲೋಕದಲ್ಲಿನ ಬರಹಗಾರರು ಮತ್ತು ಓದುಗ ವರ್ಗದಿಂದ

ಅಪಾರ ಪ್ರೀತಿಯನ್ನು ಮತ್ತು ಮೆಚ್ಚುಗೆಯನ್ನು ಪಡೆದವರು. ಆದರೆ ಸಾಹಿತ್ಯ ಲೋಕದ ನಿಜವಾದ 'ಬಣ್ಣ'ವು ಅವರು ದೇಹ ಸುಟ್ಟು ಆಸ್ಪತ್ರೆಯಲ್ಲಿದ್ದಾಗ ಬಯಲಾಗುತ್ತದೆ. ಅವರು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿ ಸಹೋದ್ಯೋಗಿಗಳು, ತೀರ ಹತ್ತಿರದ ಗೆಳೆಯರು ಎಲ್ಲರೂ ಬಂದು ಭೇಟಿಮಾಡಿ ಯೋಗಕ್ಷೇಮವನ್ನು ವಿಚಾರಿಸಿ ಹೋಗುತ್ತಾರೆ. ಇದನ್ನು ಬಿಟ್ಟರೆ, ಸಾಹಿತ್ಯಲೋಕದ ಆತ್ಮೀಯರು ಯಾರೂ ಅತ್ತ ಸುಳಿಯುವುದೂ ಇಲ್ಲ. ಇದು ಪ್ರತಿಭಾ ಅವರ ವಿಷಾದಕ್ಕೆ ಕಾರಣವಾಗುತ್ತದೆ. ಅಲ್ಲಿಯವರೆಗೂ ಅವರು ಮಾಡಿದ ಪತ್ರ ವ್ಯವಹಾರ ಬರೀ ಬರವಣಿಗೆಗೆ ಮಾತ್ರ ಸೀಮಿತ ಎಂಬ ವಾಸ್ತವ ಸಂಗತಿ ಅವರ ಗಮನಕ್ಕೆ ಬರುತ್ತದೆ.

ಪ್ರತಿಭಾ ಅವರು ಮನೆಯಿಂದ ಹೊರಬಂದ ಸಮಯವು ಬರವಣಿಗೆ ಲೋಕದಲ್ಲಿ ಶಕ್ತಿಯುತವಾಗಿ ನಿಲ್ಲಲು ಒಂದು ಅಸ್ತ್ರದಂತೆ ಕೆಲಸ ಮಾಡಿದೆ. ಪ್ರತಿಭಾರವರು ಹಲವಾರು ಪತ್ರಿಕೆಗಳಿಗೆ ಕಥೆ, ಲೇಖನಗಳನ್ನು ಬರೆದುಕೊಡುವುದರ ಮೂಲಕ ಜೀವನದ ಭದ್ರತೆಯ ಕಡೆಗೆ ಹೆಚ್ಚು ಗಮನ ಹರಿಸಿರುವುದು ಸ್ಪಷ್ಟವಾಗುತ್ತದೆ. ಪ್ರತಿಭಾ ಅವರ ಬಹುತೇಕ ಕವನಗಳು ಬದುಕಿನ ಅತ್ಯಂತ ಕಷ್ಟದ ದಿನಗಳಲ್ಲಿ ಹೊರ ಬಂದವುಗಳು. ಜೀವನದ ನಲಿವುಗಳಿಗಿಂತ ನೋವುಗಳು ಮತ್ತು ಸವಾಲುಗಳೇ ಸಾಹಿತ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಹಾಗಾಗಿ ಸಾಹಿತ್ಯವು ಕೇವಲ ಸಂತೋಷವನ್ನು ಮಾತ್ರ ನೀಡುವುದಿಲ್ಲ. ಅದು ಬದುಕಿನ ನೋವು, ಸಂಕಟ, ತವಕ–ತಲ್ಲಣಗಳನ್ನು ನೀಡುತ್ತದೆ. ಆ ಮೂಲಕ ಸಾಹಿತ್ಯವು ಮಾನವನ ಅಥವಾ ಸಮಾಜದ ನೋವಿಗೆ ಮಿಡಿಯುವಂತದ್ದಾಗಿದೆ. ಇಲ್ಲಿಯೂ ಕೂಡ ಪ್ರತಿಭಾ ಅವರ ಆತ್ಮಕಥೆಯು ಅವರ ಜೀವನದ ಹಲವು ಆಯಾಮಗಳನ್ನು ನಿರೂಪಿಸುತ್ತದೆ. ಅವರು ಎದುರಿಸಿದ ಅನೇಕ ಕಷ್ಟಗಳು, ಸವಾಲುಗಳು ಹಲವರಿಗೆ ಅನೇಕ ಬಗೆಯಲ್ಲಿ ಸಹಕಾರಿಯಾಗಬಹುದು. ತೀವ್ರವಾಗಿ ಕಾಡುತ್ತಿದ್ದ ಅನೇಕ ಸಮಸ್ಯೆಗಳ ಬಗ್ಗೆ ಹಲವು ಪತ್ರಿಕೆಗಳಲ್ಲಿ ಬರೆದು ಹಲವಾರು ರೀತಿಯ ಮೆಚ್ಚುಗೆ ಮತ್ತು ಟೀಕೆಗೆ ಒಳಗಾದರೂ, ಅವರ ವ್ಯಕ್ತಿ ಸ್ವಾತಂತ್ರ್ಯದ ಧೋರಣೆಯು ಬರವಣಿಗೆಯ ಮೂಲಕ ವ್ಯಕ್ತವಾಗುವುದನ್ನು ಕಾಣಬಹುದು. ಬದುಕಿಗೆ ಒಂದು ತಿರುವನ್ನು ನೀಡುವಲ್ಲಿ ಬರವಣಿಗೆಯು ಒಂದು ಸಾಧನವಾಗಿ ಕೆಲಸ ಮಾಡಿರುವುದನ್ನು ಕಾಣಬಹುದು.

೩.೬. ಬರಹಗಾರ್ತಿ ಮತ್ತು ವೃತ್ತಿಯ ಜೊತೆಗಿನ ಸಂಬಂಧ

ಪ್ರಸ್ತುತ ಆತ್ಮಕಥೆಯ ಲೇಖಕಿ ಪ್ರತಿಭಾ ನಂದಕುಮಾರ್ ಅವರ ವೃತ್ತಿ ಬದುಕನ್ನು ಹಲವು ಆಯಾಮಗಳಲ್ಲಿ ನೋಡಬಹುದು. ಅವರ ವೃತ್ತಿ ಬದುಕಿಗೂ ಮತ್ತು ಅವರ ಬದುಕಿನಲ್ಲಾದ ಅನೇಕ ಬಗೆಯ ಪಲ್ಲಟಗಳಿಗೂ ಆಂತರಿಕ ಸಂಬಂಧಗಳಿವೆ. ಅವರು ಫ್ಯಾಕ್ಟರಿ ಕೆಲಸಕ್ಕೆ ಹೋದಾಗ ಮನೆಯಲ್ಲಿನ ಕಷ್ಟ ನೋವುಗಳನ್ನು ಮರೆತು ಸಹೋದ್ಯೋಗಿಗಳೊಂದಿಗೆ ಕಾಲ ಕಳೆಯುವುದು ಸಮಾಧಾನ ಉಂಟು ಮಾಡುತ್ತದೆ. ಸಹೋದ್ಯೋಗಿಗಳು ಕಷ್ಟದ ಕಾಲದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಿ ಸ್ನೇಹದ ಅರ್ಥ ಉಳಿಸಿಕೊಳ್ಳುವುದನ್ನು ಕಾಣುತ್ತೇವೆ.

ಆಸ್ಪತ್ರೆಯಲ್ಲಿದ್ದಾಗ ಪ್ಯಾಕ್ಟರಿ ಸಹೋದ್ಯೋಗಿಗಳು ಬಂದು ವಿಚಾರ ಮಾಡುತ್ತಿದ್ದದ್ದು ಮನಸ್ಸಿಗೆ ಸಮಾದಾನ ತರುವ ವಿಷಯ. ಇದೇ ಕಾಲಕ್ಕೆ ಅವರು ಬರವಣಿಗೆಯನ್ನೂ ಕೂಡ ಒಂದು ವೃತ್ತಿಯಾಗಿ ಸ್ವೀಕರಿಸಿದ್ದರೂ ಅದರ ಸ್ವರೂಪವು ಸಂಪೂರ್ಣ ಭಿನ್ನವಾಗಿರುವಿರುದನ್ನು ನೋಡಬಹುದು. ಮನೆಯಿಂದ ಹೊರಬಿದ್ದಾಗ ಒಂಟಿಯಾಗಿ ವೃತ್ತಿಯನ್ನು ನಿಭಾಯಿಸುವುದರ ಜೊತೆಗೆ ಮಕ್ಕಳನ್ನು ನಿಭಾಯಿಸಿರುವ ಬಗೆಯು ಅವರು ಬದುಕನ್ನು ಪ್ರೀತಿಸುವ ವಿಧಾನವನ್ನು ತಿಳಿಸುತ್ತದೆ. ಬರವಣಿಗೆಯೂ ಒಂದು ವೃತ್ತಿಯೆಂದೇ ಭಾವಿಸಿ ಹಗಲು ರಾತ್ರಿ ಶ್ರಮಿಸಿದ್ದಾರೆ. ಕೆಲಸಕ್ಕೆ ರಜೆ ಹಾಕಿ ಉಳಿದ ಕೆಲಸಗಳ ನಿರ್ವಹಣೆ ಮಾಡುವುದೂ ಸೇರಿದೆ. ಮನೆ ಕೆಲಸ ಪೂರೈಸಲು ಸಾದ್ಯವಾಗದೇ ತಡವಾಗಿ ಪ್ರತಿದಿನ ಕೆಲಸಕ್ಕೆ ಹೋದಾಗ ಸಂಬಳ ಕಟ್ ಆಗುತ್ತಿದ್ದು, ಒಂದೇ ಒಂದು ತಿಂಗಳೂ ಪೂರ್ತಿ ಸಂಬಳ ತೆಗೆದು ಕೊಳ್ಳಲಿಲ್ಲ ಎಂದು ಹೇಳುವ ಧ್ವನಿಯಲ್ಲಿ ಕೆಲಸದ ಒತ್ತಡದ ನೋವನ್ನು ಕಾಣಬಹುದು. ಹೀಗೆ ವೃತ್ತಿಯನ್ನೂ ಮತ್ತು ಜೀವನವನ್ನು ಅವರು ಸರಿಯಾದ ರೀತಿಯಲ್ಲಿ ನಿಭಾಯಿಸಿದ್ದಾರೆ.

೩.೭. ಬರಹಗಾರ್ತಿ ಮತ್ತು ಪ್ರೀತಿಯ ಹುಡುಕಾಟ

ಪ್ರೀತಿಗಾಗಿ ಹುಡುಕಾಟ. ಇದು ಪ್ರತಿಭಾರ ಜೀವನದ ಬಹು ಮುಖ್ಯ ಅಂಶವಾಗಿದೆ. ಆತ್ಮಕಥೆಯುದ್ದಕ್ಕೂ ಪ್ರೀತಿಗಾಗಿ ಹುಡುಕಾಟ ಮಾಡಿರುವ ಘಟನೆಗಳೇ ಹೆಚ್ಚಾಗಿವೆ. ಇದನ್ನು ನೋಡಿದಾಗ ಜೀವನದಲ್ಲಿ ಅವರು ಪ್ರೀತಿಗೆ ನೀಡಿರುವ ಪ್ರಾಮುಖ್ಯತೆ ಅರ್ಥವಾಗುತ್ತದೆ. ಅವರು ಪ್ರೀತಿಗಾಗಿ ಹುಡುಕಾಟ ನಡೆಸುವ ಹಲವಾರು ಬಗೆಗಳನ್ನು ಅವರ ಆತ್ಮಕಥೆಯಲ್ಲಿ ಕಾಣಬಹುದು. ಅಷ್ಟಾದರೂ ಪರಿಪೂರ್ಣ ಪ್ರೀತಿ ದೊರೆಯದೇ ಹೋಗುತ್ತದೆ. ಇಂತಹ ಸಂದರ್ಭಗಳಲ್ಲಿ ಅವರು ಇರುವ ಪ್ರೀತಿಯಲ್ಲೇ ಸಂತೃಪ್ತಿ ಕಾಣಬೇಕು ಎಂಬ ಆಶಾವಾದವನ್ನು ತೋರ್ಪಡಿಸುತ್ತಾರೆ. ಆದರೂ ಅವರ ಪ್ರೀತಿಯ ಹುಡುಕಾಟ ವಿಶಿಷ್ಟ ಬಗೆಯದೇ ಆಗಿದೆ.

ಪ್ರೀತಿಯನ್ನು ಅತಿಯಾಗಿ ಶೋಧಿಸುತ್ತಿದ್ದ ಅವರು ಅವನ ಗೆಳೆಯನನ್ನು ಕುರಿತು ಆಡುವ ಮಾತು ಬಹಳ ಮುಖ್ಯವಾದುದಾಗಿದೆ. "ಪ್ರೀತಿಯ ಬೆಲೆ ನಿನಗೆ ಗೊತ್ತಾಗಿಲ್ಲ. ಸಿಕ್ಕ ಪ್ರೀತಿಯನ್ನು ಕಳೆದುಕೊಂಡಾಗ ಮಾತ್ರ ಅದರ ಬೆಲೆ ಗೊತ್ತಾಗೋದು" ಆದರೆ ಸಮಾಜದಲ್ಲಿನ ಪ್ರೀತಿಯ ಸ್ವರೂಪವೇ ಬೇರೆ ಅವರು ಶೋಧಿಸ ಹೊರಟ ಪ್ರೀತಿಯ ಸ್ವರೂಪವೇ ಬೇರೆ. ಅವರ ದೃಷ್ಟಿಯಲ್ಲಿ ಪ್ರೀತಿಯು ಮೂಲಭೂತ ಅವಶ್ಯಕತೆಗಳಷ್ಟೇ ಮುಖ್ಯವಾದ ಸಂಗತಿ. ಪ್ರೀತಿಯ ಅರ್ಥ ವ್ಯಾಖ್ಯಾನ ಸರಿಯಾಗಿ ಗೊತ್ತಿರದ ವಯಸ್ಸಿನಲ್ಲಿ ಅದರ ಅರ್ಥವಾಗುವುದು ಅನುಭವದಿಂದ. ಪಕ್ವತೆಯ ಕಾಲ ಬಂದಾಗ ಪ್ರೀತಿಯು ಸ್ಪಷ್ಟವಾಗಿ ಅರ್ಥವಾಗುತ್ತದೆ ಎಂಬುದು ಪ್ರತಿಭಾ ಅವರ ನಿಲುವಾಗಿದೆ. "ನೀನು ಜಗನ್ಮಾತೆ ಎಲ್ಲರನ್ನೂ ಪ್ರೀತಿಸುತ್ತೀಯ?. ಮರಳಿ ಎಷ್ಟು ಜನ ನಿನಗೆ ಅದೇ ಪ್ರೀತಿ ಕೊಟ್ಟಿದ್ದಾರೆ?. ಪ್ರೀತಿ ಸೌದ ಅಲ್ಲ. ವ್ಯಾಪಾರ ಅಲ್ಲ.' ಎಂಬ ಸ್ನೇಹಿತನ ಮಾತಿನಂತೆ ಅವರು ಜೀವನ ಪೂರ್ತಿ ಪ್ರೀತಿಗಾಗಿ ಹುಡುಕಾಟ ನಡೆಸಿದರೂ ಕೊನೆಯವರೆಗೂ ಅವರು ಬಯಸಿದ ಪ್ರೀತಿಯು ದೊರೆಯುವುದೇ ಇಲ್ಲ.

ಬಾಲ್ಯದಿಂದಲೂ ಕುರೂಪಿ ಎಂಬ ಮನೋಭಾವ ತಳೆದಿದ್ದ ಪ್ರತಿಭಾರಿಗೆ ಅವರ ಪ್ರೀತಿಯನ್ನು ಸ್ವೀಕರಿಸುವವರು ಯಾರೂ ಇಲ್ಲ ಎಂಬ ಭಾವನೆ ಕಾಡಿರುವುದು ನಿಜ. ತಾರುಣ್ಯಕ್ಕೆ ಕಾಲಿಡುತ್ತಿದ್ದಂತೆ ಪ್ರೀತಿಯನ್ನು ಹಂಚಿಕೆ ಮಾಡಿಕೊಳ್ಳುವ ಸಲುವಾಗಿ ಹುಡುಕಾಟ ಪ್ರಾರಂಭವಾಗುವುದನ್ನು ಅವರ ಜೀವನದಲ್ಲಿ ಕಾಣಬಹುದು. "ಪ್ರೀತಿ ಅಪಾತ್ರನಿಗೆ ದಾನವಾಗಬಾರದು. ಯಾರು ನನ್ನನ್ನು ಗಾಢವಾಗಿ ಪ್ರೀತಿಸುತ್ತಾರೋ ಅವರನ್ನೇ ನಾನು ಪ್ರೀತಿಸಬೇಕು. ಇಲ್ಲದಿದ್ದರೆ ಕೊನೆಯವರೆಗೂ ಈ ಹಪಾಹಪಿ ಮುಗಿಯವುದಿಲ್ಲ. ಇನ್ನು ಮುಂದೆ ಪ್ರೀತಿ ಕೊಡುವುದಿಲ್ಲ, ಪಡೆಯುತ್ತೇನೆ. ಎಂದು ಪ್ರತಿಜ್ಞೆ ಮಾಡಿದೆ" ಎಂಬ ಅವರ ಮಾತಿನಲ್ಲಿ ಪ್ರೀತಿಯ ಬಗ್ಗೆ ಅವರು ಹೊಂದಿದ್ದ ಧೋರಣೆಯನ್ನು ಕಾಣಬಹುದು. ಅದು ತೀವ್ರವಾದ ಪ್ರೀತಿಯ ಹುಡುಕಾಟದಲ್ಲಿ ಸೋತು ನೊಂದು ನುಡಿದ ಮಾತಿನಂತೆ ಕಾಣುತ್ತದೆ. ಆ ತೀವ್ರತೆ ಅವರು ಪ್ರೀತಿಯನ್ನು ಕೊಡುವಲ್ಲಿಗೆ ಮುಗಿಯುವುದಿಲ್ಲ ಬದಲಾಗಿ ಇನ್ನು ಮುಂದೆ ಪಡೆಯುವ ಸಲುವಾಗಿ ಮುಂದುವರೆಯುತ್ತದೆ. ಅಂದರೆ ಅವರ ಪ್ರೀತಿಯ ಹುಡುಕಾಟ ಎಂಬುದು ಎಂದೂ ನಿಲ್ಲದ ಒಂದು ನಿರಂತರ ಪ್ರಕ್ರಿಯೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಈ ರೀತಿಯ ಪ್ರೀತಿಯನ್ನು ನಿರಂತರವಾಗಿ ಹುಡುಕಾಡಿದ ಪ್ರತಿಭಾ ಅವರಿಗೆ 'ಪ್ರೀತಿಯ ತಿರಸ್ಕಾರದ ಭಯ' ಯಾವಾಗಲೂ ಕಾಡುತ್ತದೆ. ಇದು ಪ್ರೀತಿಯನ್ನು ಪಡೆಯಲು ಬಯಸು ವವರಿಗೆ ಮತ್ತೊಂದು ಆತಂಕವಾಗಿರುತ್ತದೆ. ಅದು ಪ್ರೀತಿಯ ತಿರಸ್ಕಾರದ ಭಯ. ತಾನು ಬಯಸಿದ ಪ್ರೀತಿ ತಿರಸ್ಕಾರಗೊಂಡಾಗ ಅದರಿಂದ ಉಂಟಾಗುವ ನೋವು ಅಪಾರ. ಬುದ್ದನ ಜೀವನ ಪ್ರೀತಿ ಎಂತಹದು ಎಂಬುದನ್ನು ಗಮನಿಸಿದಾಗ ಅತಿ ಆಸೆಯನ್ನು ಬಿಡಬೇಕು ಎಂದಿದ್ದಾನೆ. ಬುದ್ದನ ಶಿಷ್ಯ ಆನಂದನನ್ನು ವರಿಸಿ ಬಂದ ಹೆಣ್ಣೊಬ್ಬಳು ಅವಳ ಪ್ರೀತಿ ತಿರಸ್ಕಾರವಾದಾಗ, ತಲೆ ಬೋಳಿಸಿಕೊಂಡು ಬಿಳಿಬಟ್ಟೆ ತೊಟ್ಟು ಭಿಕ್ಷುಣಿಯಾದಳು. ಆದರೆ ಆನಂದ ಇದನ್ನು ಬಯಸಿರಲಿಲ್ಲ. ಇಲ್ಲಿ ಅವಳ ಪ್ರೀತಿಯು ಅವಳಿಗೆ ಕ್ರೂರವಾಗಿರುವುದು ಗೊತ್ತಾಗುತ್ತದೆ. ಹಾಗೆಯೇ ಪ್ರೀತಿಯಲ್ಲಿ ಎಂತಹ ಕ್ರೌರ್ಯ ಅಡಗಿರುತ್ತದೆ ಎಂದು ತಿಳಿಯುವುದು ತುಂಬಾ ಕಷ್ಟ. ಆಸೆಯಿಲ್ಲದಿದ್ದರೆ ಯಾವ ತೊಂದರೆಯೂ ಆಗುವುದಿಲ್ಲ ಎಂಬ ಆಶಯವನ್ನು ಪ್ರತಿಭಾ ಅವರು ವ್ಯಕ್ತಪಡಿಸುತ್ತಾರೆ.

ಹಾಗೆಯೇ ರಾಮಾಯಣದಲ್ಲಿ ಸೀತೆಯ ಮೇಲೆ ರಾಮನ ಪ್ರೀತಿ ಹೆಚ್ಚೋ? ರಾವಣದ್ದೋ? ಕಳೆದು ಹೋದವಳನ್ನು ಹುಡುಕಿಕೊಂಡು ಹೋಗಿ ಯುದ್ಧ ಮಾಡಿ ವಾಪಸ್ಸು ತಂದ ಪ್ರೀತಿ ಹೆಚ್ಚೋ. ಇಲ್ಲ ಸೀತೆಗಾಗಿ ಜೀವ, ಎಲ್ಲವನ್ನೂ ಕಳೆದುಕೊಂಡ ರಾವಣನ ಪ್ರೀತಿ ಹೆಚ್ಚೋ?. ಎಂಬ ಪ್ರಶ್ನೆಗಳು ಎದ್ದಾಗ ನೀತಿ ಅನೀತಿಯ ಪ್ರಶ್ನೆ ಮೂಡುತ್ತದೆ. ಇಲ್ಲಿ ಪ್ರೀತಿಯು ಅನೇಕ ರೂಪಗಳಲ್ಲಿ ಮನುಷ್ಯನ ಜೀವನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ರಾವಣನನ್ನು ಗೆದ್ದು ಮತ್ತೆ ಪಟ್ಟಕ್ಕೇರಿದ ನಂತರ ಸೀತೆಯು ಬರೀ ನೆನಪಿನ ಮೂಲಕವೇ ರಾವಣನ ಚಿತ್ರವನ್ನು

ಜಿಡಿಸಿದಳಂತೆ. ಅವಳ ಪ್ರೀತಿ ರಾಮನ ಮೇಲೋ ಅಥವಾ ರಾವಣನ ಮೇಲೋ ಎಂಬ ಧೋರಣೆ ಇಲ್ಲಿ ವ್ಯಕ್ತವಾಗುತ್ತದೆ. ಅದನ್ನು ಪ್ರತಿಭಾ ಅವರು ಧ್ವನಿಯಾಗಿ ತಮ್ಮ ನಿರೂಪಣೆಯಲ್ಲಿ ತಂದಿದ್ದಾರೆ. ಆದುದರಿಂದ ಅವರ ಆತ್ಮಕಥೆಯನ್ನು ಕಥನಕ್ರಮದ ವಿನ್ಯಾಸ ಮೂಲಕ ನೋಡಬೇಕಾಗುತ್ತದೆ. ಅದಕ್ಕಾಗಿ ಈ ಅಧ್ಯಯನವನ್ನೂ ಅದೇ ಕ್ರಮದಲ್ಲಿ ನೋಡುವ ಪ್ರಯತ್ನವನ್ನು ಮಾಡಲಾಗಿದೆ.

ಪ್ರತಿಭಾ ಅವರ ಪ್ರೀತಿಯ ಸ್ವರೂಪವು ಎಂಥ ವಿಶಿಷ್ಟ ಮತ್ತು ವಿಚಿತ್ರವಾದುದು ಎಂದರೆ ಅವರು ಅವರಿಗಿಂತ ಅರ್ಧದಷ್ಟು ಹೆಚ್ಚು ವಯಸ್ಸಿನವರನ್ನು ಪ್ರೀತಿಸಲು ಪ್ರಾರಂಭಿಸುತ್ತಾರೆ. ಆದರೆ ಇದನ್ನು 'ನೈತಿಕ' ಮತ್ತು 'ಅನೈತಿಕ' ಚೌಕಟ್ಟುಗಳಲ್ಲಿ ಇಟ್ಟು ನೋಡಲು ಬರುವುದಿಲ್ಲ. ಅವರ ಪ್ರೀತಿಯ ಹುಡುಕಾಟವು ಹೀಗೆ ಅನೇಕ ಬಗೆಯ ವೈರುಧ್ಯಗಳಿಂದ ಕೂಡಿದ್ದರೂ ಅದನ್ನು ಅವರ ಮಾನಸಿಕ ತೊಳಲಾಟ ಮತ್ತು ಪ್ರೀತಿಯಿಂದ ವಂಚಿತವಾದ ಸಂಕಟ ಎಂದು ನೋಡಬಹುದಾಗಿದೆ. ಅವರ ಪ್ರೀತಿಯು ವಯಸ್ಸಿನ ಮಿತಿಯನ್ನು ಮೀರಿದುದಾಗಿದೆ. ಹಾಗೆ ವಯಸ್ಸಿನ ಮಿತಿಯನ್ನು ಮೀರಿರುವುದರಲ್ಲಿಯೇ ಅವರ ಪ್ರೀತಿಯು ನಿಜವಾಗಿಯೂ 'ಅನೈತಿಕ'ವಾದುದಲ್ಲ ಎಂಬುದನ್ನು ತೋರಿಸಿಕೊಡುತ್ತದೆ. ಅದು ಕೇವಲ ದೈಹಿಕ ಆಕರ್ಷಣೆ ಮಾತ್ರವಾಗಿರದೆ ಮಾನಸಿಕ ತೊಳಲಾಟ, ಆ ಮಾನಸಿಕವಾದ ಬಯಕೆಗಳನ್ನು ತೋರಿಸಿಕೊಡುತ್ತದೆ. ಹಾಗಾಗಿ ಅವರು ಬಯಸುವ ಪ್ರೀತಿಗೂ ಕೂಡ ಯಾವುದೇ ವಯಸ್ಸಿನ ಅಡಚಣೆ ಇಲ್ಲ ಎಂಬುದನ್ನು ತೋರಿಸಿಕೊಡುತ್ತದೆ. ಒಂದು ವೇಳೆ ವಯಸ್ಸು ನೋಡಿಯೇ ಅವರು ಪ್ರೀತಿಯನ್ನು ಬಯಸಿದ್ದರೆ ಅದು ದೈಹಿಕ ಎನ್ನಬಹುದಾದ ಆಕರ್ಷಣೆ ಎನಿಸಿಕೊಳ್ಳುತ್ತಿತ್ತೇನೋ. ಅವರ ಪ್ರೀತಿಯ ಹುಡುಕಾಟದಲ್ಲಿ ವಯಸ್ಸು ಎಂಬುದು ಒಂದು ಮುಖ್ಯವಾದ ವಿಷಯವೇ ಆಗುವುದಿಲ್ಲ.

'ನಾಯಿಗೆ ನಿನ್ನಷ್ಟು ಪ್ರೀತಿ ಬರುವುದಿಲ್ಲ'. ಇಲ್ಲಿ ಪ್ರತಿಭಾ ಅವರ ಪ್ರೀತಿಯ ನಿವೇದನೆಯು, ಪುಟ್ಟ ನಾಯಿಮರಿಯೊಂದು ಕಣ್ಣು ತುಂಬಾ ನಿರೀಕ್ಷೆಯನ್ನಿಟ್ಟುಕೊಂಡು ಆಸೆಯಿಂದ ನೋಡುತ್ತಿರುವ ಹಾಗೆ ಪ್ರೀತಿಯನ್ನು ಅವರಿಂದ ಬಯಸಿದಾಗ, ಅವರಿಂದ ಬಂದ ಉತ್ತರ ಇದಾಗಿದೆ. ಅಂದರೆ ಪ್ರತಿಭಾ ಅವರ ಪ್ರೀತಿಯು ಅಷ್ಟು ನಿಯತ್ತಾಗಿತ್ತು. ಅದರಲ್ಲಿ ಯಾವುದೇ ರೀತಿಯ ಮೋಸ, ವಂಚನೆ ನಿರೀಕ್ಷೆಗಳಿರಲಿಲ್ಲ. ಕೇವಲ ಪ್ರೀತಿಯನ್ನು ಪಡೆಯುವುದಷ್ಟೇ ಮುಖ್ಯವಾಗಿತ್ತೆಂದು ತೋರುತ್ತದೆ. ಒಳ್ಳೆಯ ಕವಯತ್ರಿಯಾಗಿದ್ದ ಪ್ರತಿಭಾ ಅವರು ತಮ್ಮ ಭಾವನೆಗಳಿಗೆ ಕವನಗಳ ರೂಪ ಕೊಟ್ಟವರು. ಬರವಣಿಗೆಯ ಮುಖಾಂತರ ಪ್ರೀತಿಯ ನಿವೇದನೆಯನ್ನು ಮಾಡಿಕೊಂಡವರು. ಯಾವುದೇ ನಿರೀಕ್ಷೆಗಳನ್ನಿಟ್ಟುಕೊಳ್ಳದೆ 'ನನ್ನ ಪ್ರೀತಿ ಸ್ವೀಕರಿಸಿ, ಸಾಕು' ಎಂಬ ಮಾತಿನಲ್ಲಿ ಪ್ರತಿಭಾ ಅವರ ಪ್ರೀತಿಯ ಬಯಕೆ, ಹಂಬಲ, ಅದರ ಹುಡುಕಾಟ ವ್ಯಕ್ತವಾಗುತ್ತದೆ.

'ಹೆಣ್ಣಿನ ಪ್ರೀತಿಗೆ ಹೆದರುವಷ್ಟು ಅವಳ ದ್ವೇಷಕ್ಕೆ ಹೆದರುವುದಿಲ್ಲ ಗಂಡು' ಇದು ಪ್ರತಿಭಾ ಅವರ ಪ್ರೀತಿಯನ್ನು ಕುರಿತಾದ ಅತ್ಯಂತ ಮುಖ್ಯವಾದ ಮಾತಾಗಿದೆ. ಇದು ಹೆಣ್ಣು ಗಂಡಿನ

ನಡುವಿನ ಪ್ರೀತಿಯ ಸ್ವರೂಪವನ್ನು ಹಲವು ನೆಲೆಗಳಲ್ಲಿ ಅರ್ಥೈಸುತ್ತದೆ. ಈ ಒಂದು ಮಾತಿನಿಂದಲೇ ಅನೇಕ ಅರ್ಥಗಳನ್ನು ಈ ಆತ್ಮಕಥೆಯಲ್ಲಿ ಅವರು ತುಂಬಿದ್ದಾರೆ. ಈ ರೀತಿಯ ಬರವಣಿಗೆಯು ಅವರ ಅನುಭವದ ಪಕ್ವತೆಯನ್ನು ತೋರಿಸಿಕೊಡುತ್ತದೆ. ವಯಸ್ಸಿನ ಮಿತಿಯಿಲ್ಲದೆ, ಪ್ರತಿಭಾಗಿಂತಲೂ ಅರ್ಧದಷ್ಟು ಹೆಚ್ಚಿರುವ ವ್ಯಕ್ತಿಯನ್ನು ಪ್ರೀತಿಸಬಯಸುವುದು, ಆ ವ್ಯಕ್ತಿಯಿಂದ ಪ್ರೀತಿಯನ್ನು ಅಪೇಕ್ಷಿಸಿರುವುದು ಪ್ರೀತಿಗೆ ವಯಸ್ಸು ಮುಖ್ಯವಾಗುವುದಿಲ್ಲ ಎಂಬುದನ್ನು ತೋರಿಸುತ್ತದೆ. ಹಾಗೆಯೇ ಆ ವ್ಯಕ್ತಿಗೆ ಮದುವೆಯಾಗಿ ಮಕ್ಕಳಿದ್ದರೂ ಪ್ರೀತಿಯ ಬಯಕೆ ಇದೆ. ಹಾಗೆಯೇ ಆ ವ್ಯಕ್ತಿಯು ಬೇರೆ ಹೆಣ್ಣುಗಳ ಜೊತೆಗೆ ಸಂಬಂಧ ಹೊಂದಿದ್ದಾರೆ ಎಂಬ ವಿಷಯ ತಿಳಿದಿದ್ದರೂ, ಆ ವ್ಯಕ್ತಿಯಿಂದ ಪ್ರೀತಿ ಬಯಸುವುದನ್ನು ಕಾಣುತ್ತೇವೆ. ಇಲ್ಲಿ ವ್ಯಕ್ತಿ ಮುಖ್ಯವಾಗಿದೆಯೇ ಹೊರತು, ಆ ವ್ಯಕ್ತಿಯ ಇತರ ಚಟುವಟಿಕೆಗಳಲ್ಲ. ಇಲ್ಲಿ ಸಮಾಜದ ಕಟ್ಟುಪಾಡುಗಳು ಮುಖ್ಯವಾಗುವುದಿಲ್ಲ. ಹೆಚ್ಚಿನ ಗಮನ ಕೇಂದ್ರೀಕರಣ ಪ್ರೀತಿಯ ಪಡೆಯುವಿಕೆಯೇ ಆಗಿದೆ. ಸಮಾಜದ ದೃಷ್ಟಿಯಲ್ಲಿ ಇದು 'ಹಾದರ' ಎಂದು ಎನಿಸಿದರೂ ಅವರ ಭಾವನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಬೇಕು ಎಂಬ ನಿಲುವು ಪ್ರತಿಭಾರದಾಗಿದೆ. ಹಾಗಾಗಿಯೇ ಪ್ರತಿಭಾ ಅವರು 'ಪ್ರೀತಿ ಎನ್ನುವುದು ಗಾಳಿಯನ್ನು ಆಲಂಗಿಸುವ ಪೊಳ್ಳು ಸುಖವಲ್ಲ.' ಎಂದು ಹೇಳುತ್ತಾರೆ. 'ಗಾಳಿಯನ್ನು ಆಲಂಗಿಸುವುದು' ಎಂದರೆ ಗಾಳಿಯಂತಿರುವ ಇದ್ದೂ ಇಲ್ಲದಂತಿರುವ ಪ್ರೀತಿಯನ್ನು ಅಪ್ಪಿದಂತೆ ಎಂದು ಅರ್ಥವಾಗುತ್ತದೆ. ಪ್ರತಿಭಾ ಅವರು ಸ್ವತಃ ಕವಯತ್ರಿ ಆದುದರಿಂದ ಈ ರೀತಿಯ ಕಾವ್ಯಮಯವಾದ ನಿರೂಪಣೆಯನ್ನು ಆತ್ಮಕಥೆಯ ಉದ್ದಕ್ಕೂ ನಾವು ಕಾಣಬಹುದು.

ಪ್ರೀತಿ ಎನ್ನುವುದು ಕೇವಲ ಸುಖವನ್ನು ಅರಸುವುದಾಗಿರದೆ, ಅದು ಒಂದು ರೀತಿಯ ಭಾವನೆ, ಅರಿವು ಎಂಬಂತಾಗಿದೆ. 'ಅವರು' ಎನ್ನುವ ವ್ಯಕ್ತಿಗೆ ಅನೇಕ ಪ್ರೇಯಸಿಯರಿದ್ದರು, ವಿಚ್ಛೇದನವಾಗಿ ಮತ್ತೆ ಅವಳನ್ನೇ ಮದುವೆಯಾಗಿದ್ದರು. ಒಬ್ಬ ಮಗ ಮತ್ತು ಮಗಳು ಇದ್ದರು. ಇದೂ ಸಾಲದು ಎಂಬಂತೆ ಒಬ್ಬ ಗೆಳತಿಯೂ ಇದ್ದಳು. ಇಷ್ಟೆಲ್ಲಾ ಇದ್ದರೂ ಆ ವ್ಯಕ್ತಿಯ ಪ್ರೀತಿಯನ್ನು ಬಯಸುವುದು ಲೋಕದ ಕಣ್ಣಿಗೆ ಮೂರ್ಖತನವಾಗಿ ಕಾಣಿಸುತ್ತದೆ. ಆದರೆ ಪ್ರತಿಭಾರು ಮಾತ್ರ 'ಅವರ ಪ್ರೀತಿಯನ್ನು ಪಡೆಯಲು ಜಲಪಾತದಂತೆ ಭೋರ್ಗರೆಯುತ್ತಿದ್ದೆ' ಎಂದಿದ್ದಾರೆ. ಇದು ಒಂದು ರೀತಿಯ ವಿಚಿತ್ರ ಪ್ರೀತಿಯೆಂದೇ ಹೇಳಬೇಕು. ಇಲ್ಲಿ ಪ್ರತಿಭಾ ಪ್ರೀತಿಯನ್ನು ಗೌಪ್ಯವಾಗಿಡುವ ಗೋಜಿಗೆ ಹೋಗದೆ, ಇಡೀ ಜಗತ್ತಿಗೆ ಕೂಗಿ ಕೂಗಿ ಹೇಳುವಷ್ಟು ಭರವಸೆ ಹೊಂದಿರುವುದು ಅವರ ಧೈರ್ಯದ ಜೊತೆಗೆ ಪ್ರೀತಿಯ ಬಗ್ಗೆ ಅವರಿಗಿರುವ ನಿಷ್ಕಲ್ಮಶ ಭಾವವನ್ನೂ ತೋರಿಸಿಕೊಡುತ್ತದೆ.

ಮನೆಯಲ್ಲಿ ಗಂಡನ ಜೊತೆಗೆ ಸದಾ ಜಗಳ ಅನುಮಾನ ಕೋಪ, ಅಳು, ಕಿರುಚಾಟಗಳನ್ನು ಸಹಿಸಲು ಶಕ್ತಿ ಕೊಡುತ್ತಿದ್ದ ಒಂದೇ ಒಂದು ಸಾಧನವೆಂದರೆ, ಅವರ ಸ್ನೇಹ ಎಂದು ಅವರೇ ಹೇಳಿಕೊಂಡಿದ್ದಾರೆ. ಇಲ್ಲಿ ಜೀವನದಲ್ಲಿ ಕಷ್ಟ ಅನುಭವಿಸುತ್ತಿರುವ ಮನಸ್ಸು ನೆಮ್ಮದಿಯನ್ನು

ಪಡೆಯಲು ಮತ್ತೊಂದು ಮನಸ್ಸನ್ನು ಹರಸಿ ಹೋಗುವಂತಹ ಸಾಮಾನ್ಯ ನಿಲುವಿದೆ. ಅದೇಕೋ ಅವರಿಗೆ ತಮ್ಮ ಸಂಸಾರಕ್ಕಿಂತಲೂ ಸ್ನೇಹವೇ ಹಿತವಾಗಿ ಕಾಣಿಸಿದೆ. ಆದರೆ ಅವರು ಯಾರನ್ನು ಸ್ನೇಹಿತರನ್ನಾಗಿ ಪಡೆಯಲು ಹವಣಿಸುತ್ತಾರೋ ಅವರು ಎಂದಿಗೂ ಅವರನ್ನು ಅವರಷ್ಟೇ ತೀವ್ರವಾಗಿ ಇಷ್ಟಪಡುವುದಿಲ್ಲ. ಇದೊಂದು ವೈರುಧ್ಯದಂತೆ ಅವರ ಜೀವನ ಪೂರ್ತಿ ಕಾಣುತ್ತದೆ.

'ಪ್ರೀತಿಗಾಗಿ ಸದಾ ಹಂಬಲಿಸುವ ನನಗೆ ಹಸಿದ ನಾಯಿಯನ್ನು ಕರೆದು ಯಾರಾದರೂ ಒಂದು ಚೂರು ಬ್ರೆಡ್ಡು ಕೊಟ್ಟರೂ ಧನ್ಯತೆಯಿಂದ ತಿನ್ನುವಂತೆ ಆಗಿತ್ತು' ಎನ್ನುವಂತ ಅವರ ಮಾತುಗಳು ಪ್ರೀತಿಯು ಅವರನ್ನು ಕಾಡಿರುವ ಪರಿಯನ್ನು ತೋರಿಸಿಕೊಡುತ್ತದೆ. ಪ್ರೀಯಿಗಾಗಿ, ಪ್ರೀತಿಯ ಮುಂದೆ ಅವರು ತಮ್ಮನ್ನು ತಾವು ಯಾವ ಹಂತಕ್ಕೆ ಬೇಕಾದರೂ ಇಳಿಸಿಕೊಳ್ಳಲೂ ಹಿಂಜರಿಯುವುದಿಲ್ಲ. ಆ ಪ್ರೀತಿಯ ಹುಡುಕಾಟದ ಮುಂದೆ ತಮ್ಮನ್ನು ತಾವು ಹಸಿದ ನಾಯಿಗೆ ಹೋಲಿಸಿಕೊಂಡಿದ್ದಾರೆ. ಹಸಿದ ನಾಯಿಯಾದರೋ ಅನ್ನಕ್ಕಾಗಿ ಸದಾ ಕಾಯ್ದು ಕುಳಿತುಕೊಳ್ಳುವಂತೆ ತಾವೂ ಸಹ ಪ್ರೀತಿಯನ್ನು ಎದುರುನೋಡುತ್ತಾ ಕುಳಿತಿರುವುದಾಗಿ ಅವರು ಹೇಳಿಕೊಂಡಿದ್ದಾರೆ. ಅವರ ಇಂತಹ ಮಾತುಗಳೇ ಅವರ ಪ್ರೀತಿಯ ಸ್ವರೂಪವನ್ನು ತಿಳಿಸಿಕೊಡುತ್ತವೆ. ಇಲ್ಲಿ ಪ್ರತಿಭಾರ ಪ್ರೀತಿಯ ಹಸಿವು ಪರಿಣಾಮಕಾರಿಯಾಗಿ ವ್ಯಕ್ತವಾಗುತ್ತದೆ. ಮನೆಯ ಜಂಜಾಟದಲ್ಲಿ ಬೇಸತ್ತು ಹೋಗಿರುವ ಇವರು ಯಾರಾದರೂ ತನ್ನ ಪ್ರೀತಿಯನ್ನು ಸ್ವೀಕರಿಸಿದರೆ ಅಷ್ಟೇ ಸಾಕು. ಬೇರೆ ಏನು ಬೇಡ. ಎಂದು ಪ್ರೀತಿಯ ಹುಡುಕಾಟದಲ್ಲಿ ತೊಡಗಿರುವುದು ಎದ್ದುಕಾಣುತ್ತದೆ.

'ಪ್ರೀತಿಯಲ್ಲಿ ಹಿಂಸೆ ಇರುವುದಿಲ್ಲ', 'ಪ್ರೀತಿಯಲ್ಲಿ ಹಿಂಸೆ ಇರೋದು' ಈ ಎರಡೂ ವಾಕ್ಯಗಳು ಸರಿಯೆನಿಸುತ್ತವೆ. ಇಲ್ಲಿ ಪ್ರತಿಭಾ ಅವರು ಅವರ ಗಂಡನಿಂದ ದೈಹಿಕವಾಗಿ, ಮಾನಸಿಕವಾಗಿ ಹಿಂಸೆ ಅನುಭವಿಸುತ್ತಿದ್ದರು. ದೈಹಿಕವಾಗಿ ಗಾಯದ ಗುರುತುಗಳನ್ನು ನೋಡಿದ ಅವರು ಈ ರೀತಿ ಹೇಳುವುದು ಸರಿಯಾಗಿದೆ. ಅಂದರೆ ಪ್ರೀತಿ ಇದ್ದ ಮೇಲೆ ದೈಹಿಕವಾಗಿ ಮಾನಸಿಕವಾಗಿ ಹಿಂಸೆ ನೀಡುವುದು ತರವಲ್ಲ ಎಂಬುದು ಒಂದೆಡೆಯಾದರೆ, ಪ್ರೀತಿಯಲ್ಲೇ ಹಿಂಸೆ ಇರೋದು ಎಂದು ಪ್ರತಿಭಾ ಅವರೇ ಸ್ವತಃ ಸಮರ್ಥಿಸಿಕೊಳ್ಳುವುದನ್ನು ಕಾಣುತ್ತೇವೆ. ತನ್ನ ಹೆಂಡತಿ ಎಲ್ಲಿ ದೂರವಾಗುತ್ತರೋ ಎಂಬ ಆತಂಕದಿಂದ ದೈಹಿಕ ಮತ್ತು ಮಾನಸಿಕವಾಗಿ ಹಿಂಸೆ ನೀಡುತ್ತಿರುವ ಗಂಡನ ಬಗ್ಗೆ ಅವರು ಹೇಳಿಕೊಂಡಿದ್ದಾರೆ. ಆದರೆ ಪ್ರತಿಭಾ ಅವರೂ ಕೂಡ ಮೊದಮೊದಲು ಗಂಡನಿಗೆ ಗೊತ್ತಾಗದಂತೆ ಮತ್ತೊಬ್ಬರ ಪ್ರೀತಿಯನ್ನು ಬಯಸುವುದು ನಂದ ಅವರಿಗೂ ಹಿಂಸೆಯ ವಿಷಯವಾಗುತ್ತದೆ ಎಂಬ ವಿಷಯವನ್ನು ಚರ್ಚಿಸಿಲ್ಲ. ಪ್ರತಿಭಾ ಅವರಿಗೆ ತಮ್ಮ ಪ್ರೀತಿಯ ಹುಡುಕಾಟ ಅದರ ತೀವ್ರತೆ ಗೊತ್ತಿದೆಯೇ ಹೊರತು ಅದರಿಂದ ತಮ್ಮ ಗಂಡನಿಗೆ ಆಗಿರಬಹುದಾದ ಆತಂಕವನ್ನು ಅವರು ನಿರೂಪಿಸುವುದಿಲ್ಲ ಅಥವಾ ಅವರು ಹಾಗೆ ಯೋಚಿಸುವುದೂ ಇಲ್ಲ. ಇವರಿಗೆ ಮತ್ತೊಬ್ಬರ ಪ್ರೀತಿಯನ್ನು ಪಡೆಯುವುದೇ ದೊಡ್ಡ ಸವಾಲು ಎನ್ನುವುದಾದರೆ, ಅವರ ಗಂಡ ನಂದಕುಮಾರ್ ಅವರಿಗೆ ತನ್ನ ಹೆಂಡತಿಯ ಪ್ರೀತಿಯನ್ನು ತನ್ನಲ್ಲಿಯೇ

ಉಳಿಸಿಕೊಳ್ಳುವುದು ಅವರ ಪಾಲಿನ ಸವಾಲೂ ಆಗಿರಬಹುದು. ಅಲ್ಲದೆ ತಮ್ಮ ಹೆಂಡತಿಯ ಈ ರೀತಿಯಾದ ಪ್ರೀತಿಯ ಹುಡುಕಾಟವು ಅವರನ್ನು ಆತಂಕಕ್ಕೂ ಗುರಿಮಾಡಿರಬುದು. ಈ ಆಯಾಮದಲ್ಲಿ ಆಲೋಚಿಸುವಂತೆ ಪ್ರತಿಭಾ ಅವರ ನಿರೂಪಣೆ ಪ್ರೇರೇಪಿಸುವುದಿಲ್ಲ. ಏಕಮುಖವಾಗಿ, ಕೇವಲ ತಮ್ಮ ಕಡೆಯಿಂದ ಮಾತ್ರ ಅವರು ಇಡೀ ಸಮಾಜವನ್ನು, ತಮ್ಮ ಸಂಸಾರವನ್ನು ನೋಡಲು ಬಯಸುತ್ತಾರೆ. ತನಗಾಗಿ, ತನ್ನ ಇಷ್ಟದಂತೆ ಈ ಸಮಾಜ ವರ್ತಿಸುವುದಿಲ್ಲ ಎಂದು ನೋಡುತ್ತಾರೆಯೇ ಹೊರತು, ತಾವೂ ಕೂಡ ಈ ಸಮಾಜಕ್ಕೆ, ತಮ್ಮ ಸಂಸಾರಕ್ಕೆ ಹೇಗೆ ಹೊಂದಿಕೊಳ್ಳಬೇಕು ಎಂಬುದನ್ನು ಅವರು ಯೋಚಿಸುವುದಿಲ್ಲ. ಇಂಥಹ ಅನೇಕ ಗೊಂದಲಗಳನ್ನು ಈ ಆತ್ಮಕಥೆಯಲ್ಲಿ ಕಾಣಬಹುಹು.

ಪ್ರತಿಭಾ ಅವರಿಗೆ ವಿರುದ್ಧವೆಂಬಂತೆ ಅವರ ಪತಿಯಾದ ನಂದಕುಮಾರ್ ಅವರು ಪ್ರತಿಭಾ ಅವರು ಪ್ರೀತಿಯನ್ನು ಬಯಸಿ ಹೋದಂತೆ ತಾವೂ ಹೋಗುವುದಿಲ್ಲ. ಅವರು ತಮ್ಮ ಹೆಂಡತಿ ಮಕ್ಕಳಲ್ಲೇ ಸಂತೃಪ್ತಿ ಹೊಂದುವ ಮನೋಭಾವನೆ ಹೊಂದಿದವರು. 'ನನಗೆ ಐವತ್ತು ವರ್ಷವಾದ ಮೇಲೆ ಇದೆಲ್ಲ ಇರಲ್ಲ' ಎಂಬ ಪ್ರತಿಭಾ ಅವರ ಈ ಮಾತಿನಲ್ಲಿ ಪ್ರೀತಿಯಲ್ಲಿ ಹಿಂಸೆ ಎನ್ನುವುದು ಒಂದು ಹಂತದ ವರೆಗೆ ಮಾತ್ರ ಇರುತ್ತದೆ, ವಯಸ್ಸು ಕಳೆಯುತ್ತಾ ಹೋದಂತೆ ಅಂತಹ ಹಿಂಸೆ ಇರುವುದಿಲ್ಲ. ಪ್ರೀತಿಯ ಹುಡುಕಾಟದಲ್ಲಿ ಹುಚ್ಚೂ ಕಡಿಮೆಯಾಗುತ್ತದೆ ಎಂಬ ನಿಲುವಿದೆ. ಆದರೆ ಅವರೇ ಪ್ರೀತಿಗೆ ವಯಸ್ಸಿನ ಮಿತಿಯಿಲ್ಲ, ಎಂದು ಅವರಿಗಿಂತ ಮೂವತ್ತು ವರ್ಷ ಅಂದರೆ ೬೦ರ ವಯಸ್ಸಿನ ವ್ಯಕ್ತಿಯ ಪ್ರೀತಿಯನ್ನು ಬಯಸಿರುವುದು ವೈರುಧ್ಯದಂತೆ ಕಾಣುತ್ತದೆ. ಹೀಗೆ ಇಡೀ ಆತ್ಮಕಥೆಯನ್ನು ಅದರ ನಿರೂಪಣೆ, ಧೋರಣೆ, ಆಶಯವನ್ನು ಕುರಿತಾಗಿ ಆಲೋಚಿಸಿದರೆ ಇಂತಹ ಅನೇಕ ವೈರುಧ್ಯಗಳು ಕಾಣಿಸಿಕೊಳ್ಳುತ್ತವೆ. ಕಾರಣ ಪ್ರೀತಿಗೆ ವಯಸ್ಸಿನ ಮಿತಿಯಿಲ್ಲ ಎಂದು ಹೇಳುವ ಅವರೇ ಮುಂದೆ 'ನನಗೆ ಐವತ್ತು ವರ್ಷವಾದ ಮೇಲೆ ಇದೆಲ್ಲ ಇರಲ್ಲ' ಎಂದು ಹೇಳುವುದು ಅವರ ಏಕಮುಖ ಗ್ರಹಿಕೆಯನ್ನು ತೋರಿಸಿಕೊಡುತ್ತದೆ.

ಪ್ರೇಮಕ್ಕೆ ದೈವತ್ವ ಆರೋಪಿಸುವ ಅನಿವಾರ್ಯತೆಯನ್ನು ಇಲ್ಲಿ ಕಾಣುತ್ತೇವೆ. ಪ್ರತಿಭಾ ಮತ್ತು ಆಕೆಯ ಗೆಳೆಯರಿಬ್ಬರಿಗೂ ಸಂಸಾರಗಳ ಕಡಿವಾಣವಿದ್ದವು. ಅಲ್ಲದೆ ಸಾಮಾಜಿಕ ಕಟ್ಟುಪಾಡುಗಳೂ ಇದ್ದವು. ಒಂದು ಹೆಜ್ಜೆ ಮುಂದಿಟ್ಟರೆ ಅದು 'ಹಾದರ' ಎನಿಸಿಕೊಳ್ಳುವ ಆತಂಕ ಕಾಡುತ್ತಿತ್ತು. ಆದರೆ ಅವರ ವೈವಾಹಿಕ ಸಂಗಾತಿಗಳನ್ನು ಬಿಟ್ಟು ಬೇರೊಬ್ಬರೊಂದಿಗೆ ಸಂಬಂಧ ಹೊಂದುವುದು ವಾಸ್ತವದಲ್ಲಿ ತುಂಬಾ ಕಷ್ಟದ ಸಂಗತಿ. ಆದರೆ ಇಬ್ಬರ ಮನಸ್ಸುಗಳು ಪ್ರೀತಿಯನ್ನು ಬಯಸಿದ್ದವು. ಇಲ್ಲಿ ಪ್ರೀತಿಯ ಅವಶ್ಯಕತೆ ಇಬ್ಬರಿಗೂ ಇರುವುದನ್ನು ನೋಡಬಹುದು. ಆದರೆ ಪ್ರತಿಭಾ ಅವರ ಪ್ರೀತಿಯ ಸ್ವರೂಪವೇ ಬೇರೆ, ಅವರ ಸಂಗಾತಿಯ ಪ್ರೀತಿಯ ಸ್ವರೂಪವೇ ಬೇರೆ. ಸಮಾಜದ ದೃಷ್ಟಿಯಲ್ಲಿ ಅದು ಅಪರಾಧವಾಗಿ ಕಂಡರೂ ಪ್ರತಿಭಾ ಅವರ ದೃಷ್ಟಿಯಲ್ಲಿ ಅದು ನಿಷ್ಕಲ್ಮಷ ಪ್ರೀತಿಯನ್ನು ಪಡೆಯುವ ಹಂಬಲವಿದೆ.

ಪ್ರತಿಭಾ ಅವರಿಗೆ ಪ್ರೀತಿಯಲ್ಲಿ 'ಪರಮ ಪತಿವ್ರತೆ' ಆಗುವುದು ಬೇಕಿರಲಿಲ್ಲ. ಸಾವಿತ್ರಿ ಆಗುವುದೂ ಬೇಕಿರಲಿಲ್ಲ. ಅವರ ಹಂಬಲ ಕೇವಲ ಪರಿಪೂರ್ಣ ಪ್ರೀತಿಯನ್ನು ಪಡೆಯುವುದಷ್ಟೆ ಆಗಿದೆ. ಅದಕ್ಕಾಗಿ 'ನಾನೊಬ್ಬಳು ಸಾಮಾನ್ಯ ಹೆಣ್ಣಿನಂತೆ ಪ್ರೀತಿ ಬಯಸಿದ್ದೆ' ಎಂದು ಅವರೇ ಹೇಳಿಕೊಂಡಿದ್ದಾರೆ. ಹೀಗೆ ಹೇಳುವ ಮೂಲಕ ಆಧುನಿಕ ಮಹಿಳೆಯು ಪುರಾಣದ ಈ ರೀತಿಯ ಕಾಲ್ಪನಿಕ ಪಾತ್ರಗಳನ್ನು ಅನುಮಾನದಿಂದಲೇ ನೋಡುವ ಧೋರಣೆಯನ್ನು ನೋಡಬಹುದು. ಈ ಪುರಾಣದ ಮಾತುಗಳು ಸುಮ್ಮನೆ ಹಾಗೆ ಬಂದು ಹೀಗೆ ಹೋದರೂ ಅವು ಕಟು ವಿಮರ್ಶೆಗೆ ಒಳಗಾಗಿರುವುದನ್ನು ನಾವು ನೋಡಬಹುದು. ಅದಕ್ಕಾಗಿ ಅವರು ಆ ರೀತಿಯ 'ನೈತಿಕ' ಕಟ್ಟಳೆಯಲ್ಲಿ ಸಿಕ್ಕು ಒದ್ದಾಡುವ ಪಾತ್ರಗಳೊಂದಿಗೆ ತಮ್ಮನ್ನು ಯಾವತ್ತೂ ಹೋಲಿಸಿಕೊಳ್ಳಲು ಇಷ್ಟಪಡುವುದಿಲ್ಲ. ಅದನ್ನು ಮೀರಿದ ನಿಜವಾದ ಮಾನವ ಪ್ರೀತಿಯನ್ನು ಅವರು ಶೋಧಿಸುತ್ತಾರೆ.

ಪ್ರತಿಭಾ ಅವರ ಪ್ರೀತಿಯ ಹುಡುಕಾಟ ಬಹುತೇಕ ನೆಲೆಗಳನ್ನು ಒಳಗೊಂಡಿದೆ. ಅದು ಗಂಡ–ಹೆಂಡತಿಯರ ನಡುವಿನ ಅತ್ಯಂತ ಖಾಸಗಿ ವಿಷಯವಾದ ಸಂಭೋಗದವರೆಗೂ ವಿಸ್ತರಿಸಿಕೊಂಡಿದೆ. ಅಂದರೆ ಅಲ್ಲಿಂದಲೂ ಅವರು ಪ್ರೀತಿಯ ಎಳೆಗಳನ್ನು ಅವರು ಶೋಧಿಸುತ್ತಾರೆ ಮತ್ತು ಅದನ್ನು ಅರ್ಥೈಸುತ್ತಾರೆ. 'ಸಂಭೋಗದ ನಂತರ ಎದೆಗೊರಗಿ ಸಂತೃಪ್ತಿಯಿಂದ ಮಾತನಾಡಬಲ್ಲ ಹೃದಯಗಳೇ ನಿಜವಾದ ಪ್ರೀತಿಯ ಕುರುಹುಗಳು. ಗಂಡ ಹೆಂಡತಿಯ ನಡುವೆ ಕೂಡಾ ಮುಗಿದ ತಕ್ಷಣ ಸಧ್ಯ ಹೊರಳಿ ಮಲಗಿದರೆ ಸಾಕು ಅನ್ನಿಸಿದರೆ ಅದು ಬರೀ ದೈಹಿಕ. ಕನ್ನಡದಲ್ಲಿ ಅದಕ್ಕೆ ಸರಿಯಾದ ಪದವೇ ಇಲ್ಲವಲ್ಲ' ಎಂಬ ಅವರ ಮಾತಿನಲ್ಲಿ ಅವರು ಹುಡುಕಲು ಹೊರಟ ಪ್ರೀತಿಯ ಸ್ವರೂಪವು ಅರ್ಥವಾಗುತ್ತದೆ.

ಲೇಖಕಿಯ ಗೆಳಯನಿಂದ ಬಂದ 'ನಿನ್ನದು ಹುಲಿಮದ್ದು, ಅತಿಯಾದರೆ ಅಪಾಯ.' ಎಂಬ ಮಾತು ಪ್ರತಿಭಾರಿಗೆ ಆತಂಕ ಸೃಷ್ಟಿಸಿತ್ತು. ಏಕ ಮನಸ್ಸಿನ ನಿಷ್ಠೆ, ಪ್ರೀತಿ, ಹೊಂದಿದ್ದ ಪ್ರತಿಭಾರ ಗೆಳೆಯನಿಗೆ ಅದು ಉಸಿರು ಕಟ್ಟಿಸುವ ಪ್ರೀತಿಯಾಗಿತ್ತು. ನಿಧಾನವಾಗಿ ಪ್ರೀತಿ, ಕಿರುಕುಳ ಆಗುವುದರ ಜೊತೆಗೆ, ಕಟ್ಟಿಹಾಕುವ ಸರಪಳಿ ಎನಿಸತೊಡಗಿರುವುದನ್ನು ಗಮನಿಸಿದಾಗ ಅತಿಯಾದ ಪ್ರೀತಿಯು ಇನ್ನೊಬ್ಬರಿಗೆ ವಿಷವಾಗಿ ಪರಿಣಮಿಸುವ ಸಂಭವವಿರುತ್ತದೆ. ಇಲ್ಲಿ ಪ್ರತಿಭಾರ ಪ್ರೀತಿಯು ನಿಷ್ಕಲ್ಮಶ ಮತ್ತು ಗಾಢವಾಗಿದ್ದರೂ ಅದು ಸ್ನೇಹಿತನ ಪಾಲಿಗೆ ಮುಳ್ಳಿನಂತೆ ಭಾಸವಾಗುತ್ತದೆ. ಆದರೆ ಪ್ರತಿಭಾರ ನಿರೀಕ್ಷೆ ಅವರನ್ನು ಒಬ್ಬ ಮನುಷ್ಯಳಂತೆ ಸಹಾನುಭೂತಿಯಿಂದ ನೋಡುವ ಮನಸ್ಸು ಬೇಕಿತ್ತು. ದೇವತೆಯಾಗಿಸುವ, ದಾಸಿಯಂತೆ ತುಳಿಯುವ ಮನಸ್ಸಲ್ಲ. ಇದು ಲೇಖಕಿ ಬಯಸುವ ಪ್ರೀತಿಯ ಸ್ವರೂಪವಾಗಿದೆ.

ಪ್ರತಿಭಾ ಅವರ ಪ್ರೀತಿಯು ಒತ್ತಾಯದ ಮನೋಭಾವವನ್ನು ಹೊಂದಿರಲಿಲ್ಲ. ಬದಲಾಗಿ ಬಲವಾದ ಅಪೇಕ್ಷೆಯನ್ನು ಇಟ್ಟುಕೊಂಡಿರುವ ಮನಸ್ಥಿತಿಯನ್ನು ಹೊಂದಿರುವುದಾಗಿತ್ತು. ಯಾರಿಂದಲೂ ಖಾಯಂ ಆದ ಒಪ್ಪಂದ, ನಿರೀಕ್ಷಣೆ ಮಾಡಿರದ ಪ್ರೀತಿಯಂತಿದೆ. ಅವರ ತುಡಿತವನ್ನು

ಅರ್ಥಮಾಡಿಕೊಂಡು ಸ್ಪಂದಿಸುವ ಜೀವದ ಅವಶ್ಯಕತೆ ಮಾತ್ರ ಅವರಿಗೆ ಇರುವಂತಿದೆ. ಈ ರೀತಿಯ ತುಡಿತಕ್ಕೆ ನಿರ್ದಿಷ್ಟ ವ್ಯಕ್ತಿ, ವಯಸ್ಸಿನ ಮಿತಿಯಿರದೆ, ಯಾರಾದರೂ ಸರಿ ಪ್ರೀತಿಸಿದರೆ ಸಾಕು ಎನ್ನುವ ಅನಿವಾರ್ಯತೆ ಕಂಡುಬರುತ್ತದೆ. ಒಟ್ಟಿನಲ್ಲಿ ಅಫೀಮಿಗೆ ಶರಣಾದವನೊಬ್ಬ ಸದಾ ಅಮಲಿನಲ್ಲಿರಲು ಬಯಸುವ ಹಾಗೆ ಸದಾ ಪ್ರೀತಿಯನ್ನು ಪಡೆಯುವ ಹಂಬಲ ಇಲ್ಲಿನ ಲೇಖಕಿ ಅವರಿಗೆ ಇರುವುದನ್ನು ಕಾಣಬಹುದು.

ಇಂತಹ ಪ್ರೀತಿಯನ್ನು ಬಯಸಿದ ಪ್ರತಿಭಾ ಅವರಿಗೆ ಅವರು ಬಯಸಿದ ಈ ರೀತಿಯ ಪ್ರೀತಿಯನ್ನು ಯಾರೂ ಕೊಡದಿರುವುದು ವಿಷಾದದ ಸಂಗತಿಯಾಗಿದೆ. ಎಲ್ಲರೂ ಇಡಿಯಾಗಿ ಗ್ರಹಿಸಿ ಅವರಿಗೆ ಬೇಕಾದ ಹಾಗೆ ಅವರ ಪ್ರೀತಿಯನ್ನು ದುರುಪಯೋಗ ಪಡಿಸಿಕೊಳ್ಳುವ ಮನೋಭಾವ ಹೊಂದಿದವರೇ ಹೆಚ್ಚು. ಇದರಿಂದಾಗಿ ಪ್ರತಿಭಾ ಅವರ ಪ್ರೀತಿಯ ಹುಡುಕಾಟಕ್ಕೆ ಕೊನೆಯೇ ಇಲ್ಲದಂತಾಗಿದೆ. ಸಂಪೂರ್ಣ ಪ್ರೀತಿ ಪಡೆಯಲು ಸದಾ ಹಾತೊರೆಯುತ್ತಿರುವುದು ಕಂಡುಬರುತ್ತದೆ.

ನಿಜವಾದ ಪ್ರೀತಿಯನ್ನು ಪಡೆಯುವಲ್ಲಿ ಪ್ರತಿಭಾ ಅವರು ಅನೇಕ ಕಷ್ಟಗಳನ್ನು ಮತ್ತು ಅವಮಾನಗಳನ್ನು ಎದುರಿಸಿದ್ದಾರೆ. ಅದರಲ್ಲೂ ತಮ್ಮ ಅತ್ಯಂತ ಹತ್ತಿರದವರಿಂದ ಅವರು ಅನೇಕ ರೀತಿಯ ಅಪಾಯಗಳನ್ನು ತಂದುಕೊಂಡು ಎದುರಿಸಿದ್ದಾರೆ. ಅದರಲ್ಲೂ ಅವರು ತಮ್ಮ ಪತಿಯೊಂದಿಗೆ ಜಗಳವಾಗಿ ಬೆಂಕಿ ತಗುಲಿ ಮೈಯಲ್ಲ ಸುಟ್ಟು ಮತ್ತೆ ಚೇತರಿಸಿಕೊಂಡು ಬಂದಾಗಲೂ ಅವರು ಪ್ರೀತಿಯನ್ನು ಬಯಸಿದವರಲ್ಲಿ ಬಹುತೇಕರು ಅವರನ್ನು ಲೈಂಗಿಕವಾಗಿ ಬಳಕೆಯ ವಸ್ತುವಾಗಿ ನೋಡಿದ್ದಾರೆ. ಇದು ಅವರನ್ನು ಇನ್ನಿಲ್ಲದಂತೆ ಎದೆಗುಂದಿಸುತ್ತದೆ. ಅದರಲ್ಲೂ ಅವರು ಅತ್ಯಂತ ಪ್ರೀತಿಸುತ್ತಿದ್ದ 'ಅವರು' ಆಡಿದ ಮಾತಿನಿಂದ ಅವರು ಆಘಾತಕ್ಕೆ ಒಳಗಾಗುತ್ತಾರೆ. ಅವರು ಕೇಳಿದ 'ನಿನಗೆ ಅಲ್ಲೂ ಸುಟ್ಟಿದೆಯಾ?' ಎಂಬ ಮಾತಂತೂ ಅವರನ್ನು ಕಂಗಾಲಾಗುವಂತೆ ಮಾಡುತ್ತದೆ. ಅವರು ಬಯಸಿದ್ದು ನಿರ್ಮಲವಾದ ಸ್ನೇಹವನ್ನು ಆದರೆ 'ಅವರು' ನೋಡಿದ್ದು ಕಾಮದ ದೃಷ್ಟಿಯಿಂದ. ಇದು ಅವರು ಪಡೆಯಲು ಇಚ್ಚಿಸುವ ಪ್ರೀತಿಗೂ ಮತ್ತು ಅವರಿಗೆ ಎದುರಾದ ಸವಾಲುಗಳನ್ನು ಒಟ್ಟಿಗೇ ತೋರಿಸಿಕೊಡುತ್ತದೆ. ಹಾಗೆ ಅವರು ನಿರ್ಮಲವಾದ ಪ್ರೀತಿಯನ್ನು ಪಡೆಯಲು ಹವಣಿಸಿದ ಬಹುತೇಕ ಸಂದರ್ಭಗಳಲ್ಲಿ ಅವರು ಈ ರೀತಿಯ ಅವಮಾನಗಳನ್ನು ಎದುರಿಸಿದ್ದಾರೆ. 'ಮೈ ಸುಟ್ಟಿದ್ದರೂ ಮನಸ್ಸು ಸುಟ್ಟಿರಲಿಲ್ಲವಲ್ಲಾ?' ಎಂಬ ಅವರ ಮಾತು ಅವರ ನೋವನ್ನು ತೋರಿಸುತ್ತದೆ. ಪ್ರೀತಿಯ ಹುಡುಕಾಟದಲ್ಲಿದ್ದ ಪ್ರತಿಭಾ ಅವರು 'ಅವರು' ಎಂದು ಕರೆದಿರುವ ವ್ಯಕ್ತಿಗೆ ಅನೇಕ ಗೆಳತಿಯರ ಸಂಬಂಧವಿತ್ತು. ಸ್ವತಃ ಪ್ರತಿಭಾ ಅವರ ಗೆಳತಿಯೇ ಅವರೊಂದಿಗೆ ಒಂಟಿಯಾಗಿ ಗಂಟೆಗಟ್ಟಲೆ ಕಾಲಕಳೆದು ಬಂದರೂ ಅವರಿಬ್ಬರ ನಡುವೆ ಏನಾಯಿತು ಎಂದು ಕೇಳುವುದಿಲ್ಲ. ಅವರೂ ಹೇಳುವುದಿಲ್ಲ. ಈ ಸನ್ನಿವೇಶವನ್ನು ಗಮನಿಸಿದಾಗ ಇಬ್ಬರ ಅಗತ್ಯ ಒಂದೇ ಆಗಿದೆ. ಅನ್ಯವ್ಯಕ್ತಿಯ ಸಂಬಂಧದ ಬಗ್ಗೆ ತಲೆಕೆಡಿಸಿಕೊಳ್ಳುವ ಗೋಜಿಗೆ ಹೋಗುವುದಿಲ್ಲ, ಅವರ ಮುಖ್ಯ ಬಯಕೆ ಪ್ರೀತಿಯನ್ನಷ್ಟೇ ಪಡೆಯುವುದು.

ಪ್ರಸ್ತುತ ಆಥ್ಮಕಥೆಯಲ್ಲಿ ಪ್ರತಿಭಾ ಅವರ ಪತಿ ನಂದಕುಮಾರ್ ಅವರ ಪ್ರೀತಿಯ ಸ್ವರೂಪವೂ ವಿಚಿತ್ರವಾಗಿಯೇ ಕಂಡುಬರುತ್ತದೆ. ಅವರು ಆಸ್ಪತ್ರೆಯಲ್ಲಿದ್ದಾಗ ಸಾವು ಬದುಕಿನ ನಡುವೆ ಹೋರಾಡುತ್ತಾರೆ. ಆ ಸಂದಂರ್ಭದಲ್ಲಿ ಅವರು ತಮ್ಮ ಹೆಂಡತಿಯನ್ನು ಕುರಿತು ಆಡುವ ಮಾತು ತುಂಬಾ ಕುತೂಹಲಕಾರಿಯಾಗಿದೆ. 'ಆಕಸ್ಮಾತ್ ನಾನು ಸತ್ತು ಹೋದರೆ ನೀನು ಸತ್ತು ಹೋಗಬೇಕು. ಹಾಗಂತ ಪ್ರಾಮೀಸ್ ಮಾಡು. ಹುಟ್ಟಿದ್ದು ನನಗಾಗಿ ಮಾತ್ರ, ನಾನು ಸತ್ತ ಮೆಲೆ ನೀನು ಬೇರೆ ಯಾರಿಗೂ ಸೇರಬಾರದು. ಬೇರೆ ಯಾರನ್ನೂ ಪ್ರೀತಿಸಿ ಮದುವೆಯಾಗಬಾರದು. ನಾನು ಸತ್ತ ಸುದ್ದಿ ತಿಳಿದ ತಕ್ಷಣ ನೀನು ಆತ್ಮಹತ್ಯೆ ಮಾಡಿಕೊಳ್ಳಬೇಕು' ಎಂದು ಅವರಾಡುವ ಮಾತುಗಳು ಸ್ವಾರ್ಥದಂತೆ ಕಂಡರೂ ಅದರಲ್ಲಿ ಅಡಗಿರುವ ಅವರ ನೋವನ್ನು ಗುರುತಿಸಬಹುದು. ಮೊದಲೇ ಪ್ರತಿಭಾ ಅವರ ಮನಸ್ಥಿತಿಯನ್ನು ತಿಳಿದಿದ್ದ ಅವರಿಗೆ ತನ್ನ ಹೆಂಡತಿ ಮತ್ತೊಬ್ಬರನ್ನು ಸೇರಬಹುದು ಎಂಬ ಅನುಮಾನವೂ ಇದೆ. ಈ ಅನುಮಾನ ಅವರ ಮೇಲಿನ ಪ್ರೀತಿಯಿಂದಲೂ, ಸ್ವಾರ್ಥದಿಂದಲೂ ಬಂದಿರಬಹಹುದು. ಇದನ್ನು ತಪ್ಪು ಸರಿ ಎಂಬ ಪರಿಭಾಷೆಯಲ್ಲಿ ನೋಡದೆ ವಿವಿಧ ಆಯಾಮಗಳಿಂದ ಚರ್ಚೆ ಮಾಡಬೇಕಾಗುತ್ತದೆ. ಇಲ್ಲಿ ನಂದಕುಮಾರ್ ಅವರ ನೋವನ್ನೂ ಕೂಡ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಗಂಡನ ಮಾತಿಗೆ ಸ್ವಲ್ಪ ಸಮಯದ ನಂತರ ಪ್ರಿಕ್ರಿಯಿಸಿದ ಪ್ರತಿಭಾ ಅವರು 'ಪ್ರಾಮಿಸ್ ನೀನು ಸತ್ತರೆ ತಕ್ಷಣ ನಾನೂ ಸಾಯ್ತೀನಿ.' ಎಂಬ ಭರವಸೆಯನ್ನು ನೀಡುತ್ತಾರೆ. ಇಲ್ಲಿ ಪ್ರೀತಿಯಲ್ಲಿ ಸ್ವಾರ್ಥ ಇರುತ್ತದೆ ಎಂಬುದನ್ನು ತಿಳಿಯಬಹುದಾಗಿದೆ. ಪ್ರತಿಭಾ ಅವರನ್ನು ತುಂಬಾ ಪ್ರೀತಿಸುವ ನಂದ ಅವರು ತಾನು ಸತ್ತ ಮೇಲೆ ಅವಳೂ ಸಾಯಬೇಕು ಎಂದು ಬಯಸುತ್ತಾರೆ. ಪ್ರತಿಭಾರು ಮನಃ ಪೂರ್ವಕವಾಗಿ ಒಪ್ಪಿಗೆ ನೀಡದಿರುವುದೂ ಕೂಡ ಪ್ರೀತಿಯಲ್ಲಿ ಸ್ವಾರ್ಥ ಇದೆ ಎಂಬುದನ್ನು ತಿಳಿಸುತ್ತದೆ.

ಆತ್ಮಕಥೆಯ ಕೊನೆಯ ಭಾಗವನ್ನು ಗಮನಿಸಿದಾಗ ಪ್ರತಿಭಾ ಅವರಿಗೆ ಪರಿಪೂರ್ಣ ಪ್ರೀತಿ ಎಂಬುದು ಮರೀಚಿಕೆಯಾಗಿ ಉಳಿದಿದೆ. ಎಲ್ಲಾ ಕಡೆ ಹುಡುಕಿಕೊಂಡು ಬಂದರೂ ಪರಿಪೂರ್ಣ ಪ್ರೀತಿ ದೊರೆಯುವುದಿಲ್ಲ. ಕೊನೆಗೆ ಕೈಯಲ್ಲಿನ ಪ್ರೀತಿಯನ್ನು ಗುರುತಿಸದೆ ಹೋದೆ ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ಇದ್ದುದರಲ್ಲಿಯೇ ಸಂತೃಪ್ತಿ ಹೊಂದಬೇಕೆಂಬ ನಿಲುವಿಗೆ ಬಂದರೂ, ಅವರ ಪ್ರೀತಿಯ ಹುಡುಕಾಟ ಮಾತ್ರ ನಿಂತಿಲ್ಲ. 'ಅಂತರಗಂಗೆ'ಯಂತೆ ಒಂದು ಕಡೆಯಿಂದ ಇನ್ನೊಂದು ಕಡಗೆ ತೇಲುತ್ತಿದೆ.

❑❑❑

ಅಧ್ಯಾಯ ನಾಲ್ಕು

ಅನುದಿನದ ಅಂತರಗಂಗೆ-ಸಾಹಿತ್ಯಕ ಅಧ್ಯಯನ

೪.೧. ಭಾಷೆ ಮತ್ತು ಕಥನಕ್ರಮ

೪.೨. ರೂಪಕಗಳು ಮತ್ತು ಸಂಕೇತಗಳು

೪.೩. ಆತ್ಮಕಥೆಯಲ್ಲಿ ಬಳಕೆಗೊಂಡಿರುವ ಕವಿತೆಗಳು

೪.೪. ಆತ್ಮಕಥೆಯ ಪ್ರಾರಂಭ ಮತ್ತು ಅಂತ್ಯ

೪.೫. ಆತ್ಮಕಥೆಯಲ್ಲಿ ಬರುವ ಉಪಶೀರ್ಷಿಕೆಗಳು

ಅನುದಿನದ ಅಂತರಗಂಗೆ–ಸಾಹಿತ್ಯಕ ಅಧ್ಯಯನ

೪.೧. ಭಾಷೆ ಮತ್ತು ಕಥನಕ್ರಮ

ಪ್ರತಿಭಾ ನಂದಕುಮಾರ್ ಅವರ ಈ ಕೃತಿಯು ಇದುವರೆಗಿನ ಆತ್ಮಕಥೆಗಳಿಗಿಂತ ಹಲವು ಆಯಾಮಗಳಲ್ಲಿ ಭಿನ್ನವಾಗಿದೆ. ಈ ಆತ್ಮಕಥೆಯನ್ನು ಗಮನಿಸಿದಾಗ ಬರವಣಿಗೆಯ ಭಾಷೆ ಬಹಳ ಪ್ರಮುಖ ಪಾತ್ರವಹಿಸಿರುವುದನ್ನು ಕಾಣಬಹುದು. ಸ್ತ್ರೀಯರ ಅಭಿವ್ಯಕ್ತಿಗಳು ಮೊದಲಿಗೆ ಮೌಖಿಕ ಪರಂಪರೆಗೆ ಸೇರಿದ್ದವು. ಆದರೆ ಇಂದು ಅವರ ಅಭಿವ್ಯಕ್ತಿಗಳು ಬರಹದ ರೂಪ ಪಡೆಯುತ್ತಿರುವುದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಚ್ಚರಿಯ ಸಂಗತಿಯೇ ಸರಿ. ಇಂದು ಬರಹಗಳ ಮೂಲಕ ಪರಂಪರೆಯ ವಿಸ್ಮೃತಿಯಲ್ಲಿ ಅಡಗಿ ಹೋಗಿರಬಹುದಾದ ನಿರೂಪಣಾ ಮಾದರಿಗಳಿಗೆ ಹತ್ತಿರವಿದ್ದಂತಿದೆ. ಜನಪದದಲ್ಲಿ ಅಭಿವ್ಯಕ್ತಿಸುವ ಭಾಷೆ ಭಾವನೆಗಳು ಹೆಣ್ಣಿನ ನಿರೂಪಣೆಯಲ್ಲಿ ಭಿನ್ನವೂ, ವಿಶಿಷ್ಟವೂ ಆಗಿರುತ್ತವೆ. ಅಂತೆಯೇ ಇವುಗಳನ್ನು ನೋಡುವ ಕ್ರಮವು ಭಿನ್ನವಾಗಿರುತ್ತದೆ. ಸ್ತ್ರೀ ನಿರೂಪಣೆಯ ದೃಷ್ಟಿಕೋನಗಳು, ಅವು ಸೃಷ್ಟಿಸುವ ದೇಶ ಕಾಲಗಳನ್ನು ಅರಿಯಬೇಕಾದರೆ ವಿಶೇಷವಾದ ವ್ಯಾಕರಣದ ಅವಶ್ಯಕತೆ ಇದೆ.

ಲಿಖಿತ ರೂಪದಲ್ಲಿ ಸಿಗುವ ಅಭಿವ್ಯಕ್ತಿ ರಚನೆಗಳಿಗಿಂತ ದೇಸಿ ನೆಲೆಗಳಲ್ಲಿರುವ ಸ್ತ್ರೀ ಅಭಿವ್ಯಕ್ತಿಯ ರಚನೆಗಳು ಭಿನ್ನವಾಗಿರುತ್ತವೆ. ಅವು ತಮ್ಮದೇ ಆದ ಮಾದರಿಗಳನ್ನು ಮತ್ತು ಕ್ರಮಗಳನ್ನು ರೂಪಿಸಿಕೊಂಡಿವೆ. ಜಾನಪದ ಹಾಡುಗಳನ್ನು ಇಲ್ಲಿ ಉದಾಹರಿಸುವುದಾದರೆ. ಬೀಸು ಕಲ್ಲುಪದ, ಸೋಬಾನೆಪದ, ತವರಿನ ಕುರಿತ ಹಾಡುಗಳು ಒಂದು ವಿಶಿಷ್ಟವಾದ 'ಕಟ್ಟುವಿಕೆ'ಯಲ್ಲಿ ಆವಿರ್ಭವಿಸುತ್ತವೆ. ಬಾಯಿಂದ ಬಾಯಿಗೆ ಹರಿದಾಡುವಾಗ, ಒಂದೇ ಪದದಲ್ಲಿ ಒಳವಿನ್ಯಾಸಗಳನ್ನು ರೂಪಿಸಿಕೊಳ್ಳುತ್ತಾ ಒಡೆದು ಕಟ್ಟುವ ಒಂದು ಸೃಜನಶೀಲ ನಿರಚನಾ ಕ್ರಮ, ಇವುಗಳಲ್ಲಿ ಮುಖ್ಯವಾಗಿ ವೈಯುಕ್ತಿಕ ನೋವು ನಲಿವುಗಳು ಒಂದು ಕಥನ ನೇಯ್ಗೆಯಲ್ಲಿ ರೂಪುಗೊಂಡಿರುತ್ತವೆ. ಆದರೂ ಒಂದು ಹೆಣ್ಣು ಧ್ವನಿಯ ನಿರೂಪಣೆಯಲ್ಲಿ ಸಾಂದರ್ಭಿಕವಾದ ಸಾಮಾಜಿಕ ಆವರಣವನ್ನು ಸೃಷ್ಟಿಸಿಕೊಳ್ಳುತ್ತವೆ. ಇವು ಮೇಲೆ ಒಡೆದು ಕಾಣುವ ಕ್ರಮಗಳಲ್ಲ, ಆದರೆ ಗುಪ್ತಗಾಮಿನಿ ನಡೆಗಳು ಆಳದಲ್ಲಿ ಚಲನಶೀಲವಾಗಿರುತ್ತವೆ. ಹೀಗೆ 'ನಿರಚನ' ಮತ್ತು 'ರಚನೆ'ಯ ಕ್ರಮಗಳನ್ನು ಮೈಗೂಡಿಸಿಕೊಂಡು ವಿಶೇಷವಾದ ನಿರ್ವಚನ ಮಾಡಿಕೊಳ್ಳುವಾಗ ಪ್ರತಿಭಾನಂದಕುಮಾರ್ ಅವರ ಬರವಣಿಗೆಯು ಸಾಗುವ ಹಾದಿಯಲ್ಲಿದೆ.

ಯಾವುದಾದರೊಂದು ವಿಷಯ ಅಥವಾ ವಸ್ತು ಸಾಹಿತ್ಯದ ರೂಪ ಪಡೆಯಬೇಕಾದರೆ ಮೊದಲು ಎದುರಾಗುವ ತೊಂದರೆ ಭಾಷೆಯದ್ದು. ಈಗಾಗಲೇ ಸಮಾಜ ಸಿದ್ಧಪಡಿಸಿದ ಸಾಂಪ್ರದಾಯಿಕ ಭಾಷೆಯಲ್ಲಿ ಅಭಿವ್ಯಕ್ತಿಸುವುದು ದೊಡ್ಡ ತೊಡಕಾಗುತ್ತದೆ. ಮೂಲ ನಿವಾಸಿಗಳ ಪ್ರಪಂಚಕ್ಕೆ ಕಾಲಿಟ್ಟ ವಸಾಹತುಶಾಹಿ ಅವರ ಭಾಷೆಗೆ ಬದಲಾಗಿ ತನ್ನ ಭಾಷೆಯನ್ನು ಸ್ಥಾಪಿಸಿತು. ಇದರಿಂದಾಗಿ ತಮ್ಮ ಭಾಷೆ ಕಳೆದುಕೊಂಡ ಜನ ವಸಾಹತುಶಾಹಿ ನಿರ್ಮಿಸಿದ ಭಾಷೆಯಲ್ಲಿಯೇ ಅಭಿವ್ಯಕ್ತಿಸಬೇಕಾಯಿತು. ಈ ಬಿಕ್ಕಟ್ಟಿನ ರೀತಿಯಂತೆಯೇ ಪುರುಷಪ್ರಧಾನ ಸಮಾಜ ರೂಪಿಸಿದ ಭಾಷೆಯಲ್ಲಿ ಅಭಿವ್ಯಕ್ತಿಸುವ ಕಷ್ಟ ಮಹಿಳೆಯರಿಗೆ ಎದುರಾಯಿತು. ಅಂತೆಯೇ ಸಂವಾದದ ತೊಡಕನ್ನು ಎದುರಿಸುವ ಕಷ್ಟಗಳು ಎದುರಾಗತೊಡಗಿದವು. ಇರುವ ಭಾಷಿಕ ರಚನೆಗಳನ್ನು ಬಳಸಿ ಹೇಳುವ ಅಭಿವ್ಯಕ್ತಿಯಲ್ಲಿ ಇರುವ ತೊಡಕುಗಳು, ಸಂವಹನದ ಕಷ್ಟಗಳು ಒಟ್ಟಾರೆಯಾಗಿ ಬೇರೆಯ ಕಾಲ ದೇಶಗಳನ್ನು ಸೂಚಿಸುತ್ತವೆ.

ಭಾಷೆಯ ವ್ಯಾಕರಣ ಪ್ರಯೋಗಗಳು ಪರಿಚಿತ ಅಲ್ಲ ಎನಿಸುವುದಕ್ಕೆ ಹೆಣ್ಣು ಗಂಡಿನ ವಿಭಿನ್ನ ಲೋಕಗಳು ಕಾರಣವಾಗಿವೆ. ಇಲ್ಲಿ ಉಂಟಾಗುವ ಸಂವಹನದ ಅಡಚಣೆಗಳು ವಿಭಿನ್ನ ನೆಲೆಗಳ ಸಂಘರ್ಷದಿಂದ ಆಗಿವೆ. ಹೆಣ್ಣು ಗಂಡಿನ ಸಂಘರ್ಷಗಳಲ್ಲಿ ವೈರುಧ್ಯಗಳಿವೆ. ಒಂದರ ಮೇಲೊಂದು ಅತಿಕ್ರಮಿಸುವ, ಪ್ರೀತಿಸುವ, ದ್ವೇಷಿಸುವ ಸಂಕೀರ್ಣ ಸ್ವರೂಪಗಳಲ್ಲಿ ಅವು ಪ್ರಕಟಗೊಳ್ಳುತ್ತವೆ. ಮೇಲ್ನೋಟಕ್ಕೆ ಎದ್ದು ಕಾಣುವುದು ಕ್ರೌರ್ಯವಾಗಿದೆ. ಗಂಡು ಹೆಣ್ಣಿನ ಸಂಘರ್ಷಗಳಲ್ಲಿ ಪರಸ್ಪರ ವಿರೋಧಿ ನೆಲೆಗಳಲ್ಲಿ ನಿಂತು ನೋಡುವಾಗ ಹೆಣ್ಣಿನ ಮೇಲಿನ ಕ್ರೌರ್ಯ ಎದ್ದು ಕಾಣುವಂತದ್ದು. ವೈಯುಕ್ತಿಕ ಮತ್ತು ಸಾಮಾಜಿಕ ಸಂದರ್ಭಗಳೆರಡರಲ್ಲೂ ಈ ವಿರೋಧ ಕ್ರೌರ್ಯದಲ್ಲಿ ವ್ಯಕ್ತವಾಗುತ್ತದೆ. ಇದನ್ನು ಪ್ರತಿಭಾ ಅವರು ಬರವಣಿಗೆಯ ಮೂಲಕ ವ್ಯಕ್ತಪಡಿಸಿದ್ದಾರೆ.

ಸ್ತ್ರೀಯರಿಗೆ 'ಪುರಾವೆಗಳನ್ನು ಕೇಳುವ' ಪ್ರಪಂಚ ಯಾವ ಪುರಾವೆಗಳೂ ಇಲ್ಲದಂತೆ ಕ್ರೌರ್ಯವನ್ನು ಪ್ರಕಟಿಸಿ ತಣ್ಣಗಿರುವ ಲೋಕದಲ್ಲಿ ಕೆಲವರು ಆಧುನಿಕ ಸ್ತ್ರೀವಾದದ ಪ್ರತಿಫಲನಗಳು ಎಂದು ಸರಳೀಕರಿಸಿ ಬಿಡುವ ಸಾಧ್ಯತೆಯೇ ಹೆಚ್ಚು. ಹೀಗಿರುವಾಗ ಪ್ರತಿಭಾ ಅವರು ಭಿನ್ನವಾದ ದೇಶಕಾಲಗಳನ್ನಾಗಿ ನೋಡುವುದರ ಜೊತೆಗೆ ಇದಕ್ಕೆ ಪರ್ಯಾಯವಾಗಿ ಕಟ್ಟಬೇಕಾದ ಸಾಧ್ಯತೆಗಳನ್ನು ರೂಪಿಸುವ ಪ್ರಯತ್ನ ಮಾಡಿದ್ದಾರೆ. ಅಂದರೆ ಹಳೆಯ ರೂಪ, ರಚನೆಗಳು, ಭಾಷಾ, ಪುರಾಣೇತಿಹಾಸಗಳ ಮಿಥ್ ಅನ್ನು ಒಡೆಯುವುದರ ಮೂಲಕ ಹಾಗೆಯೇ ದೇಸಿ ಪರಂಪರೆಯಲ್ಲಿ ಸೃಜನಶೀಲವಾಗಿ ದಿನದ ಸವಾಲುಗಳನ್ನು ಎದುರಿಸುವಂತಹ ಕ್ರಮಗಳನ್ನು ಅನುಸರಿಸಿರುವ ಸಾಧ್ಯತೆಗಳು ಪ್ರತಿಭಾರ ಬರಹಕ್ಕಿದೆ. ಇಲ್ಲಿ 'ಅನುದಿನದ ಅಂತರಗಂಗೆ'ಯನ್ನು ದಾಟುವ ಸವಾಲುಗಳನ್ನು ಕ್ರಿಯಾಶೀಲವಾಗಿ ಎದುರಿಸುವ ಮೂಲಕ ಅವರ ಭಾಷಾ ಪ್ರೌಢಿಮೆ ಮತ್ತು ವಿಶೇಷವಾದ ಭಾಷಾ ರಚನೆ ಕಾಣುತ್ತೇವೆ.

ಸಾರ್ವತ್ರಿಕವಾಗಿ ಪುರುಷ ಅಹಂ ಅನ್ನು ಸ್ತ್ರೀವಾದವು ಮುಖಾಮುಖಿಯಾಗಿಸಿಕೊಂಡು ಜಿಜ್ಞಾಸೆಗೆ ತೊಡಗುತ್ತದೆ. ಆದರೆ ಪ್ರತಿಭಾ ಅವರು ಗಂಡಸಿನ ಅಹಂ ಅನ್ನು ಮಿಥ್ ಎಂದು

ಭಾವಿಸಿ, ಅದನ್ನು ಒಡೆಯಲು ಇಚ್ಚಿಸುವಂತೆ ಕಾಣುತ್ತದೆ. ಈ ರೀತಿಯಾಗಿ ಗಂಡಸಿನ ಗರ್ವದ ನಿರಾಕರಣೆ ರೋಮ್ಯಾಂಟಿಕ್ ಆಗುವ ಅಪಾಯ ಇದೆ. ಪ್ರತಿಭಾ ಅವರು ಇದನ್ನು ವಾಸ್ತವದ ನೆಲೆಯಲ್ಲಿಯೇ ನಿರ್ವಚನ ಮಾಡಿಕೊಂಡಿದ್ದಾರೆ.

ಪ್ರತಿಭಾ ಅವರು ಪ್ರತಿಮೆಗಳನ್ನು ಬಳಸಿಕೊಳ್ಳುವುದರ ಮೂಲಕ ಭಾಷೆಯನ್ನು ಶಕ್ತಿಶಾಲಿಯನ್ನಾಗಿಸಿದ್ದಾರೆ. ಅನುದಿನದ ಸವಾಲುಗಳ, ಅನುಭವಗಳ ಜೊತೆಗೆ ಪ್ರೀತಿಯ ವಿಷಯ ಪ್ರಮುಖವಾಗಿ ಕಂಡಿದೆ. ನಿತ್ಯದ ಅನುಭವಗಳನ್ನು ಅಭಿವ್ಯಕ್ತಿಸುವ ಭಾಷೆಯ ಲಯದಲ್ಲಿ ರಚನೆಗಳನ್ನು ಸೃಷ್ಟಿ ಮಾಡುವ ಮೌಕಿಕ ಪರಂಪರೆಯ 'ಮುಕ್ತತೆ' ಮತ್ತು 'ಸರಳತೆ' ಗಳನ್ನು ಬಿಟ್ಟುಕೊಡುವ ರೀತಿಯಲ್ಲಿ ಪ್ರತಿಭಾರ ಭಾಷೆ ವಿನ್ಯಾಸಗೊಂಡಿದೆ. ಆತ್ಮಕಥೆಯ ನಡು ನಡುವೆ ಮಾತಿನ ಲಯದಲ್ಲಿ ಹಲವಾರು ಕಾವ್ಯಗಳನ್ನು ತರುತ್ತಾರೆ. ಆ ಮೂಲಕ ಸಮಕಾಲಿನ ಸಂವೇದನೆಯಲ್ಲಿ ಪುನಾರಚನೆ ಮಾಡುವ ಪ್ರಯತ್ನ ಅಭಿವ್ಯಕ್ತಿಸಿದ್ದಾರೆ.

ಪ್ರತಿಭಾ ಅವರ ಭಾಷೆಯಲ್ಲಿ ಎಲ್ಲವನ್ನು ಅಂದರೆ ಮಾತು, ಸಂಭಾಷಣೆ ಉಲ್ಲೇಖಗಳನ್ನು ತಮ್ಮ ಅಭಿವ್ಯಕ್ತಿಯಾಗಿ ಬಗ್ಗಿಸಿ, ರಚನೆ ಮಾಡಿಕೊಳ್ಳುವ ರೀತಿಯಲ್ಲಿ ಹೊಸ ಸಾದ್ಯತೆಗೆ ಕಣ್ಣು ಹಾಯಿಸುವ ಸೃಜನಶೀಲತೆ ಕಂಡುಬರುತ್ತದೆ. ಆತ್ಮಕಥೆಯಲ್ಲಿ ಭಾಷೆಯು ಕಠಿಣವಾಗಿರದೆ ನಯವಾಗಿದೆ. ಭಾವನೆಗಳನ್ನು ವ್ಯಕ್ತಪಡಿಸುವ ದಾಟಿಯು ಸ್ಪಷ್ಟವಾಗಿ ಮೂಡಿಬಂದಿದೆ. ಸಮಾಜದಲ್ಲಿ 'ಅನೈತಿಕ', 'ಅಶ್ಲೀಲ' ಮತ್ತು 'ಅಪರಾಧ' ಎಂದು ಭಾವಿಸಬಹುದಾದ ಸಂಗತಿಗಳನ್ನು ಅನೈತಿಕವಲ್ಲದ, ಅಶ್ಲೀಲವಲ್ಲದ, ಅಪರಾದವಲ್ಲದ ದೃಷ್ಟಿಯಿಂದ ನೋಡುವಂತೆ ಭಾಷೆಯ ಅಭಿವ್ಯಕ್ತಿಯಾಗಿದೆ. ಪ್ರತಿಭಾ ಅವರ ಪ್ರೀತಿಯ ಹಂಬಲವನ್ನು ಭಾಷೆಯ ಮೂಲಕ ವಿಶೇಷ ರೀತಿಯಲ್ಲಿ ವ್ಯಕ್ತಪಡಿಸಿರುವುದಲ್ಲದೆ, ಅದು ಸಾಮಾಜಿಕ ಚೌಕಟ್ಟನ್ನು ಮೀರಿದೆ ಎಂಬ ಅರ್ಥ ಬರದಂತೆ ನಿರೂಪಿಸಿದ್ದಾರೆ. ಇದು ಭಾಷೆಗಿರುವ ಶಕ್ತಿಯೂ ಆಗಿದೆ.

೪.೨. ರೂಪಕಗಳು ಮತ್ತು ಸಂಕೇತಗಳು

ನಿಜಜೀವನದಲ್ಲಿ ಅನೇಕ ಅಡೆತಡೆಗಳು ಇದ್ದುದರಿಂದ ಪ್ರತಿಭಾ ಅವರು ಪ್ರೀತಿಯ ಹುಡುಕಾಟವನ್ನು ಮಾಡುವುದರ ಮೂಲಕ ಅವರ ಕೌಟುಂಬಿಕ ಸಂಘರ್ಷಗಳನ್ನು ಮರೆಯುವ ಪ್ರಯತ್ನ ಮಾಡಿದ್ದಾರೆ. ಪ್ರೀತಿಯ ಹುಡುಕಾಟಕ್ಕಾಗಿ ಹೆಚ್ಚು ಗಮನ ಕೇಂದ್ರೀಕರಿಸಿರುವುದರಿಂದ ನಿರೂಪಣೆಯಲ್ಲಿ ಬದುಕಿನ ತೀವ್ರತೆ ಇದೆ. ಬಾಲ್ಯದಿಂದ ಸ್ವಚ್ಚಂದವಾದ ವಾತಾವರಣವಿದ್ದುದರಿಂದ ಜೀವನದುದ್ದಕ್ಕೂ ಅದೇ ರೀತಿಯಾಗಿ ಬಾಳಬೇಕು ಎಂಬ ಹಂಬಲ ವ್ಯಕ್ತವಾಗಿದೆ. ಪ್ರತಿಭಾ ಅವರು ಬಯಸುವ ಪ್ರೀತಿಯ ಸ್ವರೂಪ ಸಮಾಜದ ದೃಷ್ಟಿಯಲ್ಲಿ 'ಅನೈತಿಕ' ಹಾಗೂ 'ಅಶ್ಲೀಲ'. ಆದರೆ ಅವರ ಬರವಣಿಗೆಯ ಶಕ್ತಿಯಿಂದ ಅದೊಂದು ಅನೈತಿಕವೆನಿಸದೆ, ಅಶ್ಲೀಲವೆನಿಸದೆ ನಿರೂಪಣೆಗೊಂಡಿದೆ. ಈ ರೀತಿಯಲ್ಲಿ ಬದುಕನ್ನು ಕಟ್ಟಿಕೊಡುವುದಕ್ಕಾಗಿ ಮತ್ತು ಬಲಗೊಳಿಸುವುದಕ್ಕಾಗಿ ಬರವಣಿಗೆಯ ನಡುವೆ ಹಲವಾರು ರೂಪಕಗಳನ್ನು ಬಳಕೆ ಮಾಡಿದ್ದಾರೆ. ಬದುಕನ್ನು ನಿರ್ವಹಿಸಿದ

ಬಗ್ಗೆ, ಕಷ್ಟಗಳನ್ನು ಮೀರಿದ ಬಗೆ ಹಾಗೆಯೇ ಪ್ರೀತಿಯ ಆಳವನ್ನು ತಿಳಿಸಲು ರೂಪಗಳು ಅಲ್ಲಲ್ಲಿ ಬಂದಿವೆ.

ಪ್ರತಿಭಾ ಅವರು ಸ್ವಚ್ಛಂದದ ಬದುಕನ್ನು ಬಯಸಿದ್ದರಿಂದ ಅವರ ಈ ಸ್ವಚ್ಛಂದಕ್ಕೆ ತಡೆ ಉಂಟಾದಾಗ ರೂಪಗಳ ಬಳಕೆಯಾಗಿದೆ. 'ನಾನು ಸಂಪ್ರದಾಯಸ್ತ ಹೆಂಡತಿಯಂತೆ ನಡೆದುಕೊಳ್ಳಬೇಕಿದ್ದರೆ ನೀನು ಸಂಪ್ರದಾಯಸ್ತ ಗಂಡನಂತೆ ನಡೆದುಕೊಳ್ಳಬೇಕು' 'ಸಂಪ್ರದಾಯಸ್ತ ಹೆಂಡತಿಯಂತೆ' ಎಂಬ ವಾಕ್ಯವನ್ನು ಗಮನಿಸಿದಾಗ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಾದವಳಿಗೆ ಯಾವುದೇ ರೀತಿಯ ಸ್ವಾತಂತ್ರವಿಲ್ಲ. ಅವಳಿಗೆ ಯಾವುದೇ ರೀತಿಯ ಅಸ್ತಿತ್ವವಿಲ್ಲ. ಹೆಂಡತಿಯಾದವಳು ಗಂಡ ಹೇಳಿದಂತೆಯೇ ಕೇಳಬೇಕು. ಗಂಡನ ಅನುಮತಿಯಿಲ್ಲದೆ ಎಲ್ಲಿಗೂ ಹೋಗುವ ಹಾಗಿಲ್ಲ. ಹಾಗೆಯೇ ಹೆಂಡತಿಯಾದವಳು ನೌಕರಿಯಲ್ಲಿ ಇದ್ದರೆ, ಮನೆಯ ಕೆಲಸದ ಜೊತೆಗೆ ಮನೆಯ ಆಚೆಗಿನ ಎಲ್ಲಾ ಕೆಲಸವನ್ನೂ ಮಾಡಬೇಕು, ಈ ರೀತಿ ಇದ್ದರೆ ಅವಳು 'ಸಂಪ್ರದಾಯಸ್ತ ಹೆಂಡತಿಯಂತೆ' ಎಂಬ ವಾಡಿಕೆಯಿದೆ. ಆದರೆ ಗಂಡನಿಗೆ ಇದ್ಯಾವುದೂ ಅನ್ವಯಿಸುವುದಿಲ್ಲ. ಇಲ್ಲಿ ಪ್ರತಿಭಾ ಅವರಿಗೆ ಗಂಡನಿಂದ ಒತ್ತಡ ಬಂದಾಗ ನೀನು 'ಸಂಪ್ರದಾಯಸ್ತ ಗಂಡನಂತೆ' ನಡೆದುಕೊಳ್ಳಬೇಕು ಎನ್ನುವ ವಾಕ್ಯವು, ಗಂಡನು ಹೊರಗಡೆ ದುಡಿಯುವುದಲ್ಲದೆ, ಮನೆಯ ಒಳಗಿನ ಕೆಲಸಕ್ಕೂ ಸಹಾಯ ಮಾಡಬೇಕೆಂಬುದಾಗಿದೆ. ಆದರೆ ಗಂಡು ಇದಕ್ಕೆ ಒಪ್ಪುವುದಿಲ್ಲ ಕಾರಣ ಸಮಾಜದಲ್ಲಿ ಪುರುಷರಿಗಿರುವ ಸ್ಥಾನಮಾನ. ಆ ಸ್ಥಾನಮಾನವನ್ನು ಸ್ವತಃ ಪುರುಷನೇ ರೂಪಿಸಿಕೊಂಡಿದ್ದಾನೆ. ಹಾಗಾಗಿ ಇದೊಂದು ಪುರುಷ ನಿರ್ಮಿತ ಸಮಾಜ. ತನಗೆ ಬೇಕಾದ ಹಾಗೆ ತಾನು ನೀತಿ ನಿಯಮಗಳನ್ನು ನಿರ್ಮಿಸಿಕೊಂಡಿದ್ದಾನೆ.

ಇದೆಲ್ಲವನ್ನು ಸಹಿಸಿಕೊಳ್ಳಲಾಗದ ಸನ್ನಿವೇಶದಲ್ಲಿ ಪ್ರತಿಭಾ ಅವರು 'ಹೆಡೆ ತುಳಿದ ಹಾವಿನಂತೆ ತಿರುಗಿಬಿದ್ದೆ' ಎಂದಿದ್ದಾರೆ. ಇಲ್ಲಿ ಹಾವಿನ ಹೆಡೆಯನ್ನು ತುಳಿದಾಗ ಅದರ ರೋಷ ಹೆಚ್ಚಾಗುತ್ತದೆ. ಹಾಗೆಯೇ ಅದು ತುಳಿದವರನ್ನು ಕಚ್ಚುವವರೆಗೂ ಬಿಡುವುದಿಲ್ಲ. ಅದೇ ರೀತಿ ಪ್ರತಿಭಾ ಅವರ ವ್ಯಕ್ತಿಸ್ವಾತಂತ್ರ್ಯಕ್ಕೆ ಅಡ್ಡಿಯಾದಾಗ ಅದರ ವಿರುದ್ಧದ ಪ್ರತಿಭಟನೆಯು ರೂಪಕಗಳ ಮೂಲಕ ವ್ಯಕ್ತವಾಗಿದೆ. ಹಾವಿಗೆ ವಿಷ ಇರುವುದು ಹೆಡೆಯುಲಿಯೇ. ಅದರ ನಾಲಿಗೆ ತನ್ನ ರಕ್ಷಣೆಯ ಸಾಧನ ಅದಕ್ಕಾಗಿ ಅದರ ಹೆಡೆ ತುಳಿದಾಗ ಅದು ತನ್ನ ಸಿಟ್ಟನ್ನು ಹೊರ ಹಾಕಲೇಬೇಕಾಗುತ್ತದೆ. ಹಾಗಾಗಿ ಹೆಣ್ಣಿನ ಅಸ್ಮಿತೆಯನ್ನು ಅವಳ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದು ಅದು ಹೆಡೆ ತುಳಿದ ಹಾವಿನ ಸ್ಥಿತಿಯೇ ಆಗುತ್ತದೆ. ಈ ಎಚ್ಚರವನ್ನು ಪ್ರತಿಭಾ ಅವರ ಈ ಉಪಮೆಯಲ್ಲಿ ಅಡಗಿಸಿದ್ದಾರೆ. ಸದಾ ಜಗಳ, ಅನುಮಾನ, ಕೋಪ, ಅಳು ಕಿರುಚಾಟ ಇವೆಲ್ಲವನ್ನು ಸಹಿಸಿಕೊಂಡ ಮನಸ್ಸಿಗೆ ಮುದ ನೀಡುವ ಏಕೈಕ ಸಾಧನ ಪ್ರೀತಿ ಎಂಬುದು ಅವರ ನಂಬಿಕೆ ಮತ್ತು ತೀರ್ಮಾನವಾಗಿದೆ.

'ಪ್ರೀತಿಗಾಗಿ ಸದಾ ಹಂಬಲಿಸುವ ನನಗೆ ಹಸಿದ ನಾಯಿಯನ್ನು ಕರೆದು ಯಾರಾದರೂ ಒಂದು ಚೂರು ಬ್ರೆಡ್ಡು ಕೊಟ್ಟರೂ ಧನ್ಯತೆಯಿಂದ ತಿನ್ನುವಂತೆ' ಆಗಿತ್ತು. ಎಂದು ಹೇಳುವಾಗ ತಾನು ಕೀಳು ಎಂಬ ಭಾವನೆ ಅಲ್ಲಿ ವ್ಯಕ್ತವಾಗಿಲ್ಲದಿರುವುದನ್ನು ಗಮನಿಸಬಹುದು. ಅವರು ತಮ್ಮ ಪ್ರೀತಿಯ ಹಸಿವನ್ನು ಹಸಿದ ನಾಯಿಗೆ ಹೋಲಿಸಿಕೊಂಡಿದ್ದಾರೆ. ಸದಾ ಜಗಳದಲ್ಲಿ ನಿರತವಾಗಿರುವ ಮನಸ್ಸಿಗೆ ಶಾಂತಿ ನೆಮ್ಮದಿ ಅನಿವಾರ್ಯವಾಗಿದೆ. ಈ ಸಮಯದಲ್ಲಿ ಹಸಿದ ನಾಯಿಯಂತೆ ಪ್ರೀತಿಯನ್ನು ಬಯಸಿರುವುದಾಗಿ ಹೇಳಿಕೊಂಡಿದ್ದಾರೆ. ಹಾಗೆಯೇ 'ನಾಯಿ' ಒಂದು ಸಂಕೇತವಾಗಿ ಬಳಕೆಯಾಗಿದೆ. ಹಸಿದಾಗ 'ಯಾರಾದರೂ' ಎಂದು ಹೇಳುವಲ್ಲಿ ಪ್ರೀತಿಯನ್ನು ಇಂತಹ ವ್ಯಕ್ತಿಯಿಂದಲೇ ಪಡೆಯಬೇಕೆಂಬ ನಿರೀಕ್ಷೆಯಿಲ್ಲ. ಯಾರಿಂದಲಾದರೂ ಪ್ರೀತಿ ದೊರೆತರೆ ಅಷ್ಟೇ ಸಾಕು, ಅದನ್ನು ಧನ್ಯತೆಯಿಂದ ಸ್ವೀಕರಿಸುವ ಮನೋಭಾವದ ಧ್ವನಿ ಅವರ ನಿರೂಪಣೆಯಲ್ಲಿದೆ.

ಹಾಗೆಯೇ 'ನಾನು ನಿಮ್ಮ ನಾಯಿಮರಿ ಆಗಿರಲೇ? ನನ್ನನ್ನು ನಾಯಿ ಮಾಡಿಕೊಳ್ಳಿ' ಎನ್ನುವ ಧ್ವನಿಯಲ್ಲಿ ನಾಯಿಗಿರುವ ಹಸಿವಿನ ದಾಹ ವ್ಯಕ್ತವಾಗುತ್ತದೆ. ಅಂದರೆ ಪ್ರೀತಿಯನ್ನು ಪಡೆಯುವ ಬಯಕೆಯಿದೆ. ಹಾಗೆಯೇ ಒಂದು ತುತ್ತು ಅನ್ನ ನೀಡಿದವರಿಗೆ ನಾಯಿ ನಿಯತ್ತಿನಿಂದ ಇರುವಂತೆ ಪ್ರೀತಿಯನ್ನು ನೀಡಿದವರಿಗೆ ಮರು ಪ್ರೀತಿಯನ್ನು ನೀಡುವ ಆಶಯ ಕಾಣುತ್ತೇವೆ. ಅಂದರೆ ನಾಯಿಮರಿಗೆ ಪ್ರೀತಿ ತೋರಿಸಿದಷ್ಟು ನಾಯಿಯ ಪ್ರೀತಿಯು ಅದರ ಮಾಲಿಕನಿಗೆ ಸೇರುತ್ತದೆ ಎಂಬ ಆಶಯವಿದೆ. ಅಂದರೆ ತನಗೆ ಒಂದು ಚೂರು ಪ್ರೀತಿ ದೊರೆತರೂ ಅದಕ್ಕಿಂತ ಹೆಚ್ಚಿನದಾದುದನ್ನು ನೀಡಬಲ್ಲೆ ಎಂಬ ಆತ್ಮವಿಶ್ವಾಸ ಅವರ ಈ ನಿರೂಪಣೆಯಲ್ಲಿ ಎದ್ದು ಕಾಣುತ್ತದೆ.

ಪ್ರತಿಭಾ ಅವರ ಪ್ರೀತಿಯ ತೀವ್ರತೆ ಎಷ್ಟರಮಟ್ಟಿಗೆ ಇತ್ತೆಂದರೆ 'ನಾನು ಭೋರ್ಗರೆವ ಜಲಪಾತ ಆದರೆ ಅವರು ನಡುಗಡ್ಡೆಯ ನಿಶ್ಚಲ ಬಂಡೆಯಾಗಿದ್ದರು. ನಾನು ಸುತ್ತಮುತ್ತ ಕಟ್ಟೆ, ಕೆರೆ, ನಲಿದಾಡುವ ಅಲೆಯಾದರೆ ಅವರು ತಣ್ಣಗೆ ಬಿದ್ದುಕೊಂಡ ತಡಿಯಾಗಿದ್ದರು' ಎಂದು ಹೇಳಿಕೊಂಡಿದ್ದಾರೆ. ತನ್ನನ್ನು ಜಲಪಾತಕ್ಕೆ ಹೋಲಿಸಿಕೊಳ್ಳುತ್ತಾರೆ. ಅಂದರೆ ಜಲಪಾತಕ್ಕೆ ಯಾವುದೇ ಅಡೆತಡೆಗಳಿಲ್ಲ. ಒಳ್ಳೆಯದು ಕೆಟ್ಟದ್ದು ಎಂಬುದು ಇರುವುದಿಲ್ಲ. ಅದು ತನ್ನಲ್ಲಿ ಸೌಂದರ್ಯ ಮತ್ತು ಅಪಾಯಗಳೆರಡನ್ನು ಒಳಗೊಂಡಿರುತ್ತದೆ. ಪ್ರಕೃತಿಯಲ್ಲಿ ಒಂದು ಸಮತೋಲನ ಇದೆ. ಅದೇ ರೀತಿ ಪ್ರೀತಿಯಲ್ಲೂ ಒಂದು ಸಮತೋಲನ ಕಾಯ್ದುಕೊಂಡು ಹೋಗುವ ಗುಣವಿದೆ. ಅದಕ್ಕೆ ಒಳಿತು ಕೆಡುಕುಗಳ ಅರಿವಿಲ್ಲ. ಆದರೆ ಸಮಾಜದಲ್ಲಿ ಇರುವವರಿಗೆ ಪ್ರತಿಭಾ ಅವರ ಪ್ರೀತಿಯ ಹುಡುಕಾಟವು 'ನೈತಿಕ' ಚೌಕಟ್ಟನ್ನು ದಾಟಿ ಮುಂದೆ ಹೋಗುತ್ತಿರುವ ಸಂಗತಿಯಾಗಿ ಕಾಣುತ್ತದೆ. ಪ್ರತಿಭಾ ಅವರ ಪ್ರೀತಿಯು ಸಮಾಜದ ದೃಷ್ಟಿಯಲ್ಲಿ ಅನೈತಿಕವಾಗಿದೆ. ಇಲ್ಲಿ ಬರವಣಿಗೆಯ ಮೂಲಕ ಪ್ರತಿಭಾ ಅವರು ಸಾಮಾಜಿಕ ಚೌಕಟ್ಟನ್ನು ಮೀರದ ಹಾಗೆ ಅವರ ಪ್ರೀತಿ ಬಿಂಬಿಸಿದ್ದಾರೆ. ಇದು ಬರವಣಿಗೆಗೆ ಇರುವ ಶಕ್ತಿ ಮತ್ತು ಮಿತಿ ಎರಡೂ ಆಗಿದೆ.

ಪ್ರತಿಭಾ ಅವರು ಪ್ರೀತಿಯನ್ನು ಮೊದಮೊದಲು ಗೌಪ್ಯವಾಗಿ ಇಡಬಯಸಿದರು. ತನ್ನ ಕುಟುಂಬದವರಿಗೆ, ಗಂಡ, ಮಕ್ಕಳಿಗೆ ತಿಳಿಯಬಾರದೆಂದು ಸುಳ್ಳಿನ ಸರಮಾಲೆಯನ್ನು ಸೃಷ್ಟಿಸಿದವರು, ಬರು ಬರುತ್ತಾ ಅವರ ಪ್ರೀತಿಯನ್ನು ಬಹಿರಂಗವಾಗಿ ಹೇಳಲು ಪ್ರಯತ್ನಿಸಿದಂತಿದೆ. ಹಾಗೆ ಹೇಳುವಾಗ ಸಮಸ್ತ ಜನ ಜಂಗುಳಿಯ ನಡುವೆ, ಇಡೀ ಭೂಮಿ, ಆಕಾಶಗಳ ಸಾಕ್ಷಿಯಲ್ಲಿ ಪಂಚಭೂತಗಳ ಸನ್ನಿಧಿಯಲ್ಲಿ ಪ್ರತಿಭಾ ಪ್ರೀತಿಸುವ 'ಅವರು' ಎನ್ನುವ ವ್ಯಕ್ತಿ ಮುತ್ತಿಟ್ಟಾಗ, ಆ ಪ್ರೀತಿ ಬಹಿರಂಗವಾದ ರೂಪು ಪಡೆದಂತಿದೆ. ಭೂಮಿ, ಆಕಾಶ, ಪಂಚಭೂತಗಳು ಆತ್ಮಕಥೆಯಲ್ಲಿ ಸಂಕೇತಗಳಾಗಿ ಬಳಕೆಯಾಗಿವೆ. ಅಂದರೆ ಸಮಾಜದಲ್ಲಿ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯೊಂದಿಗೆ 'ನೈತಿಕ' ಸಂಬಂಧ ಹೊಂದಬೇಕಾದರೆ ಪಂಚಭೂತಗಳ ಸನ್ನಿಧಿಯಲ್ಲಿ ಮದುವೆ ಎಂಬ ಹೆಸರಿನ ಮೂಲಕ ನಡೆಯುತ್ತದೆ. ಆದರೆ ಮದುವೆಯೇ ಇಲ್ಲದೆ ಆ ಎಲ್ಲಾ ಚೌಕಟ್ಟನ್ನು ದಾಟಿ ಪ್ರತಿಭಾ ಅವರ ಪ್ರೀತಿಯು ಇಲ್ಲಿ ವ್ಯಕ್ತವಾಗಿದೆ. ಆಕಾಶ, ಭೂಮಿ, ಪಂಚಭೂತಗಳ ಸನ್ನಿಧಿಯಲ್ಲಿ ಅವರ ಪ್ರೀತಿ ವ್ಯಕ್ತವಾದಾಗ ಅದು 'ಅನೈತಿಕ' ಸಂಬಂಧವಾಗಿರದೆ 'ನೈತಿಕ' ಸಂಬಂಧದ ರೂಪ ಪಡೆದಿರುವುದನ್ನು ಗುರುತಿಸಬಹುದು.

ಹಾಗೆಯೇ, ಇನ್ನೊಂದು ಕಡೆ ಐಫಿಲ್ ಟವರ್, ಎಂಪೈರ್ ಸ್ಟೇಟ್ ಬಿಲ್ಡಿಂಗ್ ಮತ್ತು ಯುಟಿಲಿಟಿ ಬಿಲ್ಡಿಂಗ್ ಇವುಗಳು ಸಂಕೇತಗಳಾಗಿ ಬಳಕೆಯಾಗಿವೆ. ಅವರ ಪ್ರೀತಿಗೆ ಮುಖವಾಡ ಸಾಧ್ಯವಾಗುತ್ತಿರಲಿಲ್ಲ. ಯಾರ ಮುಂದೆ ಬೇಕಾದರೂ ಹೇಳಲು ಹಿಂಜರಿಯದಿರುವುದು ಈ ಸಂಕೇತಗಳ ಬಳಕೆಯ ಹಿಂದಿನ ಉದ್ದೇಶದಂತಿದೆ. ಏಕೆಂದರೆ ಐಫಿಲ್ ಟವರ್ ಮೇಲಿನಿಂದ ಎಲ್ಲರಿಗೂ ಕೇಳುವಂತೆ, ಯಾವುದೇ ಮುಜುಗರವಿಲ್ಲದೆ ಪ್ರೀತಿಯನ್ನು ನಿವೇದನೆ ಮಾಡಿಕೊಳ್ಳುವ ತವಕವಿದೆ. ಯಾರಿಗಾದರೂ ಅವರ ಬಗ್ಗೆ ಬೇಸರ ಮೂಡಬಹುದು ಎಂಬ ಭಾವದಿಂದ ದೂರವಾದ ವ್ಯಕ್ತಿತ್ವ ಎದ್ದು ಕಾಣುತ್ತದೆ. ಇಲ್ಲಿ ಪ್ರತಿಭಾ ಅವರು ಅವರ ಪ್ರೀತಿಯನ್ನು ಮುಚ್ಚಿಡಲು ಪ್ರಯತ್ನಿಸಿದರೆ ಅದು ಅನೈತಿಕವಾಗಬಹುದಾಗಿತ್ತು. ಆದರೆ ಪ್ರೀತಿಯನ್ನು ಧೈರ್ಯವಾಗಿ ಎಲ್ಲರ ಮುಂದೆ ಹೇಳಿದಾಗ ಅದು ಅನೈತಿಕ ಸಂಬಂಧದ ಚೌಕಟ್ಟನ್ನು ಮೀರಿ ನಿಲ್ಲುತ್ತದೆ ಎಂಬ ಆಶಯವು ಇಲ್ಲಿ ವ್ಯಕ್ತವಾಗಿದೆ. ಅದೇ ರೀತಿ ಸಮಾಜದ ಓರೆಕೋರೆಗಳಿಗೆ ಗಮನ ನೀಡದಿರುವುದು ಆತ್ಮಕಥೆಯನ್ನು ಉನ್ನತ ಸ್ಥಾನದಲ್ಲಿ ನಿರೂಪಿಸಲು ಪ್ರಯತ್ನಿಸಿದಂತಿದೆ.

ಆಳವಾದ ಪ್ರೀತಿಯ ಬಯಕೆಯನ್ನು ಹೊಂದಿರುವ ಲೇಖಕಿಯು ತನ್ನನ್ನು ತಾನು ಜಲಪಾತಕ್ಕೆ ಹೋಲಿಸಿಕೊಂಡಿದ್ದಾರೆ. ಇಲ್ಲಿ ಜಲಪಾತವು ಪ್ರೀತಿಯ ಆಳವನ್ನು ತಿಳಿಸುವ ಸಂಕೇತವಾಗಿ ಬಳಕೆಗೊಂಡಿದೆ. ಅಂದರೆ ಜಲಪಾತಕ್ಕೆ ಯಾರ ಹಂಗೂ ಇರುವುದಿಲ್ಲ. ಅದರ ಪಾಡಿಗೆ ಅದು ಎತ್ತರದ ಜಾಗದಿಂದ ಕೆಳಕ್ಕೆ ಧುಮ್ಮಿಕ್ಕುತ್ತಿರುತ್ತದೆ. ಅದನ್ನು ನೋಡುವ ಮನಸ್ಸುಗಳಿಗೆ ಅಪಾರವಾದ ಸಂತೋಷ ಕೊಡುತ್ತದೆ. ಯಾವುದೇ ಬೇಧ ಭಾವ ಮಾಡುವುದಿಲ್ಲ. ಸೌಂದರ್ಯವನ್ನು ಆಸ್ವಾದಿಸುವವರಿಗೆ ಮುದ ನೀಡುತ್ತದೆ. ಅದೇ ರೀತಿಯಾಗಿ ಪ್ರತಿಭಾರ ಪ್ರೀತಿಯೂ ಕೂಡ

ಯಾವುದೇ ವ್ಯಕ್ತಿ ಎಂಬ ಬೇಧ ಭಾವವಿಲ್ಲದೆ, ಅವರನ್ನು ಇಷ್ಟ ಪಡುವ ಮನಸ್ಸಿಗೆ ಪ್ರೀತಿ ತೋರುವ ಮನೋಭಾವವಿದೆ. ಯಾರಾದರೂ ಪ್ರೀತಿಯನ್ನು ಹರಸಿ ಬಂದರೆ ಅವರು ಅದರ ಭರದಲ್ಲಿ ನಿಲ್ಲಲಾಗದೆ ಕೊಚ್ಚಿಹೋಗುತ್ತಿದ್ದರು. ಇಲ್ಲಿ ಅವರ ಪ್ರೀತಿಯ ಆಳ ವ್ಯಕ್ತವಾಗಿದೆ. ಜಲಪಾತದ ಅಡಿಯಲ್ಲಿ ನಿಂತರೆ ವೇಗವಾಗಿ ಕೊಚ್ಚಿ ಹೋಗುವಂತೆ ಅವರ ಪ್ರೀತಿಯು ಜಲಪಾತದ ಶಕ್ತಿಯನ್ನು ಹೊಂದಿದೆ. ಯಾರಾದರೂ ಪ್ರತಿಭಾ ಅವರ ಪ್ರೀತಿಯಡಿಯಲ್ಲಿ ನಿಂತರೆ ಅವರೂ ಕೂಡ ಪ್ರೀತಿಯಲ್ಲಿ ಮುಳುಗಿ, ತೇಲಿ ಕೊಚ್ಚಿ ಹೋಗುವ ಅಪಾಯವೂ ಇದೆ. ಕಾರಣ, ಅವರ ಪ್ರೀತಿಯ ತೀವ್ರತೆಯೇ ಆಗಿದೆ. ಅದು ಸದಾ ಭೋರ್ಘರೆವ ಜಲಪಾತದಂತೆ. ಅದರ ಸೌಂದರ್ಯವನ್ನೂ ಮತ್ತು ಆರ್ಭಟವನ್ನೂ ಸಹಿಸುವವರು ಮಾತ್ರ ಅವರ ಪ್ರೀತಿಯ ವ್ಯಾಪ್ತಿಯಲ್ಲಿ ಬರಲು ಸಾಧ್ಯ.

'ಹಸಿದ ನಾಯಿಯನ್ನು ಕರೆದು ಯಾರಾದರೂ ಒಂದು ಚೂರು ಬ್ರೆಡ್ಡು ಕೊಟ್ಟರೂ ಧನ್ಯತೆಯಿಂದ ತಿನ್ನುವಂತೆ' ಈ ವಾಕ್ಯವನ್ನು ಗಮನಿಸಿದಾಗ ಪ್ರತಿಭಾ ಅವರು ಅವರನ್ನು ಹಸಿದ ನಾಯಿಗೆ ಹೋಲಿಕೆ ಮಾಡಿಕೊಂಡಿದ್ದಾರೆ. ಹಸಿದ ನಾಯಿಯನ್ನು ಸಂಕೇತವಾಗಿ ಬಳಸಿದ್ದಾರೆ. ಸದಾ ಜಗಳ, ಅವಮಾನ, ನೋವು, ಸಂಸಾರಿಕ ತಾಪತ್ರಯಗಳಿಂದ ನೊಂದ ಮನಸ್ಸು ಯಾರಿಂದಲಾದರೂ ಶಾಂತಿ, ನೆಮ್ಮದಿಯನ್ನು ಪಡೆಯುವ ಅಥವಾ ಪ್ರೀತಿಯನ್ನು ಪಡೆಯಲು ಹಂಬಲಿಸುತ್ತಾರೆ. ಹಾಗೆಯೇ ಯಾವ ವ್ಯಕ್ತಿಯಾದರೂ ಪ್ರೀತಿಯನ್ನು ಕೊಡಲು ಮುಂದೆ ಬಂದಾಗ ಆ ಪ್ರೀತಿಯನ್ನು ಧನ್ಯತಾ ಭಾವದಿಂದ ಒಪ್ಪಿ ಸ್ವೀಕರಿಸುವ ಭಾವವಿದೆ. ಅಂದರೆ ಪ್ರೀತಿಯನ್ನು ಪಡೆಯಲು ನಿರ್ದಿಷ್ಟ ವ್ಯಕ್ತಿ, ವಯಸ್ಸು, ಜಾತಿ ಮೊದಲಾದವುಗಳನ್ನು ಗಮನಿಸದೆ ಕೇವಲ ಪ್ರೀತಿಯ ಬಯಕೆಯನ್ನು ಮಾತ್ರ ಈಡೇರಿಸಿಕೊಳ್ಳುವ ಮನೋಭಾವವಿದೆ. ಪ್ರೀತಿಯ ಹಸಿವನ್ನು ತೀರಿಸಿಕೊಳ್ಳುವಾಗ ಸಾಮಾಜಿಕ ಚೌಕಟ್ಟನ್ನು ಬದಿಗಿರಿಸಿ ವೈಯುಕ್ತಿಕತೆಗೆ ಹೆಚ್ಚಿನ ಗಮನ ನೀಡಿರುವುದು ಕಂಡುಬರುತ್ತದೆ. ಇಲ್ಲಿ ಜೀವನದಲ್ಲಿ ಪ್ರೀತಿಯನ್ನು ಪಡೆಯುವುದಷ್ಟೆ ಪ್ರಮುಖವಾಗಿದೆ ಎಂಬುದನ್ನು ಹೇಳಿದಂತಿದೆ. ಆತ್ಮಕಥೆಯಲ್ಲಿ ಪ್ರೀತಿಯ ಹುಡುಕಾಟ ಅಥವಾ ಪ್ರೀತಿಯ ಹಸಿವನ್ನು ನೀಗಿಸಿಕೊಳ್ಳುವುದಕ್ಕೆ ಹೆಚ್ಚಿನ ಗಮನ ಕೊಡಲಾಗಿದೆ.

'ತೊಟ್ಟಿಯೊಳಗೆ ಎಸೆಯಲ್ಪಟ್ಟಂತೆ' ಎಂದು ಆಸ್ಪತ್ರೆಯ ವಾತಾವರಣವನ್ನು ಅದಕ್ಕೆ ಹೋಲಿಸಿದ್ದಾರೆ. ಎಂದೂ ಕಾಣದವರಿಗೆ ಆಸ್ಪತ್ರೆಯಲ್ಲೇ ಇರಬೇಕಾದ ಅನಿವಾರ್ಯ ಪರಿಸ್ಥಿತಿ ಬಂದೊದಗಿದಾಗ, ಹೊಂದಿಕೊಳ್ಳುವುದು ತುಂಬಾ ಕಷ್ಟ. ಕಾರಣ ಆಸ್ಪತ್ರೆ ಎಲ್ಲಾ ರೀತಿಯಾದ ಜನರಿಂದ ಎಲ್ಲಾ ವಿಧದ ರೋಗಗಳಿಂದ ನರಳುವವರ ತಾಣ. ನಿಜವಾದ ಬದುಕು ಆಸ್ಪತ್ರೆಯಲ್ಲಿ ಕಾಣುತ್ತದೆ. ರೋಗಿಗಳ ನರಳಾಟ, ಚೀರಾಟ, ಶೋಚನೀಯವಾದದ್ದು, ಒಂದು ಗಳಿಗೆ ಇದ್ದಂತೆ ಇನ್ನೊಂದು ಗಳಿಗೆ ಇರುವುದಿಲ್ಲ. ಸಾವು ಬದುಕಿನ ಮಧ್ಯೆ ರೋಗಿಗಳ ಜೀವ ಹೊಯ್ದಾಡುತ್ತಿರುತ್ತದೆ. ಯಾವ ರೀತಿ ಬೇಡವಾದ ವಸ್ತುಗಳನ್ನು ಕಸದ ತೊಟ್ಟಿಯೊಳಗೆ ಎಸೆಯಲ್ಪಡಲಾಗುತ್ತದೆಯೋ

ಅದೇ ರೀತಿ ಆಸ್ಪತ್ರೆಯು ರೋಗಿಗಳ ಆಗರ. ಇಂತಹ ಒಂದು ವಾತಾವರಣಕ್ಕೆ ಹೊಂದಿಕೊಳ್ಳುವುದು ತುಂಬಾ ಕಷ್ಟ ಎಂದೂ ಆಸ್ಪತ್ರೆಗೆ ಕಾಲಿಡದ ಪ್ರತಿಭಾ ಅವರು ಆಸ್ಪತ್ರೆ ಮತ್ತು ಅಲ್ಲಿಯ ಪರಿಸ್ಥಿತಿಗೆ ಹೊಂದಿಕೊಳ್ಳುವ ಸವಾಲುಗಳನ್ನು ಬಣ್ಣಿಸಿದ್ದಾರೆ.

'ಈ ಸಾವಿತ್ರಿಗೆ ಕುಂಕುಮ ಕೊಡು' ಈ ವಾಕ್ಯದಲ್ಲಿ ಸಾವಿತ್ರಿ ಎಂಬ ನಾಮಪದವು ಪೂರಾಣದಲ್ಲಿ ಬರುವಂತದ್ದಾಗಿದೆ. ತನ್ನ ಗಂಡನನ್ನು ಉಳಿಸಿಕೊಳ್ಳಲು ಸಾವಿತ್ರಿಯು ಮಾಡಿದ ಸಾಧನೆ ಅಪಾರ. ತುಂಬಾ ಕಷ್ಟಪಟ್ಟು ಛಲದಿಂದ ಮರಳಿ ಗಂಡನನ್ನು ಪಡೆದಿರುವುದಕ್ಕೆ ಇತಿಹಾಸದಲ್ಲಿ ಅನೇಕ ಕಥೆಗಳಿರುವುದನ್ನು ಕಾಣುತ್ತೇವೆ. ಹಾಗೆಯೇ ಪ್ರತಿಭಾರವರು ಅವರ ಗಂಡನ ಪ್ರಾಣವನ್ನು ಕಾಪಾಡಲು ಹಲವಾರು ರೀತಿಯ ಕಷ್ಟಗಳನ್ನು ಎದುರಿಸಿದ್ದಾರೆ, ಹಾಗೆಯೇ ಒಬ್ಬ ಹೆಣ್ಣಾಗಿದ್ದುಕೊಂಡು, ಹಣವನ್ನು ಹೊಂದಿಸಿಕೊಂಡು ಮಕ್ಕಳನ್ನು ಪಾಲನೆ ಮಾಡಿದ ರೀತಿಯು ಮೆಚ್ಚುವಂತಹುದಾಗಿದೆ. ಸಾವಿನ ಅಂಚಿನಲ್ಲಿದ್ದ ನಂದಕುಮಾರ್ ಅವರನ್ನು ಕಾಪಾಡಿದ ಮತ್ತು ಹೋರಾಟದ ಛಲದ ಗುಣವನ್ನು ಹೊಂದಿರುವುದಕ್ಕಾಗಿ ಪ್ರತಿಭಾ ಅವರನ್ನು ಸಾವಿತ್ರಿಗೆ ಹೋಲಿಸಿದ್ದಾರೆ. ಆದರೆ ಪ್ರತಿಭಾರಿಗೆ ಸಾವಿತ್ರಿಯಾಗಬೇಕು ಎಂಬ ಹಂಬಲವಿರಲಿಲ್ಲ. ಕೇವಲ ಗಂಡನ ಮೇಲೆ ಇದ್ದ ಪ್ರೀತಿಗಾಗಿ ಅವರು ಕಷ್ಟಪಟ್ಟಿರುವುದು ಕಂಡುಬರುತ್ತದೆ. ಪ್ರತಿಭಾ ಅವರೇ ಹೇಳಿರುವಂತೆ ಸತಿ ಸಾವಿತ್ರಿಯಾಗಿರುವುದು ಅವರಿಗೆ ಇಷ್ಟವಿರಲಿಲ್ಲ. ಅವರು ಬಯಸಿದುದು ಕೇವಲ ಪ್ರೀತಿಯನ್ನು. ಒಬ್ಬ ಸಾಮಾನ್ಯ ಹೆಣ್ಣಿನ ಪ್ರೀತಿಯನ್ನು. ಅಂದರೆ ಅವರು ಯಾವುದೇ ಬಿರುದನ್ನು ಪಡೆಯುವ ಉದ್ದೇಶದಿಂದ ಕೆಲಸ ಮಾಡುತ್ತಿರಲಿಲ್ಲ. ಅವರು ಬಯಸಿದ ಪ್ರೀತಿಯು ಯಾವ ಕಡೆಯಿಂದಲಾದರೂ ಸಿಗುತ್ತದೆ ಎಂದು ಗೊತ್ತಾದಾಗ ಪ್ರತಿಭಾ ಏನು ಬೇಕಾದರೂ ಮಾಡಲು ಸಿದ್ಧ ಎಂಬ ಮನಸ್ಥಿತಿಯು ಎದ್ದು ಕಾಣುತ್ತದೆ.

ನಂದಕುಮಾರ್ ಅವರು ಅನಾರೋಗ್ಯದಿಂದ ಪಾರಾಗಲೆಂದು ತಿರುಪತಿಯಲ್ಲಿ ಉರುಳುಸೇವೆ ಮಾಡಿದ ಪ್ರತಿಭಾ, ಅವರು ಎಂಬ ವ್ಯಕ್ತಿಗೆ ಅನಾರೋಗ್ಯವಾದಾಗಲೂ ತಿರುಪತಿಗೆ ಹೋಗಿ ಉರುಳುಸೇವೆ ಮಾಡಿ ಬರುತ್ತಾರೆ. ದೇವರಲ್ಲಿ ನಂಬಿಕೆಯನ್ನು ಹೊಂದಿಲ್ಲದೆ ಇದ್ದರೂ ಪ್ರೀತಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಮಾಡಿದ ಸೇವೆಯು ಪ್ರಶಂಸನೀಯವಾಗಿದೆ. ಇಲ್ಲಿ ಪ್ರೀತಿಯನ್ನು ಪಡೆಯುವುದಕ್ಕೆ ಮತ್ತು ಉಳಿಸಿಕೊಳ್ಳುವುದಕ್ಕೆ ಮಾಡಿದ ಪ್ರಯತ್ನ ಕಂಡು ಬಂದಿದೆ. ಹೆಣ್ಣು ನಿಸ್ವಾರ್ಥದಿಂದ ಬೇರೆಯವರಿಗೋಸ್ಕರ ಪಟ್ಟ ಪಾಡು ಗೊತ್ತಾಗುತ್ತದೆ. ಹಾಗೆಯೇ ಕಠಿಣವಾದ ಪರಿಸ್ಥಿತಿಯನ್ನು ಎದುರಿಸಿ ಅದರಿಂದ ಬಿಡುಗಡೆ ಪಡೆದು ಜಯಶೀಲಳಾಗಿರುವುದು ಹೆಮ್ಮೆಯನ್ನು ತರುವಂತದ್ದಾಗಿದೆ.

'ನಿನ್ನದು ಹುಲಿಮದ್ದು ಅತಿಯಾದರೆ ಅಪಾಯ' ಈ ವಾಕ್ಯದಲ್ಲಿ ಅತಿಯಾದ ಪ್ರೀತಿಯನ್ನು ಹುಲಿಮದ್ದಿಗೆ ಹೋಲಿಕೆ ಮಾಡಲಾಗಿದೆ. ಪ್ರತಿಭಾ ಅವರ ಏಕ ಮನಸ್ಸಿನ ನಿಷ್ಠೆ ಪ್ರೀತಿಯು ಇನ್ನೊಬ್ಬರಿಗೆ ಉಸಿರು ಕಟ್ಟಿಸುವ ಭಾವನೆಯನ್ನು ಉಂಟುಮಾಡುವುದರ ಜೊತೆಗೆ ಕಿರಿಕಿರಿಯನ್ನು

ಹುಟ್ಟುಹಾಕುತ್ತಿತ್ತು. ಅವರ ಪ್ರೀತಿಯು ಕಟ್ಟಿ ಹಾಕುವ ಸರಪಳಿಯಂತೆ ಭಾಸವಾಗತೊಡಗಿದಾಗ ಈ ವಾಕ್ಯವು ಸಮಂಜಸದಂತೆ ಕಂಡಿದೆ. ಕಾರಣ, ಅತಿಯಾದರೆ ಅಮೃತವೂ ವಿಷ. ಯಾವುದೇ ವಿಷಯ ವಸ್ತುವನ್ನು ಪದೇ ಪದೇ ಕೇಳಿದಾಗ, ಉಪಯೋಗಿಸಿದಾಗ ಅದು ಬೇಸರ ತರುವುದು ಸಹಜ. ಪ್ರತಿಭಾ ಅವರ ಪ್ರೀತಿಯಲ್ಲಿ ಒತ್ತಾಯ ಇಲ್ಲದಿದ್ದರೂ ಅದು ಬೇರೆಯವರ ದೃಷ್ಟಿಯಲ್ಲಿ ಒತ್ತಾಯದಂತೆ ಕಂಡಿದೆ. ಆದರೆ ಪ್ರೀತಿಯು ಯಾವುದೇ ಸ್ವಾರ್ಥವನ್ನು ಹೊಂದಿರದಿದ್ದರೂ, ಏನನ್ನೂ ನಿರೀಕ್ಷಿಸದಿದ್ದರೂ ಬೇರೆಯವರಿಗೆ ಅದು ಮುಳ್ಳಾಗಿ ಕಾಣುತ್ತಿದ್ದುದು ಮಾನವ ಸಹಜ ಗುಣದಂತಿದೆ. ಈ ದೃಷ್ಟಿಕೋನವನ್ನು ಅರಿತ ಪ್ರತಿಭಾರು ಪ್ರೀತಿಯನ್ನು ಹರಸುತ್ತಾ ಹೊರಟಿರುವುದನ್ನು ನೋಡಬಹುದು.

ಪ್ರಸ್ತುತ ಆತ್ಮಕಥೆಯಲ್ಲಿ ಪ್ರತಿಭಾ ಅವರು ಪ್ರೀತಿಯ ಹುಡುಕಾಟದ ತೀವ್ರತೆಯನ್ನು ಅನೇಕ ಉಪಮೆ ಮತ್ತು ರೂಪಕಗಳಲ್ಲಿ ನಿರೂಪಿಸಿದ್ದಾರೆ. 'ಅಗ್ನಿಪರ್ವತ ಸಿಡಿದಂತೆ ಸಿಡಿದೆ.' ಎನ್ನುತ್ತಾರೆ. ಅಗ್ನಿಪರ್ವತವು ಯಾವಾಗಲೂ ಸಿಡಿಯುವುದಿಲ್ಲ. ಇದ್ದಕ್ಕಿದ್ದ ಹಾಗೆ ಭೂಮಿಯ ಒಳಗಿಂದ ಉಷ್ಣಾಂಶ ಹೆಚ್ಚಾಗಿ, ಜ್ವಾಲಾಮುಖಿಯು ಒಮ್ಮಿಂದೊಮ್ಮೆಲೆ ಹೊರ ಬರುತ್ತದೆ. ಈ ಪ್ರಕ್ರಿಯೆಯು ಅಗ್ನಿಪರ್ವತ ಸಿಡಿಯುವಿಕೆಯಾಗಿದೆ. ಅಂದರೆ ಅಗ್ನಿಯಿಂದ ತುಂಬಿದ ಲಾವಾರಸ ಭೂಮಿಯ ಒಳಗಿಂದ ಹೊರ ಬರುವ ಕ್ರಿಯೆಯಾಗಿದೆ. ಇಲ್ಲಿ ಒತ್ತಡ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಒಳಗಿನಿಂದ ಒತ್ತಡ ಹೆಚ್ಚಾಗಿ ಅಲ್ಲಿ ಉಳಿಯಲು ಸಾಧ್ಯವಿಲ್ಲದೇ ಇರುವ ಸಂದರ್ಭದಲ್ಲಿ ಅದು ಯಾವ ಕಡೆಯಿಂದಲಾದರೂ ಹೊರಬರಲು ಪ್ರಯತ್ನಿಸುತ್ತದೆ. ಹಾಗೆಯೇ ಅದು ಹೊರ ಬಂದಾಗ ಅದರ ಪರಿಣಾಮ ಸುಗಮವಾಗಿರದೆ ಅಪಾಯವನ್ನು ತಂದೊಡ್ಡುತ್ತದೆ. ಅದೇ ರೀತಿಯಾಗಿ ಪ್ರತಿಭಾ ಅವರ ಗಂಡ ನಂದಕುಮಾರರ ಕೋಪದ ಪರಿಣಾಮವನ್ನು ಆತ್ಮಕಥೆಯಲ್ಲಿ ಅಗ್ನಿಪರ್ವತ ಸಿಡಿಯುವುದಕ್ಕೆ ಹೋಲಿಕೆ ಮಾಡಿದ್ದಾರೆ. ಇಲ್ಲಿ ಪ್ರತಿಭಾ ಅವರು ಗಂಡನಿಗೆ ತಿಳಿಯದಂತೆ ಯಾವುದೇ ಕೆಲಸ ಮಾಡಿದರೂ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಹೆಂಡತಿ ಗಂಡನ ಅನುಮತಿಯಿಲ್ಲದೆ, ಎಲ್ಲೂ ಹೋಗುವ ಹಾಗಿಲ್ಲ, ಏನೂ ಖರೀದಿ ಮಾಡುವಂತಿಲ್ಲ, ಯಾವ ಕೆಲಸವನ್ನು ಮಾಡಬಾರದು ಎಂಬ ಮನಸ್ಥಿತಿಯನ್ನು ಹೊಂದಿರುತ್ತಾರೆ. ಅಂಥವರ ವಿರುದ್ಧವಾಗಿ ಹೋದಾಗ ಒಮ್ಮೆಲೇ ಅಗ್ನಿಪರ್ವತ ಸಿಡಿಯುವುದು ಸಹಜವಾದ ಸಂಗತಿಯಾಗಿದೆ. ಈ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ಯಾವತ್ತಿಗೂ ಸ್ವಂತ ನಿರ್ಣಯ ತೆಗೆದುಕೊಳ್ಳುವ ಹಾಗಿಲ್ಲ. ಹಾಗೆಯೇ ಏನೇ ಇದ್ದರೂ, ಇಲ್ಲದಿದ್ದರೂ ಆದರೂ, ಆಗದಿದ್ದರೂ, ಪರಿಸ್ಥಿತಿಗೆ ಹೊಂದಿಕೊಂಡು ಹೋಗಲೇಬೇಕಾದ ಪರಿಸ್ಥಿತಿಯು ಇನ್ನೂ ಮುಂದುವರಿದಿದೆ. ಇದನ್ನು ಪ್ರತಿಭಟಿಸಿದಾಗ ಅಗ್ನಿಪರ್ವತ ಸಿಡಿದಾಗ ಏನು ಪರಿಣಾಮವಾಗುತ್ತದೆಯೋ ಅದನ್ನು ಶಾಂತರೀತಿಯಿಂದ ಹೆಣ್ಣು ಸಹಿಸಿಕೊಳ್ಳಬೇಕು ಎಂಬ ಪ್ರತೀತಿಯೂ ಇದೆ. ಇಲ್ಲಿನ ಲೇಖಕಿಯ ಜೀವನದಲ್ಲಿಯೂ ಇದೇ ಪರಿಸ್ಥಿಯನ್ನು ಕಾಣಬಹುದು. ಅದನ್ನು ಅವರು ಹೋಲಿಕೆ ಮಾಡಿರುವುದು

ಮಾರ್ಮಿಕವಾಗಿದೆ. ಭಾಷೆಯನ್ನು ತಮ್ಮ ಆತ್ಮಕಥೆಯ ನಿರೂಪಣೆಯಲ್ಲಿ ಪ್ರತಿಭಾ ಅವರು ಪರಿಣಾಮಕಾರಿಯಾಗಿ ಬಳಸಿರುವುದನ್ನು ಕಾಣಬುಹುದು.

ಲೇಖಕಿಯ ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ನೋಡಬಹುದು. 'ನೀನಷ್ಟು ಸಮುದ್ರದ ಹಾಗೆ!' ಇದು ಅತ್ಯಂತ ಪರಿಣಾಮಕಾರಿಯಾದ ಮಾತು. ಸಮುದ್ರವನ್ನು ನೋಡಿದಾಗ ಅದರ ಆಳ ತಿಳಿಯುವುದಿಲ್ಲ. ಹಾಗೆಯೇ ಅದರ ಒಂದು ತುದಿಯಿಂದ ನಿಂತು ಇನ್ನೊಂದು ತುದಿಯನ್ನು ನೋಡಲು ಸಾಧ್ಯವಾಗುವುದಿಲ್ಲ. ಎಲ್ಲಿ ನೋಡಿದರೂ ನೀರು ಮಾತ್ರ ಕಾಣುತ್ತದೆ. ಅದರ ದಡ ಕಾಣಿಸುವುದೇ ಇಲ್ಲ. ಪ್ರಸ್ತುತ ಆತ್ಮಕಥೆಯಲ್ಲಿ ಲೇಖಕಿಯ ಪ್ರೀತಿಯನ್ನು ಸಮುದ್ರಕ್ಕೆ ಹೋಲಿಕೆ ಮಾಡಲಾಗಿದೆ. ಈ ಸಮುದ್ರದಲ್ಲಿ ಬಿದ್ದವರು ಸಂಪೂರ್ಣ ಈಜಿ ದಡವನ್ನು ಸೇರಿದವರಿಲ್ಲ. ಸಮುದ್ರ ವಿಶಾಲತೆಯಿಂದ ಕೂಡಿದ್ದು, ತನ್ನಲ್ಲಿ ಸೌಂದರ್ಯ ಮತ್ತು ಕ್ರೌರ್ಯಗಳೆರಡನ್ನೂ ಒಳಗೊಂಡಿರುತ್ತದೆ. ಅದೇ ರೀತಿ ಪ್ರೀತಿಯೂ ಕೂಡ. ಪ್ರತಿಭಾ ಅವರ ಪ್ರೀತಿಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡವರು ಇಲ್ಲದಂತೆ ಕಾಣುತ್ತದೆ. ಒಂದು ಹೆಣ್ಣಿನ ಅಂತರಂಗವನ್ನು ತಲುಪಲು ಏಳು ಬಾಗಿಲು ದಾಟಿ ಹೋಗಬೇಕಂತೆ. ಆದರೂ ಅವಳು ಒಳಗೆ ಬರಮಾಡಿಕೊಂಡರೆ ಮಾತ್ರ ಪ್ರವೇಶ, ಇಲ್ಲವಾದರೆ ಇಲ್ಲ. ಹಾಗೆಯೇ ಪ್ರತಿಭಾ ಅವರು ಅವರ ಪ್ರೀತಿಯ ಬಾಗಿಲನ್ನು ತೆರೆದಿಟ್ಟರೂ ಯಾರೂ ಒಳಗೆ ಬರುವ ಪ್ರಯತ್ನ ಮಾಡುವುದಿಲ್ಲ. ಪ್ರಯತ್ನ ಮಾಡಿದರೂ ಸಂಪೂರ್ಣ ಒಳಗೆ ಬರುವುದಿಲ್ಲ. ಹಾಗೆ ಪ್ರಯತ್ನ ಮಾಡಿದವರು ಪ್ರತಿಭಾ ಅವರನ್ನು ಸಮುದ್ರಕ್ಕೆ ಹೋಲಿಕೆ ಮಾಡಿದ್ದಾರೆ. ಈ ಪ್ರೀತಿಯೆಂಬ ಸಮುದ್ರವನ್ನು ಈಜಿ ದಾಟಲು ಆಗದ ಕಾರಣ ದಡವನ್ನು ತಲುಪಲಾಗಿಲ್ಲ. ಪ್ರತಿಭಾರೇ ಹೇಳುವಂತೆ ಯಾರೂ ಅವರ ಪ್ರೀತಿಯ ಸಮುದ್ರದಲ್ಲಿ ಈಜಿ ದಡ ಸೇರಲಿಲ್ಲ. ಕೊನೆಗೂ ಸಂಪೂರ್ಣ ಪ್ರೀತಿ ಪಡೆಯಲು ವಿಫಲರಾಗಿದ್ದಾರೆ. ಅಂದರೆ ಪ್ರೀತಿಯೆಂಬ ಸಮುದ್ರದಲ್ಲಿ ಈಜಿ ದಡ ಸೇರುವುದು ತುಂಬಾ ಕಷ್ಟ. ಪ್ರತಿಭಾ ಅವರ ಪ್ರೀತಿಯ ತೀವ್ರತೆ ಅಷ್ಟೊಂದು ಶಾಂತವಾದುದು ಮತ್ತು ಅಷ್ಟೇ ಭೀಕರವಾದುದು.

ಇಲ್ಲಿನ ಆತ್ಮಕಥೆಯಲ್ಲಿ 'ಸ್ಕೂಟರ್' ಒಂದು ಪಾತ್ರವಾಗಿ ಬಂದಿದೆ. ಲೇಖಕಿ ಅದನ್ನು 'ಹುಡುಗ' ಅಥವಾ ಬಾಯ್‌ಫ್ರೆಂಡ್ ಎಂದು ಕರೆದಿದ್ದಾರೆ. ಇಲ್ಲಿ ಸ್ಕೂಟರ್ ಒಂದು ನಿರ್ಜೀವ ವಸ್ತುವಾಗಿದ್ದರೂ ಅದಕ್ಕೆ ಜೀವ ತುಂಬಿರುವುದನ್ನು ಕಾಣಬಹುದು. ಸ್ಕೂಟರ್ ಬಂದ ಮೇಲೆ ಲೇಖಕಿಯ ಇಡೀ ಬದುಕು ಹೊಸ ತಿರುವನ್ನು ಪಡೆದಿದೆ. ಹಾಗೆಯೇ ಅವರ ಬದುಕಿನ ಸೂತ್ರವನ್ನು ಅವರೇ ಕೈಗೆತ್ತಿಕೊಂಡ ಅನುಭವಗಳು ವ್ಯಕ್ತವಾಗಿವೆ. ಸ್ಕೂಟರ್ ಬಂದ ಮೇಲೆ ಸ್ವಾತಂತ್ರ್ಯ ಸಿಕ್ಕಿದ ಅನುಭವ ಆಗಿದೆ ಎನ್ನುತ್ತಾರೆ. ಹೇಗೆಂದರೆ 'ಅವನು ಎಲ್ಲೆಂದರಲ್ಲೆ ಕರೆದುಕೊಂಡು ಹೋಗುತ್ತಾನೆ. ಕೆಲಸ ಮುಗಿಸಿಕೊಂಡು ಹಿಂದಕ್ಕೆ ಬರುವವರೆಗೂ ಸುಮ್ಮನೆ ಚುಪ್‌ಚಾಪ್ ಸದ್ದುಗದ್ದಲ ಮಾಡದೆ ಕಾಯುತ್ತಾನೆ. ಅವನನ್ನು ಮರದ ನೆರಳಲ್ಲಿ ತಂಪಾಗಿ ಇಟ್ಟರೂ, ಕುದಿಯುವ ಬಿಸಿಲಿನಲ್ಲಿ ಗಂಟೆ ಗಟ್ಟಲೆ ನಿಲ್ಲಿಸಿದರೂ ಒಂದೇ ಒಂದು ತಕರಾರು ಮಾಡದೆ

ಸುಮ್ಮನಿರುತ್ತಾನೆ. ಹೆಚ್ಚೆಂದರೆ ಅವನ 'ಹವಾ' ಹೋಗಿ ಸ್ವಲ್ಪ ಪೆಚ್ಚಾಗಬಹುದು, ಆಗ ಗಾಳಿ ತುಂಬಿಸಿದರೆ ಎಲ್ಲಾ ಸರಿ ಹೋಗುತ್ತದೆ. ಈ ರೀತಿ ಯಾವುದೇ ತಕರಾರು ಮಾಡದೆ ಹೇಳಿದ ಹಾಗೆ ಕೇಳುತ್ತಾನೆ' ಎನ್ನುತ್ತಾರೆ. ಹಾಗೆ ಮುಂದುವರೆದು ಈ ರೀತಿಯ ಬಾಯ್‌ಫ್ರೆಂಡ್‌ನ ಅವಶ್ಯಕತೆಯೂ ಎದ್ದು ಕಾಣುತ್ತದೆ ಎಂದೂ ಕೂಡ ಆಲೋಚನೆ ಮಾಡುತ್ತಾರೆ. ಗಂಡನಾದವನು ಹೆಂಡತಿಯಾದವಳು ನಾನು ಹೇಳಿದ ಹಾಗೆ ಕೇಳಿಕೊಂಡು ಮನೆಯಲ್ಲಿ ಬಿದ್ದಿರಬೇಕು ಎಂಬ ಕಟ್ಟಳೆಯಿಟ್ಟಾಗ ಹೆಂಡತಿಯಾದವಳು ಅದನ್ನು ಪಾಲಿಸಲೇಬೇಕು. ಇಲ್ಲವಾದರೆ ನಿಂದನೆ, ಅಪಮಾನಕ್ಕೆ ಒಳಗಾಗಬೇಕು. ಆದರೆ ಹೆಂಡತಿಯಾದವಳು ಗಂಡನ ಮೇಲೆ ಯಾವುದೇ ರೀತಿಯ ಹಕ್ಕು ಚಲಾಯಿಸುವಂತಿಲ್ಲ. ಹೀಗಿರುವಾಗ ಪ್ರತಿಭಾ ಅವರು ಅವರ ಬಾಯ್‌ಫ್ರೆಂಡ್‌ನನ್ನು ನಡೆಸಿಕೊಳ್ಳುವ ರೀತಿಯು ಹೆಣ್ಣಿನ ಸ್ವಾತಂತ್ರ್ಯದ ಬಯಕೆಯನ್ನು ತಿಳಿಸಿಕೊಡುತ್ತದೆ. ಹೆಣ್ಣು, ಗಂಡು ಸಮಾನರು ಎಂದು ಹಲವು ಕಾಲಗಳಿಂದ ತಿಳಿಯುತ್ತಾ ಬಂದಿದ್ದರೂ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ತಳಾದಿಗೆ ಸಿಕ್ಕಿದ್ದಾಳೆ. ಅವಳ ಭಾವನೆಗಳಿಗೆ ಸ್ವಾತಂತ್ರವೆಂಬುದಿಲ್ಲ. ಈ ನಿಟ್ಟಿನಲ್ಲಿ ನಿರ್ಜೀವ ವಸ್ತುಗಳ ಮೇಲೆ ಅಧಿಕಾರ ಚಲಾಯಿಸುವುದರ ಮೂಲಕ ಮತ್ತು ಹಾಗೆ ಪ್ರೀತಿ ವ್ಯಕಪಡಿಸುವುದರ ಮೂಲಕ ಹೆಣ್ಣು ಅವಳ ಸ್ವಾತಂತ್ರವನ್ನು ವ್ಯಕ್ತಪಡಿಸುವ ಉಪಾಯವನ್ನು ಈ ಘಟನೆ ನೆನಪಿಗೆ ತರುತ್ತದೆ. ಪ್ರತಿಭಾ ಅವರು ತಮ್ಮ ಆತ್ಮಕಥೆಯಲ್ಲಿ ರೂಪಕ ಮತ್ತು ಉಪಮೆಗಳಿಗೆ ಬಳಸಿರುವುದು ಬಹುತೇಕ ಪ್ರಾಣಿ ಮತ್ತು ಪ್ರಕೃತಿಯನ್ನು ಎಂಬುದನ್ನು ಗಮನಿಸಬೇಕು. ಇಲ್ಲಿಯೂ ಅವರು 'ಗರುಡನ ಹಾಗೆ ಎಲ್ಲೋ ಗಾಳಿಯಲ್ಲಿ ತೇಲುತ್ತಿದ್ದೆ' ಎಂಬ ಮಾತನ್ನು ಬಳಸಿದ್ದಾರೆ.

ಒಂದೂವರೆ ತಿಂಗಳು ಎಲ್ಲಾ ಅಡೆಗಡೆಗಳನ್ನು ಎದುರಿಸಿ ಹಗಲು ರಾತ್ರಿ ಕೆಲಸ ಮಾಡಿ, ಸುತ್ತ ಎಪ್ಪತ್ತೆಂಟು ಜನರ ಏನೆಲ್ಲಾ ಟೀಕೆಗಳನ್ನು ಅಪವಾದಗಳನ್ನು, ಅವಹೇಳನಗಳನ್ನು ಅಪಹಾಸ್ಯಗಳನ್ನೆಲ್ಲಾ ಎದುರಿಸಿ ಪ್ರೀತಿ ಪಾತ್ರರಾದವರ ಮುಂದೆ ನಿಂತಾಗ ಅವರಿಂದ ಮೆಚ್ಚುಗೆ ಮಾತು ನಿರೀಕ್ಷಿಸುವುದು ಸಹಜ. ಅವರು ಮೆಚ್ಚದಿದ್ದಾಗ, ಹೊಗಳದಿದ್ದಾಗ ಮುಗುಳ್ನಗದಿದ್ದಾಗ, ಮಾಡಿದ ಕೆಲಸಕ್ಕೆ ತಿರಸ್ಕಾರ ದೊರೆತಾಗ ಆಗುವ ಅಪಮಾನ ಘೋರವಾದದ್ದು. ಪ್ರತಿಭಾ ಅವರಿಗೆ ಇಂತಹ ಪರಿಸ್ಥಿತಿಯು ಒದಗಿದಾಗ ಅವರ ಪರಿಸ್ಥಿತಿಯನ್ನು ಎಲ್ಲೋ ಆಕಾಶದಲ್ಲಿ ತೇಲುವ ಗರುಡನಿಗೆ ಹೋಲಿಕೆ ಮಾಡಿಕೊಂಡಿದ್ದಾರೆ. ಆಕಾಶವು ತುಂಬಾ ವಿಶಾಲವಾಗಿರುತ್ತದೆ. ಗರುಡವು ಒಂಟಿಯಾಗಿ ಎಲ್ಲೋ ತನ್ನ ಪಾಡಿಗೆ ತಾನು ತೇಲಿಕೊಂಡು ಹೋಗುತ್ತಿರುತ್ತದೆ. ನೋಡುಗರಿಗೆ ಗರುಡವು ಯಾವ ಕಡೆ ಹೋಗುತ್ತಿದೆ ಎಂದು ಗೊತ್ತಾಗುವಷ್ಟರಲ್ಲಿ ಅದು ಮತ್ತೊಂದು ಕಡೆ ಅದರದೇ ಪ್ರಪಂಚದಲ್ಲಿ ತೇಲುತ್ತಿರುತ್ತದೆ. ಅದಕ್ಕೆ ಯಾರ ಪರಿವೆಯೂ ಇರುವಂತೆ ಕಾಣುವುದಿಲ್ಲ. ಹಾಗೆಯೇ ಪ್ರತಿಭಾ ಅವರ ಮನಸ್ಸಿಗೆ ನೋವಾದಾಗ ಯಾರು ಏನು ಹೇಳುತ್ತಿದ್ದಾರೆಂಬ ಅರಿವಿಲ್ಲದೆ ಎಲ್ಲೋ ಗರುಡನ ಹಾಗೆ ಗಾಳಿಯಲ್ಲಿ ತೇಲುತ್ತಿರುವ ಅನುಭವ ಅವರಿಗಾಗುತ್ತದೆ. ಅದನ್ನು ಅವರು ನಿರೂಪಣೆಯಲ್ಲಿ ಪರಿಣಾಮಕಾರಿಯಾಗಿ ಅಡಕಗೊಳಿಸಿದ್ದಾರೆ. ಹೀಗೆ ಪ್ರತಿಭಾ

ಅವರು ಹೆಚ್ಚಿನ ಸಂಖ್ಯೆಯ ಉಪಮೆ ಮತ್ತು ರೂಪಕಳನ್ನು ಪ್ರಾಣಿ ಮತ್ತು ಪ್ರಕೃತಿಯಿಂದ ಬಳಸಿಕೊಂಡಿದ್ದಾರೆ. ಅಲ್ಲದೆ ಹಾಗೆ ಬಳಸಿಕೊಂಡಿರುವ ಉಪಮೆ ಮತ್ತು ರೂಪಕಗಳು ಅವರ ಭಾವನೆಗಳನ್ನು ಪರಿಣಾಕಾರಿಯಾಗಿ ಅಭಿವ್ಯಕ್ತವಾಗುವಂತೆ ಮಾಡಿವೆ.

೪.೩. ಆತ್ಮಕಥೆಯಲ್ಲಿ ಬಳಕೆಗೊಂಡಿರುವ ಕವಿತೆಗಳು

ಪ್ರತಿಭಾ ಅವರು ಸ್ವತಃ ಕವಯತ್ರಿಯಾದುದರಿಂದ ಅವರ ಆತ್ಮಕಥೆಯಲ್ಲಿ ನಿರೂಪಣೆಯ ನಡುವೆ ಅನೇಕ ಕವಿತೆಗಳನ್ನು ತಂದಿದ್ದಾರೆ. 'ಪ್ರತಿಭಾ ಅವರ ಈ ಆತ್ಮಕಥನದ ಪುಟಗಳಲ್ಲಿ ಅವರ ಹಲವು ಕವಿತೆಗಳ ಸಾಲುಗಳು ಮಿಂಚಿಹೋದರೆ ಅಚ್ಚರಿಯಿಲ್ಲ' ಎಂಬ ಅಕ್ಷತಾ ಅವರ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕಾವ್ಯವು ಅನುಭವಗಳ ಅಭಿವ್ಯಕ್ತಿಗೆ ಅತ್ಯಂತ ಪರಿಣಾಮಕಾರಿಯಾಗಿರುವುದೂ ಇದಕ್ಕೆ ಒಂದು ಕಾರಣವಿರಬಹುದು. ಹಾಗೆ ನೋಡಿದರೆ ಅವರ ಆತ್ಮಕಥೆ 'ಅನುದಿನದ ಅಂತರಗಂಗೆ' ಒಳಗೊಂಡಿರುವ ಭಾಷೆಯೇ ಒಂದು ರೀತಿಯಲ್ಲಿ ಕಾವ್ಯಮಯವಾಗಿದೆ. ಆತ್ಮಕಥೆಯಲ್ಲಿ ತಮ್ಮ ಅನುಭವಗಳನ್ನು ಪರಿಣಾಕಾರಿಯಾಗಿ ಅಭಿವ್ಯಕ್ತಪಡಿಸಲು ಅವರು ಅನೇಕ ಪದ್ಯಗಳನ್ನು ತಂದಿದ್ದಾರೆ. ಇಲ್ಲಿ ಗಮನಿಸಬಹುದಾದ ಮುಖ್ಯವಾದ ಸಂಗತಿಯೆಂದರೆ ಈ ಆತ್ಮಕಥೆಯನ್ನು ಓದುವಾಗ ನಡುನಡುವೆ ಬರುವ ಅನೇಕ ಕವಿತೆಗಳು ಈ ಹಿಂದೆಯೇ ಅವರು ಬರೆದ ಕವಿತೆಗಳಾಗಿವೆ. ಅಲ್ಲದೆ ಅವುಗಳು ಈಗಾಗಲೇ ಸಾಕಷ್ಟು ಪ್ರಸಿದ್ಧಿಯನ್ನೂ ಪಡೆದಿವೆ. ಅವುಗಳನ್ನು ಮತ್ತೆ ಈ ಆತ್ಮಕಥೆಯಲ್ಲಿ ಓದುವಾಗ ನೆನಪಾಗುವುದು ಎಂದರೆ, ಪ್ರತಿಭಾ ಅವರು ಯಾವ ಸಮಯದಲ್ಲಿ ಈ ಕವನಗಳನ್ನು ಬರೆದಿರಬುಹುದು ಎಂಬುದು.

ಹೀಗೆ ತುಂಬಾ ಪ್ರಸಿದ್ಧವಾದ ಕವಿತೆಗಳು ಅನೇಕ ಕುತೂಹಲವನ್ನೂ ಓದುಗರಲ್ಲಿ ಹುಟ್ಟುಹಾಕಿವೆ. ಈ ಆತ್ಮಕಥೆಗೆ ಮುನ್ನುಡಿಯನ್ನು ಬರೆದಿರುವ ಅಕ್ಷತಾ ಅವರು ಹೇಳಿರುವ ಮಾತನ್ನು ಇಲ್ಲಿ ನೋಡಬಹುದು. "ನಾವು ಹುಡುಗಿಯರೇ ಹೀಗೆ ಎಂಬ ಬಹು ಪ್ರಸಿದ್ಧವಾದ ಹುಡುಗಿಯರ ಪಾಲಿನ ಸಾರ್ವಕಾಲಿಕ ಮ್ಯಾನಿಫೆಸ್ಟೋ ಪದ್ಯವೊಂದನ್ನು ಪ್ರತಿಭಾ ನಂದಕುಮಾರ್ ತಮ್ಮ ಕವಿಸಮಯದ ಆರಂಭದ ದಿನಗಳಲ್ಲಿ ಬರೆದಿದ್ದರು. ಅಚ್ಚರಿಯೆಂದರೆ ಪ್ರತಿಭಾಗೆ ಹೆಣ್ಣಿನ ಹೇಳಬೇಕಾದ್ದನ್ನು ಹೇಳಲು ಸಾಧ್ಯವಾಗದೇ ಸುಮ್ಮನೆ ಅನುಭವಿಸಿಕೊಂಡು ಸಾಯುವ ಅಂಥದೊಂದು ಮಿತಿಯನ್ನು ದಾಟಿಕೊಂಡು ತಮ್ಮ ಕವಿತೆಯಲ್ಲಿ ಹೇಳಬೇಕಾದದ್ದನ್ನು ಹೇಳಲು ಸಾಧ್ಯವಾಗಿದ್ದು. ತನ್ನ ಸ್ವಂತವನ್ನು ದಿಟ್ಟವಾಗಿ ಸಂಕೋಚಗಳಿಲ್ಲದೆ ಕೆಚ್ಚಿನಿಂದ ಕವಿತೆಯಲ್ಲಿ ಎದಿರಾಗುತ್ತಾ ಬಂದಿರುವ ಪ್ರತಿಭಾ ಕಳೆದ ಇಪ್ಪತ್ತೈದು ವರ್ಷಗಳಿಗೂ ಹೆಚ್ಚುಕಾಲದಿಂದ ಹೊಸದು ಎನ್ನಬಹುದಾದ ತಮ್ಮ ಕಾವ್ಯಾಲೋಚನೆಯಿಂದ ನಮ್ಮೆದೆ ಜುಮ್ಮೆಸಿದ್ದಾರೆ. ಅನುಭವದ ತಹತಹಕ್ಕೆ ಹಾತೊರೆಯುವ ಮನಸ್ಸಿಗೂ ತನ್ನ ಸ್ವಂಥ ಬದುಕನ್ನು ಯಾವ ಹಂಗುಗಳಿಲ್ಲದೆ ಅಭಿವ್ಯಕ್ತಿಸುವುದು ಸುಲಭ ಸಾಧ್ಯವಲ್ಲ. ಆದರೆ ಪ್ರತಿಭಾ ಅಂತದ್ದನ್ನು ಸಹಜವಾಗಿ ಕವಿತೆಯಲ್ಲಿ ಸಾಧ್ಯವಾಗಿಸಿಕೊಂಡವರು". ಈ ಮಾತಗಳು ಪ್ರತಿಭಾ ಅವರ ಈ ಆತ್ಮಕಥನದಲ್ಲಿ ಪದ್ಯಗಳು ಮಿಂಚಿರುವುದಕ್ಕೆ ಕಾರಣವನ್ನು

ಗುರುತಿಸಬಹುದು. ಈ ಕವಗಳು ಇಲ್ಲಿ ಬಂದಿರುವುದಕ್ಕೆ ಉಳಿದ ಆತ್ಮಕಥೆಗಳಿಗಿಂತ ಇದು ಭಿನ್ನವಾಗಿ ಕಾಣಿಸುತ್ತದೆ.

ಪ್ರತಿಭಾ ಅವರ ಕಾವ್ಯದ ವಸ್ತು ವಿಸ್ತಾರವು ಬಾಲ್ಯದಿಂದಲೇ ಹುಟ್ಟು ಪಡೆದಿದೆ. ಅವರಪ್ಪನ ಮೇಲೆ ಅವರಿಗೆ ಅಪಾರವಾದ ಪ್ರೀತಿಯಿದ್ದರೂ ಅವರ ಬಗ್ಗೆ ತುಂಬಾ ವಿಮರ್ಶಾತ್ಮಕವಾಗಿದ್ದಾರೆ. ಅವರನ್ನು ಕುರಿತು 'ಮುದ್ದು ತಂದೆ' ಎಂಬ ಒಂದು ಕವನವನ್ನೂ ಬರೆದಿದ್ದಾರೆ. ಅವರು ಓದುವ ದಿನಗಳಲ್ಲಿ ಅವರ ಮೇಷ್ಟ್ರನ್ನು ಒಲಿಸಿಕೊಳ್ಳುವ ಸಲುವಾಗಿ ಅನೇಕ ಕವನಗಳನ್ನು ಅವರು ಬರೆದಿದ್ದಾರೆ. ಕೊನೆಯ ಭಾಗದಲ್ಲಿ ಶವಸಂಸ್ಕಾರಕ್ಕೆ ಆಹ್ವಾನ ಕೊಡುವ ಪದ್ಯದಲ್ಲಿ ಅತಿಯಾದ ಭಾವುಕತೆ ಇರುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಅವರ ಕವಿತೆ ಹುಟ್ಟಿದ ಸಂದರ್ಭಗಳು ಈ ಆತ್ಮಕಥೆಯಲ್ಲಿ ನೋಡಿದಾಗ ಅವು ಕುತೂಹಲಭರಿತವಾಗಿ ಕಾಣಿಸುತ್ತವೆ.

೪.೪. ಆತ್ಮಕಥೆಯ ಪ್ರಾರಂಭ ಮತ್ತು ಅಂತ್ಯ

'ಅನುದಿನದ ಅಂತರಗಂಗೆ' ಆತ್ಮಕತೆಯು ಪ್ರಾರಂಭವಾಗಿರುವುದು ಬಾಲ್ಯದಿಂದಲ್ಲ. ಜೀವನದ ಮಧ್ಯಭಾಗ, ಅದರಲ್ಲೂ ಜೀವನವು ಅನೇಕ ಏಳುಬೀಳುಗಳನ್ನು ಕಂಡ ನಂತರ ಎಂಬುದು ಕುತೂಹಲವನ್ನು ಮೂಡಿಸುತ್ತದೆ. ಪ್ರತಿಭಾ ಅವರು ಎರಡು ಮಕ್ಕಳಾದ ಮೇಲೆ ತಮ್ಮ ಪತಿಯಾದ ನಂತಕುಮಾರ್ ಅವರೊಂದಿಗೆ ಜಗಳ ಮಾಡಿಕೊಂಡು ದೂರವಾಗಿ ಮಕ್ಕಳೊಂದಿಗೆ ಬೇರೆ ಮನೆ ಮಾಡಿಕೊಂಡು ವಾಸವಿರುತ್ತಾರೆ. ನಂತರ ನಂದಕುಮಾರ್ ಅವರು ಸ್ವಂತ ಮನೆ ಕಟ್ಟಿದ ಮೇಲೆ ಮಕ್ಕಳೊಂದಿಗೆ ಆ ಮನೆಗೆ ಬರಲು ಒಪ್ಪುತ್ತಾರೆ. ಆ ಮನೆಯ ಗೃಹಪ್ರವೇಶದ ದಿನಕ್ಕೆ ಹೋಗುವ ಸಂದರ್ಭದಲ್ಲಿ ಈ ಆತ್ಮಕಥೆ ಪ್ರಾರಂಭವಾಗುತ್ತದೆ.

ಯಾಕೆ ಪ್ರತಿಭಾ ಅವರು ಈ ರೀತಿಯಾಗಿ ಜೀವನದ ಮಧ್ಯಭಾಗದಿಂದ ಪ್ರಾರಂಭ ಮಾಡುತ್ತಾರೆ ಎಂಬುದು ಕುತೂಹಲದ ಪ್ರಶ್ನೆಯೇ ಆಗುತ್ತದೆ. ಪ್ರತಿಭಾ ಅವರು ತಮ್ಮ ಸುಂದರವಾದ ಬಾಲ್ಯವನ್ನು ಅತ್ಯಂತ ಕಷ್ಟಮಯವಾದ ಸಂಸಾರದ ಮೂಲಕ ನೋಡಲು ಬಯಸುತ್ತಾರೆ. ಬಾಲ್ಯವು ಹಾಗೆ ಸುಂದರವಾಗಿ ಕಾಣಿಸುವುದು ಜೀವನ ಅತ್ಯಂತ ಕಷ್ಟದ ಕಡೆಗೆ ಸಾಗಿದಾಗ. ಜೀವನದ ಅನುಭವಗಳು ಏರುಪೇರಾಗಿ, ಹಲವು ಬಿರುಕುಗಳಾಗಿ ಚದುರಿಹೋದಾಗ ಒಮ್ಮೆ ಹಿಂತಿರುಗಿ ನೋಡಿದಾಗ ಬಾಲ್ಯವು ಅತ್ಯಂತ ಸುಂದರವಾಗಿ ಕಾಣಿಸುತ್ತದೆ. ಹೀಗೆ ಪ್ರತಿಭಾ ಅವರು ಬಾಲ್ಯವನ್ನು ಸುಂದರವಾಗಿಸುವ ಸಲುವಾಗಿ ಆತ್ಮಕಥೆಯನ್ನು ಮಧ್ಯದಿಂದ ಪ್ರಾರಂಭ ಮಾಡಿದ್ದಾರೆ. ಅಲ್ಲದೇ ಮನುಷ್ಯನ ಜೀವನವೂ ಕೂಡ ಹಾಗೆ ಕ್ರಮಬದ್ದವಾಗಿ ಇರುವುದಿಲ್ಲ. ಅನೇಕ ಪಲ್ಲಟಗಳು ನಡೆದೇ ತೀರುತ್ತವೆ. ಆ ಕಾರಣದಿಂದ ಪ್ರಸ್ತುತ ಆತ್ಮಕಥೆಯನ್ನೂ ಕೂಡ ಕ್ರಮಬದ್ಧವಾಗಿ ಬಾಲ್ಯದಿಂದ ಪ್ರಾರಂಭ ಮಾಡಿಲ್ಲದಿರುವುದನ್ನು ಕಾಣಬಹುದು.

ಇನ್ನು ಆತ್ಮಕಥೆಯ ಅಂತ್ಯವು ಆರಂಭದ ಬಿಂದುವಿಗೇ ಬಂದು ತಲುಪುತ್ತದೆ. ಬದುಕು ಅನೇಕ ತಿರುವುಗಳನ್ನು ಕಂಡು ಅನುಭವಗಳು ಬೆಳೆದಂತೆಲ್ಲಾ ಜೀವನದ ಅರ್ಥಗಳೂ ಬದಲಾಗುತ್ತಾ ಸಾಗುತ್ತವೆ. ಒಟ್ಟಾರೆ ಅನುಭವವೇ ದೂರವಾಗಿದ್ದ ಪರಸ್ಪರರನ್ನು ಒಂದಾಗುವಂತೆ ಮಾಡುತ್ತದೆ. ಸಾಂಪ್ರದಾಯಿಕ ಸಮಾಜದ ಚೌಕಟ್ಟಿನ ಆಚೆ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ನಡೆದು ತಮ್ಮ ಪ್ರೀತಿಯನ್ನು ಪಡೆಯಲು ಬಯಸುತ್ತಾರೆ. ನಂತರ ಕೊನೆಕೊನೆಗೆ ಅವರಿಗೂ ಜೀವನದ ವಾಸ್ತವತೆ ಅರ್ಥವಾಗುತ್ತದೆ. ಅಲ್ಲಿಯವರೆಗೆ ತಮ್ಮ ಗಂಡನ ಕುರಿತಾಗಿ ಅವರಿಗೆ ಇದ್ದ ಭಾವನೆಗಳು ಈಗ ಬದಲಾಗುತ್ತವೆ. ಪ್ರತಿಭಾ ಅವರ ಫಿನ್‌ಲೆಂಡ್‌ನ ಗೆಳೆಯನ ಜೊತೆಗೆ ತಮ್ಮ ಮನೆಯ ಎಲ್ಲ ಕಷ್ಟಗಳನ್ನೂ ಹೇಳಿಕೊಳ್ಳುತ್ತಾರೆ. ಆ ಗೆಳೆಯನ ಸಲಹೆಯಂತೆ ಮತ್ತೆ ತಮ್ಮ ಪತಿಯನ್ನು ಸೇರಲು ಮನಸ್ಸು ಮಾಡುತ್ತಾರೆ. 'ವಯಸ್ಸು ಮೀರಿದ ಮೇಲೆ ನಮ್ಮ ಸ್ವಭಾವದಲ್ಲಿ ಪಕ್ವತೆ ಬರದಿದ್ದರೆ ಹೇಗೆ ಎಂದುಕೊಂಡು, ನಾನು ಸೇರಿಗೆ ಸವಾಸೇರು ಎಂದು ಜಗಳವಾಡುವುದನ್ನು ಕಡಿಮೆ ಮಾಡಿ ಮಾತು ಬಂದಾಗ ಮೌನವಾಗಿರುವುದನ್ನು ರೂಢಿಸಿಕೊಳ್ಳತೊಡಗಿದೆ. ಅದರಿಂದ ಎಷ್ಟೋ ಜಗಳಗಳು ತಡೆಯಾದವು.' ಎಂದು ಅವರೂ ಕೂಡ ವಾಸ್ತವದ ದಾರಿಗೆ ಮರಳುತ್ತಾರೆ. ಆದರೆ ಅದು ಅವರ ಬದುಕಿನ ಹೋರಾಟದ ಸೋಲು ಎಂದು ಅನಿಸುವುದಿಲ್ಲ. ಜೀವನ ನಡೆಯಲು ಪರಸ್ಪರ ಹೊಂದಿಕೊಂಡು ಹೋಗಬೇಕು ಎಂಬ ಹೊಂದಾಣಿಕೆಯ ಮನೋಭಾವ ಅವರಲ್ಲಿ ಮೂಡುತ್ತದೆ. ಗಂಡನನ್ನು ಕುರಿತಾಗಿ ಅದುವರೆಗೂ ಒಂದು ರೀತಿಯಲ್ಲಿ ಆಲೋಚನೆ ಮಾಡುತ್ತಿದ್ದವರು ಈಗ ಅವರ ಬಗ್ಗೆಯೂ ಸಹಾನುಭೂತಿಯಿಂದ ಆಲೋಚನೆ ಮಾಡುತ್ತಾರೆ. ಗಂಡನನ್ನು ಕುರಿತು ಕೊನೆಗೆ ಅವರಾಡುವ ಮಾತು ಗಮನಾರ್ಹವಾದವುಗಳು. 'ನಾನು ಬಯಸಿದ ಪ್ರೀತಿ ನನಗೆ ಬೇರೆ ಕಡೆಯೂ ಸಿಕ್ಕಿರಲಿಲ್ಲ. ಕೈಯೊಳಗಿನದನ್ನು ಎಸೆದು ಬೇರೆ ಎಲ್ಲೆಲ್ಲೋ ಪ್ರೀತಿ ಅರಸಿ ಹೋಗುವುದು ಎಷ್ಟು ಮೂರ್ಖತನ ಅನ್ನಿಸಿತು. ಕೊನೆಗೆ ಎಲ್ಲರೂ ಒಂಟಿಯೇ. ಯಾರಿಗೂ ಪರಿಪೂರ್ಣ ಪ್ರೀತಿ ಸಿಗುವುದೇ ಇಲ್ಲ. ಸಿಕ್ಕರೆ ಅಂತಹವರು ಪುಣ್ಯವಂತರು. ಇವನ ಪ್ರೀತಿ ಬಹಳ ವಿಚಿತ್ರ ಅವನೂ ನನ್ನಂತೆಯೇ. ಆದರೆ ಅವನು ನನ್ನ ಹಾಗೆ ಪ್ರೀತಿಯನ್ನು ಹುಡುಕಿಕೊಂಡು ಅಲೆಯಲಿಲ್ಲ. ಏನಾದರೂ ಅವನಿಗೆ ನಾನು ಮತ್ತು ಮಕ್ಕಳು ಸರ್ವಸ್ವ. ಅವನಿಗಿರುವ ಸಂತೃಪ್ತಿ ನನಗೇಕಿಲ್ಲ?' ಎಂದು ತಮಗೆ ತಾವೇ ಹೇಳಿಕೊಳ್ಳುತ್ತಾರೆ. ಹೀಗೆ ಪ್ರೀತಿಯ ಅರ್ಥವನ್ನೂ ಅವರದೇ ಆದ ರೀತಿಯಲ್ಲಿ ನಿರ್ವಚಿಸಿಕೊಂಡು ಕನೆಗೆ ಅದೇ ಪ್ರೀತಿಯ ಹುಡುಕಾಟ ಮುಂದುವರೆಸುತ್ತಾರೆ. ಆದರೆ ಪರಿಪೂರ್ಣ ಪ್ರೀತಿಯು ದೊರೆಯದ ಕಾರಣ ಅವರು ಇರುವ ಪ್ರೀತಿಯನ್ನೇ ಇದ್ದಂತೆ ಒಪ್ಪಿಕೊಂಡು ಅದಕ್ಕೆ ತಾವೂ ಒಪ್ಪಿಕೊಂಡು ಹೋಗುವ ಮನೋಸ್ಥೈರ್ಯವನ್ನು ರೂಢಿಸಿಕೊಂಡು ದೂರವಾಗಿದ್ದ ಗಂಡನೊಂದಿಗೆ ಬಾಳುವುದಕ್ಕೆ ಮನಸ್ಸು ಮಾಡುತ್ತಾರೆ. ಹೀಗೆ ಪ್ರೀತಿಯ ನಿಜವಾದ ಅರ್ಥದೊಂದಿಗೆ, ಅದು ಯಾರಿಗೂ ಪರಿಪೂರ್ಣದ ಸ್ವರೂಪದಲ್ಲಿ ದೊರೆಯುವುದಿಲ್ಲ ಎಂಬ ಒಂದು ತೀರ್ಮಾನದೊಂದಿಗೆ ಆತ್ಮಕಥೆಯು ಮುಕ್ತಾಯವಾಗುತ್ತದೆ.

೪.೫. ಆತ್ಮಕಥೆಯಲ್ಲಿ ಬರುವ ಉಪಶೀರ್ಷಿಕೆಗಳು

ಪ್ರತಿಭಾ ಅವರು ತಮ್ಮ ಅನುಭವಗಳನ್ನು ಆತ್ಮಕಥೆಯ ರೂಪದಲ್ಲಿ ಹೇಳುವಾಗ ಅನೇಕ ಉಪಶೀರ್ಷಿಕೆಗಳನ್ನು ಮಾಡಿಕೊಂಡಿದ್ದಾರೆ. ಆ ಪ್ರತಿಯೊಂದು ಶೀರ್ಷಿಕೆಗಳೂ ಅವರ ಜೀವನದ ಅನುಭವದ ಸಾರದಂತಿವೆ. ಅವರು ಕೊಡುವ ಶೀರ್ಷಿಕೆಗೂ ಮತ್ತು ಬರೆವಣಿಗೆಯ ಕ್ರಮಕ್ಕೂ ಒಂದು ಆಂತರಿಕ ಸಂಬಂಧವಿದೆ. ಅಲ್ಲದೆ ಅವರು ಬಳಸಿರುವ ಶೀರ್ಷಿಕೆಗಳೇ ಕಾವ್ಯಾತ್ಮಕವಾಗಿವೆ ಮತ್ತು ಕುತೂಹಲಭರಿತವಾಗಿವೆ. ಒಂದು ಉಪಶೀರ್ಷಿಕೆಯನ್ನು ನೋಡಿದ ಕೂಡಲೇ ಅದರೊಳಗಿನ ವಸ್ತು, ವಿಷಯ ಮನದಟ್ಟಾಗುತ್ತದೆ. ಅದಕ್ಕಾಗಿ ಅವರು ಪರಿಣಾಮಕಾರಿಯಾದ ಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಹಾಗೆ ಒಟ್ಟು ಐವತ್ತೆರಡು ಉಪಶೀರ್ಷಿಕೆಗಳನ್ನು ಅವರು ತಮ್ಮ ಆತ್ಮಕಥೆಯಲ್ಲಿ ತಂದಿದ್ದಾರೆ. ಅವುಗಳಲ್ಲಿ ಜೀವನ ಮತ್ತು ಪ್ರೀತಿಯನ್ನು ಕುರಿತಾದ ಶೀರ್ಷಿಕೆಗಳೇ ಹೆಚ್ಚಾಗಿವೆ. ಇದುವೇ ಅವರು ಪ್ರೀತಿಯನ್ನು ಹುಡುಕುವ ಸ್ವರೂಪವನ್ನು ತಿಳಿಸಿಕೊಡುತ್ತದೆ.

ಅವರು ಬಳಸಿರುವ ಒಂದೊಂದು ಶೀರ್ಷಿಕೆಗಳೂ ಒಂದೊಂದು ಅನುಭವದಂತೆ ಕಾಣಿಸುತ್ತವೆ. ಅವರು ಬಳಸಿರುವ ಪ್ರತಿಯೊಂದು ಶೀರ್ಷಿಕೆಯೂ ಬದುಕನ್ನು ಬೆಳೆಸುತ್ತಾ ಹೋಗುತ್ತದೆ. ಪ್ರತಿಯೊಂದರಲ್ಲೂ ಒಂದು ಬದ್ಧತೆಯನ್ನು ಕಾಣಬಹುದು. ಒಟ್ಟಾರೆಯಾಗಿ 'ಅನುದಿನದ ಅಂತರಗಂಗೆ' ಎಂಬ ಶೀರ್ಷಿಕೆಯೇ ಕುತೂಹಲಕರವಾದುದರಿಂದ ಅವರು ಬಳಸಿರುವ ಉಪಶೀರ್ಷಿಕೆಗಳೂ ಕೂಡ ಅತ್ಯಂತ ಶಕ್ತಿಶಾಲಿಯಾಗಿವೆ ಮತ್ತು ಅವರ ಅನುಭವಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಪಡಿಸುತ್ತವೆ.

❑❑❑

ಅಧ್ಯಾಯ ಐದು

ಅಧ್ಯಯನದ ಮುಖ್ಯ ಫಲಿತಗಳು

ಅಧ್ಯಯನದ ಮುಖ್ಯ ಫಲಿತಗಳು

೧. ಆತ್ಮಕಥೆಯು ವ್ಯಕ್ತಿಯೊಬ್ಬನ ಚರಿತ್ರೆಯಾಗಿರುವಂತೆಯೇ ಆತನ ಸಮಾಜದ ಮತ್ತು ಪರಿಸರದ ಚರಿತ್ರೆಯೂ ಆಗಿರುತ್ತದೆ. ಕಥಾನಾಯಕ ತನ್ನ ಮತ್ತು ಅವನ ಸುತ್ತಮುತ್ತಲಿನ ಜೀವನವನ್ನು ಅವನು ಕಂಡಂತೆ ವರ್ಣಿಸಿರುತ್ತಾನೆ. ಆತ್ಮಚರಿತ್ರೆಯು ಕಟ್ಟುಕತೆಯಲ್ಲ. ಅದರಲ್ಲಿ ಅನುಭವ ನಿರೂಪಣೆ ಮತ್ತು ಸತ್ಯಾಂಶಗಳನ್ನೊಳಗೊಂಡ ಘಟನೆಗಳ ಪರಿಣಾಮಕಾರಿಯಾದ ವರ್ಣನೆಯಾಗಿರುತ್ತದೆ. ಇಂತಹ ವಿಶಿಷ್ಟ ದಾಖಲೆಯು ಮುಂದಿನ ಪೀಳಿಗೆಗೆ 'ದಾರಿದೀಪ'ವಾಗಿ ಕಂಡು ಬರುವಲ್ಲಿ ಅನೇಕ ಆತ್ಮಕಥೆಗಳು ಸಫಲವಾಗಿವೆ.

೨. ಆತ್ಮಕತೆಗಳನ್ನು ಸತ್ಯ ಅಸ್ಯತದ ಆಚೆಗೆ ತಂದು, ಒಂದು ವೈಚಾರಿಕ ನೆಲೆಗಟ್ಟಿನಲ್ಲಿ ಚರ್ಚಿಸುವುದು. ಈ ಸಾಧ್ಯತೆಯೇ ಆತ್ಮಕಥೆಯನ್ನು ಓದಬುದಾದ ಅನೇಕ ದಾರಿಗಳನ್ನು ತೋರಿಸಿಕೊಡುತ್ತದೆ. ಇಲ್ಲದೇ ಹೋದರೆ ಸತ್ಯ ಮತ್ತು ಅಸತ್ಯದ ಹುಡುಕಾಟದಲ್ಲಿ ಅದು ಚಲನಶೀಲವಾಗುವ ಸಾಧ್ಯತೆಯನ್ನು ಕಳೆದುಕೊಳ್ಳುತ್ತದೆ. ವೈಚಾರಿಕ ನೆಲೆಗಟ್ಟು ಎಂಬುದು ಆತ್ಮಕಥೆಯ ಓದನ್ನು ಸಾಕಷ್ಟು ವಿಸ್ತರಿಸುತ್ತದೆ. ಹೀಗಾಗಿ ಪ್ರಸ್ತುತ ಅಧ್ಯಯನವು 'ಅನುದಿನದ ಅಂತರಗಂಗೆ' ಕೃತಿಯನ್ನು ಒಂದು ವೈಚಾರಿಕ ನೆಲೆಗಟ್ಟಿನಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೩. ಭೂತಕಾಲದ ಅನುಭವಗಳು ವರ್ತಮಾನವನ್ನು ಸಮೃದ್ಧಿಗೊಳಿಸುತ್ತವೆ ಸಹನೀಯಗೊಳಿಸುತ್ತವೆ. ಇದನ್ನು 'ಅನುದಿನದ ಅಂತರಗಂಗೆ' ಆತ್ಮಕಥೆಯ ಮೂಲಕ ವಿಶ್ಲೇಷಣೆಗೆ ಒಳಪಡಿಸಿ ವ್ಯಾಖ್ಯಾನಿಸಲಾಗಿದೆ.

೪. ಮಹಿಳಾ ಆತ್ಮಕಥೆಗಳು ಅನುಭವ, ಅಭಿವ್ಯಕ್ತಿ ಮತ್ತು ನಿರೂಪಣೆಯ ಮೂಲಕ ಸಾಹಿತ್ಯದಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಕುತೂಹಲಕಾರಿಯಾದ ಇಂತಹ ಆತ್ಮಕಥೆಗಳು ಅಪಾರ ಸಂಖ್ಯೆಯ ಓದುಗರಿಂದ ಮೆಚ್ಚುಗೆ ಪಡೆಯುವುದರ ಜೊತೆಗೆ ಮಾದರಿಯಾಗಿರುವುದು ಆತ್ಮಕಥೆಗಳ ಮಹತ್ವವನ್ನು ತಿಳಿಸುತ್ತದೆ. ಮಹಿಳಾ ಅಭಿವ್ಯಕ್ತಿಯನ್ನು ಆತ್ಮಕಥೆಯ ರೂಪದಲ್ಲಿ ಕಂಡ ಪುರುಷವಾದಿ ಸಮಾಜವು ಅದಕ್ಕೆ ಪ್ರತಿಕ್ರಿಯಿಸುವ ರೀತಿ ಅತ್ಯಂತ ಕುತೂಹಲಕಾರಿಯಾದುದು. ಪ್ರತಿಭಾ ನಂದಕುಮಾರ್ ಅವರ 'ಅನುದಿನದ ಅಂತರಗಂಗೆ' ಹೊರಬಂದಾಗ ಅದನ್ನು ಕುರಿತು ನಡೆದ ಚರ್ಚೆಗಳಲ್ಲಿ ಈ ಅಂಶಗಳನ್ನು ಕಾಣಬಹುದು.

೫. ಸಾಂಪ್ರದಾಯಿಕ ವಾತಾವರಣವಿದ್ದರೂ ಪ್ರತಿಭಾ ಅವರು ಸ್ವಚ್ಛಂದ ಹಕ್ಕಿಯಂತೆ ಬೆಳೆದುದರಿಂದ ಯಾವುದೇ ರೀತಿಯ ಶೋಷಣೆ, ವಂಚನೆ, ಅಸಮಾನತೆಗಳಿಗೆ ಒಳಗಾಗಲಿಲ್ಲ. ಇದು ಅವರು ಕುಟುಂಬದಲ್ಲಿ ಹೊಂದಿದ್ದ ಸ್ವಾತಂತ್ರದ ಸಾಕ್ಷಿಯಂತಿದೆ. ಯಾವುದೇ ರೀತಿಯ ಹೆಣ್ಣು-ಗಂಡು ಎಂಬ ಬೇಧವಿಲ್ಲದೆ ಸ್ವೇಚ್ಛೆಯಿಂದ ಇದ್ದುದರಿಂದ ಪ್ರತಿಭಾ ಅವರು ಜೀವನದ ಅನೇಕ ಸಂಕಷ್ಟಗಳನ್ನು ಮೀರಿದ್ದಾರೆ.

೬. ಬಾಲ್ಯ ಮತ್ತು ಯೌವ್ವನದಲ್ಲಿ ತಂದೆ-ತಾಯಿ, ಅಕ್ಕ-ಅಣ್ಣ-ತಮ್ಮಂದಿರೊಂದಿಗಿದ್ದ ಕುಟುಂಬಕ್ಕೂ ಪ್ರತಿಭಾರು ಗಂಡ-ಮಕ್ಕಳೊಂದಿಗಿನ ಕುಟುಂಬಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಬಾಲ್ಯದಿಂದಲೂ ಸ್ವಚ್ಛಂದ ಹಕ್ಕಿಯಂತೆ ಬೆಳೆದ ಅವರಿಗೆ ಅವರದೇ ಕುಟುಂಬದಲ್ಲಿ ಸ್ವಾತಂತ್ರವಿಲ್ಲದಿರುವುದು ಸಹಿಸದ ನೋವಾಗಿ ಕಂಡುಬರುತ್ತದೆ. ಲೌಕಿಕ ವ್ಯವಹಾರದ ನೂರೆಂಟು ತಾಪತ್ರಯಗಳ ಜೊತೆಗೂ ಮಕ್ಕಳನ್ನು ನಿಭಾಯಿಸಿ, ಗಂಡನೊಂದಿಗೆ ಹೊಂದಿಕೊಂಡು ಹೋಗಬೇಕಾದ ಪರಿಸ್ಥಿತಿಗೆ ಅವರು ಸಿಲುಕುತ್ತಾರೆ. ಹೀಗೆ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ ಪ್ರತಿಭಾ ಅವರು ಒರಟು ಕುಟುಂಬದಲ್ಲಿ ಕಷ್ಟಗಳ ಸಾಲನ್ನು ಎದುರಿಸಬೇಕಾದ ಸವಾಲು ಮತ್ತು ಅವರು ಅದನ್ನು ಎದುರಿಸಿದ ಛಲವನ್ನು ಒಟ್ಟಿಗೆ ಕಾಣಬಹುದು.

೭. ಗಂಡ ಯಾವಾಗಲೂ ಹೆಣ್ಣಾದವಳು ತನ್ನ ಅಧೀನದಲ್ಲಿರಬೇಕು ಎಂದು ಬಯಸುವುದು ಬಹಳ ಹಿಂದಿನಿಂದಲೂ ಬಂದಿದೆ. ನಂದಕುಮಾರ್ ಅವರು ಕೂಡ ಇದಕ್ಕೆ ಹೊರತಾದಂತೆ ಕಂಡುಬಂದಿಲ್ಲ. ಇದಕ್ಕೆ ಬಲವಾದ ಕಾರಣ ಅವರಿಗೆ ಹೆಂಡತಿಯ ಮೇಲಿದ್ದ ಅತಿಯಾದ ಪ್ರೀತಿಯೂ ಆಗಿರಬಹುದು. ಅಥವಾ ಪುರುಷ ಪ್ರಧಾನ ಸಮಾಜಕ್ಕೆ ಅವರು ಕೊಟ್ಟ ಮನ್ನಣೆಯೂ ಆಗಿರಬಹುದು. ಆದರೆ ಪ್ರತಿಭಾ ಅವರು ಇದಕ್ಕೆ ತದ್ವಿರುದ್ದವಾಗಿರುವುದನ್ನು ಕಾಣುತ್ತೇವೆ. ತನ್ನ ವೈಯುಕ್ತಿಕ ಸ್ವಾತಂತ್ರಕ್ಕೆ ಅಡ್ಡಿಯಾದಾಗಲೆಲ್ಲ ಪ್ರತಿಭಟಿಸಿರುವುದು ಅವರ ಸ್ವಚ್ಛಂದ ಬದುಕಿನ ಆಸಕ್ತಿಯನ್ನು ತಿಳಿಸುತ್ತದೆ. ಸಂಪ್ರದಾಯಸ್ತ ಹೆಣ್ಣು ಮಗಳಂತೆ ಎಲ್ಲದಕ್ಕೂ ಗಂಡನನ್ನೇ ಅವಲಂಬಿಸಿ ಹೆದರಿ ಬೆದರಿ ನಡೆಯಬೇಕೆಂಬ ನಿಯಮಗಳನ್ನು ಅವರು ಪ್ರಶ್ನಿಸಿದ್ದಾರೆ.

೮. ಪ್ರತಿಭಾ ಅವರದು ಸಂಪ್ರದಾಯಿಕ ನಿಯಮಗಳನ್ನು ದಿಕ್ಕರಿಸಿರುವುದು ಹೆಣ್ಣಿನ ವಾಸ್ತವವಾದದ ಕಲ್ಪನೆಯಂತಿದೆ. ಶತಮಾನಗಳಿಂದಲೂ ಹೆಣ್ಣಾದವಳು ಹುಟ್ಟಿದಾಗ ಅಂದರೆ ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿ, ಯೌವನದಲ್ಲಿ ಗಂಡನ ಆಶ್ರಯದಲ್ಲಿ, ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿ ಇರಬೇಕು. ಅವಳಿಗೆ ಸ್ವಾತಂತ್ರವೆಂಬುದೇ ಇಲ್ಲ. ಅವಳು ಸಬಲೆಯಲ್ಲ, ಅಬಲೆ. ಅವಳು ಒಂಟಿಯಾಗಿ ಸ್ವತಂತ್ರವಾಗಿ ಜೀವಿಸಲು ಅನರ್ಹಳು ಎಂಬ ತಿಳುವಳಿಕೆಯನ್ನು ಪ್ರಶ್ನಿಸುವ ದ್ಯೋತಕವಾಗಿದೆ, ಇಲ್ಲಿನ ಲೇಖಕಿಯ ಧೋರಣೆ.

೯. ಆತ್ಮಕಥೆಯಲ್ಲಿ ಹೆಚ್ಚಿನ ನಿರೂಪಣೆ ಕಂಡು ಬರುವುದು ಆಸ್ಪತ್ರೆಯ ಘಟನಾವಳಿಗಳು. ಅದರಲ್ಲೂ ನಂದಾ ಅವರಿಗೆ ಕಾಯಿಲೆಯಾದಾಗ ಪ್ರತಿಭಾ ಅದನ್ನು ನಿಭಾಯಿಸಿದ ರೀತಿಯು

ತುಂಬಾ ಚಿತ್ರಿತವಾಗಿದೆ. ಹಣವಿಲ್ಲದೆ ಅವರು ಎದುರಿಸಿದ ಕಷ್ಟಗಳು ಮನಮುಟ್ಟುವಂತೆ ಚಿತ್ರಿತವಾಗಿವೆ. ಹಾಗೆಯೇ 'ಸಾವಿತ್ರಿಯಂತೆ ಗಂಡನನ್ನು ಉಳಿಸಿಕೊಂಡಳು' ಇವಳು ಸಾವಿತ್ರಿ ಎಂಬ ಬಿರುದನ್ನು ಸ್ವಾಮೀಜಿ ಯವರಿಂದ ಪಡೆದದ್ದನ್ನು ಗಮನಿಸಿದಾಗ, ಹೆಣ್ಣು ಗಂಡ ಎಷ್ಟೇ ಕ್ರೂರಿಯಾಗಿದ್ದರೂ, ಕಷ್ಟ ಕೊಟ್ಟರೂ, ಪ್ರೀತಿಯೆಂಬುದು ಇದ್ದೇ ಇರುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ. ಪ್ರತಿಭಾರ ಪ್ರಮುಖ ಉದ್ದೇಶ ಗಂಡನನ್ನು ತಿರಸ್ಕರಿಸುವುದಾಗಿರದೆ ಆತನಲ್ಲಿರುವ ಪುರುಷವಾದಿ ಧೋರಣೆಯನ್ನು ಬದಲಾಯಿಸುವುದೇ ಆಗಿದೆ. ಬದಲಾಗಿ ಪ್ರೀತಿಯನ್ನು ಪಡೆಯುವುದೂ ಪ್ರಮುಖ ಉದ್ಧೇಶವಾಗಿದೆ.

೧೦. ವೈವಾಹಿಕ ಸಂಬಂಧಕ್ಕೆ ಸಮಾಜದಲ್ಲಿ ಅದರದೇ ಆದ ಚೌಕಟ್ಟಿದೆ. ಆ ಚೌಕಟ್ಟನ್ನು ಮೀರಿದಾಗ ಅದು 'ಹಾದರ' ಎನಿಸಿಕೊಳ್ಳುವ ಅಪಾಯ ಒದಗಿಬರುತ್ತದೆ. ಪ್ರತಿಭಾ ಅವರು ಬಯಸಿದ ಪ್ರೀತಿಯನ್ನು ಹುಡುಕುತ್ತಾ, ಅದು ಪವಿತ್ರವಾದ ಪ್ರೀತಿಯೇ ಹೊರತು ಹಾದರ ಅಲ್ಲ ಎಂದು ಬಿಂಬಿಸಿದ್ದಾರೆ. ಅವರ ನಿರೂಪಣೆಯೇ ಇದನ್ನು ದೃಢಪಡಿಸುತ್ತದೆ. ವೈವಾಹಿಕ ಸಂಗಾತಿಗಳನ್ನು ಬಿಟ್ಟು ಇನ್ನೊಬ್ಬರೊಂದಿಗೆ ಇರುವುದಕ್ಕೆ ವಾಸ್ತವ ಸಮಾಜದಲ್ಲಿ ಅನೇಕ ಕಡಿವಾಣಗಳು, ಸಂಪ್ರದಾಯಗಳು, ಅಡಚಣೆಗಳು, ನಿಬಂಧನೆಗಳು ಇತ್ಯಾದಿ ಅಡ್ಡಬರುತ್ತವೆ. ಆದರೆ ಅದು ಪರಸ್ಪರರ ನಡುವೆ ನಡೆಯುವ ಸಂಪೂರ್ಣ ವೈಯಕ್ತಿಕ ವಿಷಯವಾದಾಗ ಇಂಥ ವಿಷಯಗಳು ಪ್ರಮುಖವಾಗುವುದಿಲ್ಲ.

೧೧. ಪ್ರತಿಭಾ ಅವರ ಹುಡುಕಾಟ ನಿರಂತರವಾಗಿ ಮುಂದುವರಿದಿದೆ. ಕೊನೆಯಲ್ಲಿ ಅವರೇ ಹೇಳುವಂತೆ "ನಾನು ಬಯಸಿದ ಪ್ರೀತಿ ಬೇರೆ ಎಲ್ಲೆಲ್ಲೂ ಸಿಗದೆ, ಪ್ರೀತಿ ಹರಸಿ ಹೋಗುವುದು ಎಷ್ಟು ಮೂರ್ಖತನ. ಕೊನೆಗೆ ಎಲ್ಲರೂ ಒಂಟಿಯೇ. ಯಾರಿಗೂ ಪರಿಪೂರ್ಣ ಪ್ರೀತಿ ಸಿಗುವುದಿಲ್ಲ. ಸಿಕ್ಕರೆ ಅಂತಹವರು ಪುಣ್ಯವಂತರು. ಇವನ ಪ್ರೀತಿ ಬಹಳ ವಿಚಿತ್ರ, ಅವನೂ ನನ್ನಂತೆಯೇ, ಆದರೆ ಅವನು ನನ್ನ ಹಾಗೆ ಪ್ರೀತಿಯನ್ನು ಹುಡುಕಿಕೊಂಡು ಅಲೆಯಲಿಲ್ಲ. ಏನಾದರೂ ಅವನಿಗೆ ನಾನು ಮತ್ತು ಮಕ್ಕಳೇ ಸರ್ವಸ್ವ, ಅವನಿಗಿರುವ ಸಂತೃಪ್ತಿ ನನಗೇಕಿಲ್ಲ? ಎಂಬ ಆತ್ಮವಿಮರ್ಶಕ ಮಾತುಗಳನ್ನು ಪ್ರತಿಭಾ ಅವರು ಆಡುವುದನ್ನು ಗಮನಿಸಿದರೆ ಪ್ರೀತಿ ಎಂಬುದು ಪ್ರತಿಯೊಬ್ಬರಲ್ಲಿಯೂ ಭಿನ್ನವಾದುದಾಗಿರುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ. ಅಲ್ಲದೆ ಪ್ರತಿಭಾ ಅವರು ಬಯಸಿದ ಪ್ರೀತಿ ಸಂಪೂರ್ಣ ಭಿನ್ನವಾಗಿರುವುದು ಕಂಡುಬರುತ್ತದೆ.

೧೨. ಬಾಲ್ಯದಲ್ಲಿ ಸಿಕ್ಕಂತಹ ಸ್ವೇಚ್ಚೆಯನ್ನು ತಾರುಣ್ಯದಲ್ಲಿ ನೆನಪಿಸಿಕೊಳ್ಳುವುದು ಸಾಮಾನ್ಯ ಸಂಗತಿ. ಹಾಗೆಯೇ ಆ ಸಂತೋಷವನ್ನು ಮಕ್ಕಳಲ್ಲಿ ಕಾಣುವುದೂ ಕೂಡ ಅದರ ಒಂದು ಭಾಗವೇ ಆಗಿರುತ್ತದೆ. ಈ ಆತ್ಮಕಥನದಲ್ಲಿ ಪ್ರತಿಭಾ ಅವರು ಬಾಲ್ಯದಲ್ಲಿ ಕಂಡ ಕನಸನ್ನು ಅವರ ಮಕ್ಕಳ ಮೂಲಕ ನನಸಾಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ರೇಷ್ಮೆ ಲಂಗವನ್ನು ಜೀವನದಲ್ಲಿ ಒಮ್ಮೆಯಾದರೂ ಹಾಕಿಕೊಳ್ಳಬೇಕೆಂಬ ಕನಸು ಈಡೇರದೆ ಇದ್ದಾಗ, ಮಗಳಿಗೆ ವರ್ಷಕ್ಕೆ ಒಂದು ರೇಷ್ಮೆ ಲಂಗವನ್ನು ಹೊಲಿಸುತ್ತಾರೆ. ಹಾಗೆಯೇ ತಾನು ಅತೀ ಸುಂದರಿಯಾಗಿಲ್ಲ ಎಂಬ ಕೊರಗನ್ನು ಮಗಳಿಗೆ ಅಲಂಕಾರ ಮಾಡಿ ನೋಡುವುದರ ಮೂಲಕ ನೀಗಿಸಿಕೊಳ್ಳುತ್ತಾರೆ. ಇವು

ಬಾಲ್ಯದಲ್ಲಿ ಕಂಡ ಕನಸನ್ನು ಮಕ್ಕಳ ಮೂಲಕ ಪಡೆದುಕೊಳ್ಳುವ ಪರ್ಯಾಯಗಳಾಗಿವೆ. ಇಂತಹ ಪರ್ಯಾಯಗಳೇ ಇರುವ ನೋವನ್ನು ಮರೆಸುವ ಮತ್ತು ಸಂತೋಷವನ್ನು ಕಾಣುವ ಮಾರ್ಗವಾಗಿರುತ್ತವೆ.

೧೩. ಕಾಲೇಜು ದಿನಗಳಲ್ಲಿ 'ಮೇಷ್ಟ್ರು' ಬಗ್ಗೆ ಇದ್ದ ಅಭಿಮಾನ, ಪ್ರೀತಿಯನ್ನು ಅವರು ಗುರುತಿಸದೇ ಹೋದ ಸಂದರ್ಭ ಮತ್ತು ಹಾಗೆಯೇ ಪ್ರತಿಭಾ ಅವರು ಅದನ್ನು ಧೈರ್ಯವಾಗಿ ಹೇಳಲಾಗದ ಸಂದರ್ಭಗಳಲ್ಲಿ ಭಾವನೆಗಳನ್ನು ಬರವಣಿಗೆಯ ಮೂಲಕ ಹೊರಹಾಕುವುದು ಸಾಮಾನ್ಯವಾದ ಸಂಗತಿಯಂತೆ ತೋರುತ್ತದೆ. ಆ ಭಾವನೆಗಳು ಕವನಗಳಲ್ಲಿ ವ್ಯಕ್ತವಾಗಿವೆ. ಪ್ರತಿಭಾ ಅವರು ಬರವಣಿಗೆಯನ್ನು ತಮ್ಮ ನೋವಿನ ಬಿಡಗಡೆಗೆ ಇರುವ ದಾರಿ ಎಂದು ಭಾವಿಸಿದ್ದಾರೆ. ಅದು ನಿಜವೂ ಕೂಡ ಆಗಿದೆ. ಅನೇಕ ಜನ ತಮ್ಮ ನೋವುಗಳನ್ನು ಬರವಣಿಗೆಯ ಮೂಲಕ ಮರೆಯುವ ಪ್ರಯತ್ನವನ್ನು ಮಾಡಿದ್ದಾರೆ ಮತ್ತು ಅದರಲ್ಲಿ ಸಫಲವೂ ಆಗಿದ್ದಾರೆ. ಇದನ್ನು ಪ್ರತಿಭಾ ಅವರ ಜೀವನದಲ್ಲಿಯೂ ಕಾಣಬಹುದು.

೧೪. ಸಾಹಿತ್ಯ ಲೋಕದೊಂದಿಗೆ ನಂಟನ್ನು ಹೊಂದಿದ್ದ ಪ್ರತಿಭಾ ಬರವಣಿಗೆಯ ಮೂಲಕ ಹಲವಾರು ಸ್ನೇಹಿತರನ್ನು ಪಡೆಯುವುದರ ಜೊತೆಗೆ ಓದುಗರಿಂದ ಹಲವು ರೀತಿಯ ಮೆಚ್ಚುಗೆಗಳನ್ನೂ ಪಡೆದವರು. ಅಂದರೆ ಸಾಹಿತ್ಯ ಲೋಕದಲ್ಲಿನ ಬರಹಗಾರರು ಮತ್ತು ಓದುಗ ವರ್ಗದಿಂದ ಅಪಾರ ಪ್ರೀತಿಯನ್ನು ಮತ್ತು ಮೆಚ್ಚುಗೆಯನ್ನು ಪಡೆದವರು. ಆದರೆ ಸಾಹಿತ್ಯ ಲೋಕದ ನಿಜವಾದ 'ಬಣ್ಣ'ವು ಅವರು ದೇಹ ಸುಟ್ಟು ಆಸ್ಪತ್ರೆಯಲ್ಲಿದ್ದಾಗ ಬಯಲಾಗುತ್ತದೆ. ಅವರು ಕೆಲಸ ಮಾಡುತ್ತದ್ದ ಫ್ಯಾಕ್ಟರಿ ಸಹೋದ್ಯೋಗಿಗಳು, ತೀರ ಹತ್ತಿರದ ಗೆಳೆಯರು ಎಲ್ಲರೂ ಬಂದು ಭೇಟಿಮಾಡಿ ಯೋಗಕ್ಷೇಮವನ್ನು ವಿಚಾರಿಸಿ ಹೋಗುತ್ತಾರೆ. ಇದನ್ನು ಬಿಟ್ಟರೆ, ಸಾಹಿತ್ಯಲೋಕದ ಆತ್ಮೀಯರು ಯಾರೂ ಅತ್ತ ಸುಳಿಯುವುದೂ ಇಲ್ಲ. ಇದು ಪ್ರತಿಭಾ ಅವರ ವಿಷಾದಕ್ಕೆ ಕಾರಣವಾಗುತ್ತದೆ. ಅಲ್ಲಿಯವರೆಗೂ ಅವರು ಮಾಡಿದ ಪತ್ರ ವ್ಯವಹಾರ ಬರೀ ಬರವಣಿಗೆಗೆ ಮಾತ್ರ ಸೀಮಿತ ಎಂಬ ವಾಸ್ತವ ಸಂಗತಿ ಅವರ ಗಮನಕ್ಕೆ ಬರುತ್ತದೆ.

೧೫. ಬಾಲ್ಯದಿಂದಲೂ ಕುರೂಪಿ ಎಂಬ ಮನೋಭಾವ ತಳೆದಿದ್ದ ಪ್ರತಿಭಾರಿಗೆ ಅವರ ಪ್ರೀತಿಯನ್ನು ಸ್ವೀಕರಿಸುವವರು ಯಾರೂ ಇಲ್ಲ ಎಂಬ ಭಾವನೆ ಕಾಡಿರುವುದು ನಿಜ. ತಾರುಣ್ಯಕ್ಕೆ ಕಾಲಿಡುತ್ತಿದ್ದಂತೆ ಪ್ರೀತಿಯನ್ನು ಹಂಚಿಕೆ ಮಾಡಿಕೊಳ್ಳುವ ಸಲುವಾಗಿ ಹುಡುಕಾಟ ಪ್ರಾರಂಭವಾಗುವುದನ್ನು ಅವರ ಜೀವನದಲ್ಲಿ ಕಾಣಬಹುದು. "ಪ್ರೀತಿ ಅಪಾತ್ರನಿಗೆ ದಾನವಾಗಬಾರದು. ಯಾರು ನನ್ನನ್ನು ಗಾಢವಾಗಿ ಪ್ರೀತಿಸುತ್ತಾರೋ ಅವರನ್ನೇ ನಾನು ಪ್ರೀತಿಸಬೇಕು. ಇಲ್ಲದಿದ್ದರೆ ಕೊನೆಯವರೆಗೂ ಈ ಹಪಾಹಪಿ ಮುಗಿಯವುದಿಲ್ಲ. ಇನ್ನು ಮುಂದೆ ಪ್ರೀತಿ ಕೊಡುವುದಿಲ್ಲ, ಪಡೆಯುತ್ತೇನೆ ಎಂದು ಪ್ರತಿಜ್ಞೆ ಮಾಡಿದೆ" ಎಂಬ ಅವರ ಮಾತಿನಲ್ಲಿ ಪ್ರೀತಿಯ ಬಗ್ಗೆ ಅವರು ಹೊಂದಿದ್ದ ಧೋರಣೆಯನ್ನು ಕಾಣಬಹುದು. ಅದು ತೀವ್ರವಾದ ಪ್ರೀತಿಯ ಹುಡುಕಾಟದಲ್ಲಿ ಸೋತು ನೊಂದು ನುಡಿದ

ಮಾತಿನಂತೆ ಕಾಣುತ್ತದೆ. ಆ ತೀವ್ರತೆ ಅವರು ಪ್ರೀತಿಯನ್ನು ಕೊಡುವಲ್ಲಿಗೆ ಮುಗಿಯುವುದಿಲ್ಲ ಬದಲಾಗಿ ಇನ್ನು ಮುಂದೆ ಪಡೆಯುವ ಸಲುವಾಗಿ ಮುಂದುವರೆಯುತ್ತದೆ. ಅಂದರೆ ಅವರ ಪ್ರೀತಿಯ ಹುಡುಕಾಟ ಎಂಬುದು ಎಂದೂ ನಿಲ್ಲದ ಒಂದು ನಿರಂತರ ಪ್ರಕ್ರಿಯೆ ಎಂಬುದನ್ನು ಇಲ್ಲಿ ಗಮನಿಸಬಹುದು.

೧೬. ಪ್ರತಿಭಾ ಅವರಿಗೆ ಪ್ರೀತಿಯಲ್ಲಿ 'ಪರಮ ಪತಿವ್ರತೆ' ಆಗುವುದು ಬೇಕಿರಲಿಲ್ಲ. ಸಾವಿತ್ರಿ ಆಗುವುದೂ ಬೇಕಿರಲಿಲ್ಲ. ಅವರ ಹಂಬಲ ಕೇವಲ ಪರಿಪೂರ್ಣ ಪ್ರೀತಿಯನ್ನು ಪಡೆಯುವುದಷ್ಟೆ ಆಗಿದೆ. ಅದಕ್ಕಾಗಿ 'ನಾನೊಬ್ಬಳು ಸಾಮಾನ್ಯ ಹೆಣ್ಣಿನಂತೆ ಪ್ರೀತಿ ಬಯಸಿದ್ದೆ' ಎಂದು ಅವರೇ ಹೇಳಿಕೊಂಡಿದ್ದಾರೆ. ಹೀಗೆ ಹೇಳುವ ಮೂಲಕ ಆಧುನಿಕ ಮಹಿಳೆಯು ಪುರಾಣದ ಈ ರೀತಿಯ ಕಾಲ್ಪನಿಕ ಪಾತ್ರಗಳನ್ನು ಅನುಮಾನದಿಂದಲೇ ನೋಡುವ ಧೋರಣೆಯನ್ನು ನೋಡಬಹುದು. ಈ ಪುರಾಣದ ಪಾತ್ರಗಳು ಸುಮ್ಮನೆ ಹಾಗೆ ಬಂದು ಹೀಗೆ ಹೋದರೂ ಅವು ಕಟು ವಿಮರ್ಶೆಗೆ ಒಳಗಾಗಿರುವುದನ್ನು ನಾವು ನೋಡಬಹುದು. ಅದಕ್ಕಾಗಿ ಅವರು ಆ ರೀತಿಯ 'ನೈತಿಕ' ಕಟ್ಟಳೆಯಲ್ಲಿ ಸಿಕ್ಕು ಒದ್ದಾಡುವ ಪಾತ್ರಗಳೊಂದಿಗೆ ತಮ್ಮನ್ನು ಯಾವತ್ತೂ ಹೋಲಿಸಿಕೊಳ್ಳಲು ಇಷ್ಟಪಡುವುದಿಲ್ಲ. ಅದನ್ನು ಮೀರಿದ ನಿಜವಾದ ಮಾನವ ಪ್ರೀತಿಯನ್ನು ಅವರು ಶೋಧಿಸುತ್ತಾರೆ.

೧೭. ಇಂತಹ ಪ್ರೀತಿಯನ್ನು ಬಯಸಿದ ಪ್ರತಿಭಾ ಅವರಿಗೆ ಅವರು ಬಯಸಿದ ಈ ರೀತಿಯ ಪ್ರೀತಿಯನ್ನು ಯಾರೂ ಕೊಡದಿರುವುದು ವಿಷಾದದ ಸಂಗತಿಯಾಗಿದೆ. ಎಲ್ಲರೂ ಇಡಿಯಾಗಿ ಗ್ರಹಿಸಿ ಅವರಿಗೆ ಬೇಕಾದ ಹಾಗೆ ಅವರ ಪ್ರೀತಿಯನ್ನು ದುರುಪಯೋಗ ಪಡಿಸಿಕೊಳ್ಳುವ ಮನೋಭಾವ ಹೊಂದಿದವರೇ ಹೆಚ್ಚು. ಇದರಿಂದಾಗಿ ಪ್ರತಿಭಾ ಅವರ ಪ್ರೀತಿಯ ಹುಡುಕಾಟಕ್ಕೆ ಕೊನೆಯೇ ಇಲ್ಲದಂತಾಗಿದೆ. ಸಂಪೂರ್ಣ ಪ್ರೀತಿ ಪಡೆಯಲು ಸದಾ ಹಾತೊರೆಯುತ್ತಾರೆ.

❑❑❑

ಆಕರಸೂಚಿ

ಮೂಲ ಪಠ್ಯ

❖ ಪ್ರತಿಭಾ ನಂದಕುಮಾರ್, 'ಅನುದಿನದ ಅಂತರಗಂಗೆ', ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೨

ಪೂರಕ ಪಠ್ಯಗಳು

೧ ಅನುಪಮ ನಿರಂಜನ, 'ನೆನಪು ಸಿಹಿ–ಕಹಿ', ಡಿವಿಕೆ ಮೂರ್ತಿ, ಮೈಸೂರು, ೧೯೮೫

೨ ಅನ್ನಪೂರ್ಣ ಸಾಗರ, ನನ್ನ 'ಬದುಕಿನ ಪುಟಗಳಿಂದ', ಶ್ರೀ ಸಂಗಮೇಶ್ವರ ಮಹಿಳಾ ಮಂಡಳಿ, ಗುಲಬರ್ಗ, ೨೦೦೭

೩ ಅಮೃತ ಪ್ರೀತಂ, 'ರಸೀದಿ ಟಿಕೇಟು', ಅನು: ಹಸನ ನಯೀಮ ಸುರಕೋಡ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫

೪ ಇಂದಿರಾ ಶಿವಣ್ಣ, ಕೆ.ಆರ್. ಸಂಧ್ಯಾರೆಡ್ಡಿ (ಸಂ.), 'ಎಪ್ಪತ್ತು ವಯಸ್ಸು ಇಪ್ಪತ್ತರ ಮನಸ್ಸು', ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೨೦೦೫

೫ ಉಷಾ ಪಿ.ರೈ. ಸಂಧ್ಯಾರೆಡ್ಡಿ (ಸಂ.), 'ಲೇಖಾ–ಲೋಕ' ಸಂಕಲನ.೩, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೨೦೦೧

೬ ಕಮಲಾ ಸುರಯ್ಯಾ, 'ಬಾಲ್ಯದ ನೆನಪುಗಳು', ಅನುವಾದ: ನಾ.ದಾಮೋದರ ಶೆಟ್ಟಿ, ಎನ್.ಬಿ.ಟಿ., ದೆಹಲಿ, ೨೦೦೧

೭ ಗೋದಾವರಿ ಪುರುಳೇಕರ್, 'ಮಾನವ ಎಚ್ಚೆತ್ತಾಗ', ಅನು: ಸರಸ್ವತಿ ರಿಸಬೂಡ, ಅಧ್ಯಯನ ಪ್ರಕಾಶನ, ಶಿರಸಿ, ೨೦೦೦

೮ ಚಿಂದೋಡಿ ಲೀಲಾ, 'ಸ್ವಗತ', ಚಿಂದೋಡಿ ಲೀಲಾ, ಗುಡಿಹಳ್ಳಿ ನಾಗರಾಜ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ೧೯೯೯

೯ ಜಯಮ್ಮ ಬಿ, 'ಅಭಿನೇತ್ರಿ'., ನಿರೂ: ಶೇಷಗಿರಿ ರಾವ್, ಕಲಾಸಾಹಿತ್ಯ ಪ್ರಕಾಶನ, ಬೆಂಗಳೂರು, ೧೯೨೯

೧೦ ತಾರಿಣಿ, 'ಮಗಳು ಕಂಡ ಕುವೆಂಪು', ಪತ್ರಿಕೆ ಪ್ರಕಾಶನ, ಮೈಸೂರು, ೨೦೦೯

೧೧ ನಾಗರತ್ನಮ್ಮ ಕೆ., 'ಮರಿಯಮ್ಮನ ಹಳ್ಳಿಯ ರಂಗಸಿರಿ', ನಿರೂಪಣೆ: ಗುಡಿಹಳ್ಳಿ ನಾಗರಾಜ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೨ ನೀಲಾ ಕೆ., 'ಬದುಕು ಬಂದೀಖಾನೆ', ಅಖಿಲ ಭಾರತ ಜನವಾದಿ ಸಂಘಟನೆ, ಬೆಂಗಳೂರು, ೨೦೦೧

೧೩ ಪ್ರತಿಮಾ ಬೇಡಿ, 'ಟೈಮ್ ಪಾಸ್', ಅನುವಾದ: ರವಿ ಬೆಳಗೆರೆ, ಭಾವನಾ ಪ್ರಕಾಶನ, ಬೆಂಗಳೂರು, ೧೯೯೯

೧೪ ಮಳವಳ್ಳಿ ಸುಂದರಮ್ಮ, 'ಅಭಿನವ ವಿಶಾರದೆ', ಕಲಾ ಸಾಹಿತ್ಯ ಪ್ರಕಾಶನ, ಬೆಂಗಳೂರು, ೧೬೭೫

೧೫ ಮಾಧವಿ ದೇಸಾಯಿ, 'ಕುಣಿಯೇ ಘುಮಾ', ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೭

೧೬ ವಾಸಂತಿ ಪಡುಕೋಣೆ, 'ಜೀವನ ಹೋರಾಟ', ಸಾಹಿತ್ಯದೂತ, ಬೆಂಗಳೂರು, ೧೯೭೭

೧೭ ಲೀಲಾಕಾರಂತ, 'ಸ್ವಾಮಿ ಮತ್ತು ನಾನು, ಇತ್ಯಾದಿ ಬರಹಗಳು', ಲೀಲಾಕಾರಂತ, ನೆನಪಿನ ಸಂಪುಟ

೧೮ ಶಾಂತ ಕುಮಾರಿ, ಎಲ್.ಪಿ., 'ನೆನಪು ಗರಿ ಬಿಚ್ಚಿದಾಗ', ಅನಿಕೇತನ ಪ್ರಕಾಶನ, ತುಮಕೂರು, ೨೦೦೨

೧೯ ಶಾರದಾ ಗೋಕಕ್, 'ಒಲವೇ ನಮ್ಮ ಬದುಕು', ಸುರುಚಿ ಪ್ರಕಾಶನ ಮೈಸೂರು, ೧೯೭೭

೨೦ ಶಾರದಾ ಹುಬ್ಬಿಕರ್, 'ನಾಳಿನ ಚಿಂತ್ಯಾಕ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨೧ ಸರಸ್ವತಿ ದು., 'ಈಗೇನ್ಮಾಡಿರಿ?' ಮಾನಸ ಪ್ರಕಾಶನ ಬೆಂಗಳೂರು, ೨೦೦೦

೨೨ ಸಾರಾ ಅಬುಬಕರ್, 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು', (ಚಂದ್ರಗಿರಿ ತೀರದಲ್ಲಿ, ಕಾದಂಬರಿಯಲ್ಲಿ) ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೮೪

೨೩ ಸುನೀತಾ ದೇಶಪಾಂಡೆ, 'ಬಾಳು ಸೊಗಸಾದರೂ', ಅನುವಾದ: ಉಮಾ ಕುಲಕರ್ಣಿ, ಧಾರವಾಡ ಮಹಿಳಾ ಸಾಹಿತ್ಯಿಕಾ ಹುಬ್ಬಳ್ಳಿ, ೨೦೦೩

ಪರಾಮರ್ಶನ ಗ್ರಂಥಗಳು

೧ ಪಾರ್ವತಮ್ಮ ಮಾಲಿಂಗಶೆಟ್ಟಿ, 'ಹೆಣ್ಣಿನ ದೃಷ್ಟಿಯಲ್ಲಿ ಈ ಶತಮಾನ', ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು ಬಾಮ, ಅನು: ಎಸ್ ಪ್ಲೋಮಿನ್ ದಾಸ್, ೨೦೦೯, ಸಂಗತಿ, ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು, ೧೯೯೮

೨ ಪುಟ್ಟಯ್ಯ ಬಿ.ಎಂ., 'ಆತ್ಮಕತೆಗಳಲ್ಲಿ ಕರ್ನಾಟಕದ ಕಥೆ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩ ರಹಮತ್ ತರೀಕೆರೆ, 'ನೇತುಬಿದ್ದ ನವಿಲು', ಲಂಕೇಶ ಪ್ರಕಾಶನ, ಬೆಂಗಳೂರು, ೨೦೧೨

೪ ವೀಣಾ ಶಾಂತೇಶ್ವರ್ ಎನ್.ಬಿ., ಚಂದ್ರಮೋಹನ್ ಹೆಚ್.ಎಸ್. ರಾಘವೇಂದ್ರ ರಾವ್ (ಸಂ), 'ಅನಿಕೇತನ', ಕರ್ನಾಟಕ ಅಕಾಡೆಮಿ, ಬೆಂಗಳೂರು.

೫ ಸಬಿಹಾ ಭೂಮಿಗೌಡ, (ಸಂ.) 'ಮಹಿಳಾ ಆತ್ಮಕತೆಗಳು; ಅನುಸಂಧಾನ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೨

೬ ಸಬಿಹಾ ಭೂಮಿಗೌಡ, 'ಮಹಿಳಾ ಸಾಹಿತ್ಯ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೯

❑❑❑